

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 26 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 278 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈತ್ರಿಕೂಟ ಅಧಿಕಾರಕ್ಕೆ ಬರಲ್ಲ, ಬಂದರೂ ಜೆಡಿಎಸ್‌ಗೆ ಸಿಎಂ ಸ್ಥಾನ ಸಿಗಲ್ಲ

- ಅಧಿಕಾರಕ್ಕೆ ಬರುತ್ತೇವೆಂದು ರಾಜಕೀಯ ಭಾಷಣ ಮಾಡುತ್ತಾರಷ್ಟೆ
- 17 ಸ್ಥಾನ ಪಡೆದವರಿಗೆ ಅಧಿಕಾರ ಸಿಗುತ್ತಾ?
- ಮುಂದಿನ ಚುನಾವಣೆಯಲ್ಲಿ ನಾನು ಸಿಎಂ ಆಗುವ ಬಗ್ಗೆ ವರಿಷ್ಠರು ನಿರ್ಧರಿಸುತ್ತಾರೆ

ಮೈಸೂರು,ಜ.25(ಬಿಎಲ್‌ಎಂ)– ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಕೂಟಕ್ಕೆ ಬಹುಮತ ಬರುವುದಿಲ್ಲ. ಒಂದು ವೇಳೆ ಬಹುಮತ ಬಂದರೂ ಜೆಡಿಎಸ್‌ಗೆ ಮುಖ್ಯ ಮಂತ್ರಿ ಸ್ಥಾನ ಕೊಡುವುದಿಲ್ಲ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಭವಿಷ್ಯ ನುಡಿದಿದ್ದಾರೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾವು ಅಧಿಕಾರಕ್ಕೆ ಬರುತ್ತೇವೆ ಎಂದು ರಾಜಕೀಯ ಭಾಷಣ ಮಾಡುತ್ತಾರಷ್ಟೆ ಎಂದು ಗೇಲಿ ಮಾಡಿದರು.

ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ಕಾರಣ ಅಧಿಕಾರಕ್ಕೆ ಬರಬಹುದು ಎಂದುಕೊಂಡಿದ್ದಾರೆ. ಆದರೆ ಬಹುಮತ ಬಂದರೆ ಬಿಜೆಪಿಯವರು ಯಾಕೆ ಇವರಿಗೆ ಅಧಿಕಾರ ಬಿಟ್ಟುಕೊಡುತ್ತಾರೆ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಇದರಿಂದ ಜೆಡಿಎಸ್‌ನವರ ಲೆಕ್ಕಾಚಾರ ತಲೆಕೆಳಗಾಗುತ್ತದೆ ಎಂದರು.

ನಾನು ಜೆಡಿಎಸ್ ರಾಜ್ಯಾಧ್ಯಕ್ಷನಾಗಿದ್ದಾಗ 54 ಸ್ಥಾನ ಬಂದಿತ್ತು ಆದರೆ ಈಗ 17 ಸ್ಥಾನಕ್ಕೆ ಕುಸಿದಿದೆ. ಇಷ್ಟು ಕಡಿಮೆ ಸ್ಥಾನ ಪಡೆಯುವರಿಗೆ ಅಧಿಕಾರ ಹೇಗೆ ಸಿಗುತ್ತದೆ ಎಂದು ಮರು ಪ್ರಶ್ನಿಸಿದ ಅವರು, ಯಾರು ಏನೇ ಹೇಳಿದರೂ 2028ರ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರುತ್ತದೆ. ಇದರಲ್ಲಿ ಯಾವುದೇ ಸಂದೇಹ ಬೇಡ. ಹಾಗಾದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನೀವೇ ಮುಖ್ಯಮಂತ್ರಿ ಆಗುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಅದನ್ನು ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು. ▶ 6ನೇ ಪುಟಕ್ಕೆ



ಮೈಸೂರಿನ ವಿಮಾನ ನಿಲ್ದಾಣದಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭವಿಷ್ಯ

“ಜೆಡಿಎಸ್‌ನವರು ಆರೋಪ ಮಾಡಿದಂತೆ ಶಾಸಕ ಹೆಚ್.ಡಿ.ರೇವಣ್ಣ ಅವರ ಬಂಧನದಲ್ಲಿ ನಮ್ಮ ಕೈವಾಡವಿಲ್ಲ. ನಾವು ಯಾವತ್ತೂ ಯಾರ ಪ್ರಕರಣದಲ್ಲೂ ತಲೆ ಹಾಕುವುದಿಲ್ಲ. ರೇವಣ್ಣ ಅವರ ಬಂಧನ ಕುರಿತಂತೆ ಪೊಲೀಸರು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದಾರೆ. ಇದರಲ್ಲಿ ನಮ್ಮ ಹಸ್ತಕ್ಷೇಪ ಇರಲಿಲ್ಲ. ಆದರೆ ಜೆಡಿಎಸ್‌ನವರು ಸುಮ್ಮನೆ ಏನೇನೊ ಸುಳ್ಳು ಹೇಳುತ್ತಾರೆ. ನಾನೇಕೆ ರೇವಣ್ಣ ಅವರನ್ನು ದ್ವೇಷಿಸಲಿ. ಅವರನ್ನು ಬಂಧಿಸಿದ ಪೊಲೀಸರಿಗೆ ಇನಾಂ ನೀಡಿದ್ದೇವೆಂಬ ಆಪಾದನೆ ಕೂಡ ಶುದ್ಧ ಸುಳ್ಳು. –ಸಿದ್ದರಾಮಯ್ಯ, ಸಿಎಂ

ಕಾಂಗ್ರೆಸ್ ಸರ್ಕಾರದ ಆಯಸ್ಸು ಇನ್ನೆರಡೇ ವರ್ಷ; 2028ಕ್ಕೆ ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ

- ಕೇಂದ್ರ ಸಚಿವ ಕುಮಾರಸ್ವಾಮಿ ಶಪಥ
- ರಾಮನಗರದಿಂದ ನನ್ನ ಓಡಿಸಲು ಯಾರಿಂದಲೂ ಆಗಲ್ಲ

ರಾಮನಗರ: ಈ ಸರ್ಕಾರದ ಆಯಸ್ಸು ಎರಡು ವರ್ಷ ಮಾತ್ರ. 2028ಕ್ಕೆ ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಶಪಥ ಮಾಡಿದ್ದಾರೆ.



ರಾಮನಗರದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ಜೆಡಿಎಸ್ ಅಧಿಕಾರಕ್ಕೆ ಬರಲ್ಲ ಎಂಬ ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದರು. 2018ರಲ್ಲಿ ಸಿದ್ದರಾಮಯ್ಯ ಅವರಪ್ಪರಾಣೆ ಹೆಚ್‌ಡಿಕೆ ಸಿಎಂ ಆಗಲ್ಲ ಎಂದಿದ್ದರು. ಆಮೇಲೆ ನಮ್ಮ ಮನೆ ಬಾಗಿಲಿಗೆ ಬಂದಿದ್ದರು. ಕಾಂಗ್ರೆಸ್ ಸರ್ಕಾರದ ಆಯಸ್ಸು 2 ವರ್ಷ ಮಾತ್ರ, 2028ಕ್ಕೆ ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ. ನನಗೆ ಸಿಎಂ ಆಗೋದು ಮುಖ್ಯವಲ್ಲ. ನಾಡಿನಲ್ಲಿ ಜನತೆಯ ಸರ್ಕಾರ ತರೋದು ಮುಖ್ಯ ಎಂದು ಟಾಂಗ್ ನೀಡಿದರು.

ರಾಮನಗರದಿಂದ ನನ್ನನ್ನು ಯಾರಿಂದಲೂ ಓಡಿಸಲು ಆಗಲ್ಲ. ರಾಮನಗರದ ಜನ ನನ್ನನ್ನು ಮನೆ ಮಗನಾಗಿ ಸ್ವೀಕಾರ ಮಾಡಿ, 4 ಚುನಾವಣೆಯಲ್ಲಿ ಅವರೇ ಚುನಾವಣೆ ನಡೆಸಿ ಗೆಲ್ಲಿಸಿದ್ದರು. ▶ 6ನೇ ಪುಟಕ್ಕೆ

ದೇಶದ ಅತ್ಯುನ್ನತ ನಾಗರಿಕ ಗೌರವ ‘ಪದ್ಮ ಪ್ರಶಸ್ತಿ’ ಪ್ರಕಟ

ಮಂಡ್ಯದ ಪುಸ್ತಕ ಪ್ರೇಮಿ ಅಂಕೇಗೌಡರು ಸೇರಿ ರಾಜ್ಯದ 7 ಮಂದಿಗೆ ಪದ್ಮಶ್ರೀ, ಶತಾವಧಾನಿ ಗಣೇಶ್ ಪದ್ಮಭೂಷಣ


ಅಂಕೇಗೌಡ


ಶತಾವಧಾನಿ ಗಣೇಶ್


ಡಾ.ಸುರೇಶ್ ಹನಗವಾಡಿ


ಎಸ್.ಜಿ.ಸುಶೀಲಮ್ಮ

ಪ್ರಧಾನಿ ಮೋದಿ ಅಭಿನಂದನೆ

“ನಮ್ಮ ದೇಶಕ್ಕೆ ಅತ್ಯುತ್ತಮ ಕೊಡುಗೆ ನೀಡಿದ ಎಲ್ಲಾ ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಹಾರ್ದಿಕ ಅಭಿನಂದನೆಗಳು. ವಿವಿಧ ಕ್ಷೇತ್ರಗಳಲ್ಲಿ ಅವರ ಪ್ರತಿಭೆ, ನಿಷ್ಠೆ ಮತ್ತು ಸೇವೆ ನಮ್ಮ ಸಮಾಜದ ನೆಲೆಯನ್ನು ಸಮೃದ್ಧಗೊಳಿಸುತ್ತಿವೆ. ಈ ಗೌರವವು ಮುಂದಿನ ತಲೆಮಾರಿಗೆ ಪ್ರೇರಣೆಯಾಗುವ ಬದ್ಧತೆ ಮತ್ತು ಉತ್ತಮತೆಯ ಚೈತನ್ಯವನ್ನು ಪ್ರತಿಬಿಂಬಿಸುತ್ತದೆ.

ಬೆಂಗಳೂರು: ಗಣರಾಜ್ಯೋತ್ಸವ ಸಂಭ್ರಮಕ್ಕೆ ಮುನ್ನ ದೇಶದ ಅತ್ಯುನ್ನತ ನಾಗರಿಕ ಗೌರವವಾದ ‘ಪದ್ಮ ಪ್ರಶಸ್ತಿ’ ಪ್ರಕಟವಾಗಿದ್ದು, ರಾಜ್ಯದ ಎಂಟು ಮಂದಿ ಸೇರಿ 131 ಸಾಧಕರು ಈ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಮಂಡ್ಯದ ಪುಸ್ತಕ ಪ್ರೇಮಿ ಅಂಕೇಗೌಡ, ದಾವಣಗೆರೆಯ ಹಿಮೋಫಿಲಿಯಾ ಸೊಸೈಟಿ, ಜೆಜೆಎಂ ವೈದ್ಯಕೀಯ ಕಾಲೇಜು ಪ್ರಾಧ್ಯಾಪಕ ವೈದ್ಯ ಡಾ.ಸುರೇಶ್ ಹನಗವಾಡಿ, ಬೆಂಗಳೂರಿನಲ್ಲಿ ಸುಮಂಗಲಿ ಸೇವಾ ಆಶ್ರಮದ ಮೂಲಕ ಮಹಿಳಾ ಸಬಲೀಕರಣ, ಶಿಶು ಸಂರಕ್ಷಣೆ ಹಾಗೂ ಗ್ರಾಮೀಣಾಭಿವೃದ್ಧಿಗಾಗಿ ದಶಕಗಳಿಂದ ಶ್ರಮಿಸುತ್ತಿರುವ ಸಮಾಜ ಸೇವಕಿ ಎಸ್.ಜಿ.ಸುಶೀಲಮ್ಮ, ಶಿಕ್ಷಣ ಕ್ಷೇತ್ರದ ಬೆಳಗಾವಿಯ ಡಾ.ಪ್ರಭಾಕರ್ ಕೋರೆ, ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದ ಶಶಿಶೇಖರ ವೆಂಪತಿ, ವಿಜ್ಞಾನ ತಂತ್ರಜ್ಞಾನ ಕ್ಷೇತ್ರದ ಶುಭಾ ವೆಂಕಟೇಶ್ ಅಯ್ಯಂಗಾರ್, ಉದ್ಯಮ ಮತ್ತು ವ್ಯಾಪಾರ ಕ್ಷೇತ್ರದ ಸಾಧನೆಗೆ (ಮರಣೋತ್ತರ) ಟಿಟಿ ಜಗನ್ನಾಥ್ ಅವರಿಗೆ ‘ಪದ್ಮಶ್ರೀ’ ಪ್ರಶಸ್ತಿ ಲಭಿಸಿದ್ದು, ಕಲಾ ಕ್ಷೇತ್ರದ ಸಾಧನೆಗೆ ಶತಾವಧಾನಿ ಆರ್.ಗಣೇಶ್ ‘ಪದ್ಮಭೂಷಣ’ ಪ್ರಶಸ್ತಿಗೆ ಭಾಜನರಾಗಿದ್ದಾರೆ. ▶ 6ನೇ ಪುಟಕ್ಕೆ

ಅಂಕೇಗೌಡರ ಸಚಿತ್ರ ವರದಿ ಪುಟ–3


ಮಮ್ಮುಟ್ಟಿ


ಧರ್ಮೇಂದ್ರ


ಆರ್.ಮಾಧವನ್

ಸಂವಿಧಾನ ರಚಿಸಿದವರು ರಾಷ್ಟ್ರೀಯತೆ, ಏಕತೆಗೆ ಭದ್ರ ಬುನಾದಿ ಹಾಕಿದ್ದಾರೆ

ರಾಷ್ಟ್ರವನ್ನುದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ

ನವದೆಹಲಿ: ನಮ್ಮ ದೇಶದ ಭೂತ, ವರ್ತಮಾನ ಮತ್ತು ಭವಿಷ್ಯದ ಸ್ಥಿತಿಯನ್ನು ಅವಲೋಕಿಸಲು ಇದು ಸುದಿನವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೇಳಿದರು.

ಗಣರಾಜ್ಯೋತ್ಸವದ ಭಾಗವಾಗಿ ರಾಷ್ಟ್ರವನ್ನುದ್ದೇಶಿಸಿ ಭಾನುವಾರ ಭಾಷಣ ಮಾಡಿದ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದ ವೀರರಿಗೆ ಗೌರವಾರ್ಪಣೆ ಸಲ್ಲಿಸಿದರು.

ನಾವು ಭಾರತೀಯರು ಬಹಳ ಉತ್ಸಾಹದಿಂದ ಗಣರಾಜ್ಯೋತ್ಸವ ದಿನವನ್ನು ಆಚರಿಸುತ್ತಿದ್ದೇವೆ. ನಮ್ಮ ದೇಶದ ಭೂತ, ವರ್ತಮಾನ ಮತ್ತು ಭವಿಷ್ಯದ ಸ್ಥಿತಿಯನ್ನು ಅವಲೋಕಿಸಲು ಇದು ಸುದಿನ. 1950ರ ಜನವರಿ 26ರಿಂದಲೂ ನಮ್ಮ ಗಣತಂತ್ರವನ್ನು ಸಾಂವಿಧಾನಿಕ ಗುರಿಗಳತ್ತ ಮುನ್ನಡೆಸುತ್ತಿದ್ದೇವೆ. ಸಂವಿಧಾನ ಪೂರ್ಣವಾಗಿ ಜಾರಿಯಾದ ದಿನವದು. ವಿಶ್ವದ ಇತಿಹಾಸದಲ್ಲೇ ಅತಿದೊಡ್ಡ ಗಣತಂತ್ರ ದೇಶಕ್ಕೆ ಸಂವಿಧಾನವೇ ಆಧಾರ ದಾಖಲೆಯಾಗಿದೆ. ಸಂವಿಧಾನವನ್ನು ರಚಿಸಿದವರು ರಾಷ್ಟ್ರೀಯತೆ ಮತ್ತು ಏಕತೆಗೆ ಭದ್ರ ಬುನಾದಿ ಹಾಕಿದ್ದಾರೆ ಎಂದು ತಿಳಿಸಿದರು.


ದ್ರೌಪದಿ ಮುರ್ಮು

‘ವಂದೇ ಮಾತರಂ’ ಬಣ್ಣನೆ: ರಾಷ್ಟ್ರಪತಿ ದ್ರೌಪದಿ ಮುರ್ಮು ತಮ್ಮ ಭಾಷಣದಲ್ಲಿ ವಂದೇ ಮಾತರಂ ಗೀತೆಗೆ 150 ವರ್ಷ ತುಂಬಿದ ವಿಚಾರವನ್ನು ಪ್ರಸ್ತಾಪಿಸಿ, ಇದು ದೇಶದ ಜನರ ಹೃದಯದಲ್ಲಿ ದೇಶಭಕ್ತಿ ಮೂಡಿಸುವ ಒಂದು ಅಮೋಘ ಗೀತೆ. ರಾಷ್ಟ್ರೀಯವಾದಿ ಕವಿ ಸುಬ್ರಹ್ಮಣ್ಯ ಭಾರತಿ ಅವರು ತಮಿಳು ಭಾಷೆಯಲ್ಲಿ ವಂದೇ ಮಾತರಂ ಎನ್ಬೋಮ್ ಎಂದು ಹಾಡು ರಚಿಸಿದರು. ಅದರರ್ಥ ನಾವು ವಂದೇ ಮಾತರಂ ಹೇಳೋಣ ಎಂದು. ಅದು ಜನರನ್ನು ಇನ್ನೂ ದೊಡ್ಡ ಮಟ್ಟದಲ್ಲಿ ತಲುಪಲು ಸಹಾಯವಾಯಿತು. ಇತರ ಭಾರತೀಯ ಭಾಷೆಗಳಲ್ಲಿ ರಚಿಸಲಾದ ವಂದೇ ಮಾತರಂ ▶ 6ನೇ ಪುಟಕ್ಕೆ

ರಾಜ್ಯದ ಇಬ್ಬರು ಪೊಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿ ಪದಕ

ಮೈಸೂರು ನಗರ ಪೊಲೀಸ್ ಕಮೀಷ್ನರ್ ಸೀಮಾ ಲಾಟ್ಕರ್ ಸೇರಿ 27 ಮಂದಿ ಶ್ಲಾಘನೀಯ ಸೇವಾ ಪದಕಕ್ಕೆ ಭಾಜನ


ದೇವಜ್ಯೋತಿ ರೇ


ಟಿ.ರಂಗಪ್ಪ


ಸೀಮಾ ಲಾಟ್ಕರ್


ಪುಟ್ಟಮಾದಯ್ಯ

ಬೆಂಗಳೂರು: ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ನೀಡಲಾಗುವ ರಾಷ್ಟ್ರಪತಿ ಪದಕ ಗೌರವಕ್ಕೆ ಕರ್ನಾಟಕದ ಇಬ್ಬರು ಪೊಲೀಸ್ ಅಧಿಕಾರಿಗಳು ಭಾಜನರಾಗಿದ್ದು, 27 ಮಂದಿಗೆ ಶ್ಲಾಘನೀಯ ಸೇವಾ ಪದಕ ಲಭಿಸಿದೆ.

ಕೇಂದ್ರ ಗೃಹ ಸಚಿವಾಲಯವು ಸೇವಾ ಪದಕಗಳಿಗೆ ಪೊಲೀಸ್, ಗೃಹರಕ್ಷಕ, ಅಗ್ನಿಶಾಮಕ, ನಾಗರಿಕ ರಕ್ಷಣಾ ಮತ್ತು ತಿದ್ದುಪಡಿ ಸೇವೆಗಳ 982 ಸಿಬ್ಬಂದಿಯನ್ನು ಆಯ್ಕೆ ಮಾಡಿದ್ದು, ಇವುಗಳಲ್ಲಿ 125 ಶೌರ್ಯ ಪದಕಗಳು ಸೇರಿವೆ.

ಐಪಿಎಸ್ ಅಧಿಕಾರಿ, ಮಾನವ ಹಕ್ಕುಗಳ ಎಡಿಜಿಪಿ ದೇವಜ್ಯೋತಿ ರೈ ಮತ್ತು ಬೆಂಗಳೂರಿನ ಹಲಸೂರು ಉಪ ವಿಭಾಗದ ಎಸಿಪಿ ಟಿ.ರಂಗಪ್ಪ ರಾಷ್ಟ್ರಪತಿಗಳ ಪದಕಕ್ಕೆ ಆಯ್ಕೆಯಾಗಿದ್ದಾರೆ.

ಇನ್ನು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಮೈಸೂರು ಮೂಲದ ಕಲಬುರಗಿ ಪಿಟಿಸಿ ಡಿಐಜಿಪಿ ಮತ್ತು ಪ್ರಾಂಶುಪಾಲರಾದ ಎಂ.ಪುಟ್ಟಮಾದಯ್ಯ ಸೇರಿದಂತೆ 27 ಮಂದಿಗೆ ಶ್ಲಾಘನೀಯ ಸೇವಾ ಪದಕಕ್ಕೆ ಭಾಜನರಾಗಿದ್ದಾರೆ.

ಶ್ಲಾಘನೀಯ ಸೇವಾ ಪದಕ ಪುರಸ್ಕೃತರು: ಬೆಳಗಾವಿ ಉತ್ತರ ವಲಯ ಐಜಿಪಿ ಡಾ.ಚೇತನ್ ಸಿಂಗ್ ರಾಥೋರ್, ಮಂಗಳೂರು ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್, ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಗೃಹರಕ್ಷಕ ದಳದ ಡಿಐಜಿಪಿ ಮತ್ತು ಅಪರ ಮಹಾ ▶ 6ನೇ ಪುಟಕ್ಕೆ

ಶುಭಾಶಯಗಳು



ನಾಡಿನ ಸಮಸ್ತರಿಗೂ ಗಣರಾಜ್ಯೋತ್ಸವದ ಶುಭಾಶಯಗಳು

ಬಿಡುವು

ಗಣರಾಜ್ಯೋತ್ಸವ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 27–1–2026ರ ಮಂಗಳವಾರದ ‘ಮೈಸೂರು ಮಿತ್ರ’ ಸಂಚಿಕೆ ಪ್ರಕಟವಾಗುವುದಿಲ್ಲ.
–ವ್ಯವಸ್ಥಾಪಕರು

ವಿದೇಶದಲ್ಲಿ ಭಾರತದ ವಿರುದ್ಧ ಮಾತನಾಡಲ್ಲ

ಮೊದಲು ನಾವು ಭಾರತೀಯರು: ಡಿಸಿಎಂ ಡಿಕೆ ಶಿವಕುಮಾರ್ ನುಡಿ

ಬೆಂಗಳೂರು: ಇಂದು ಜಗತ್ತು ಬೆಂಗಳೂರಿನ ಮೂಲಕ ಭಾರತವನ್ನು ನೋಡುತ್ತಿದ್ದು, ವಿದೇಶದಲ್ಲಿ ದೇಶದ ವಿರುದ್ಧ ನಾನು ಮಾತನಾಡುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.




ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯ ಶೃಂಗಸಭೆಯಲ್ಲಿ ಭಾಗವಹಿಸಿ ಹಿಂದಿರುಗಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ನನಗೆ ಅಷ್ಟೋ ಇಷ್ಟೋ ರಾಜಕೀಯ ಅನುಭವ ಇದೆ. ಅದರ ಆಧಾರದಲ್ಲಿ ಅಲ್ಲಿ ಮಾತನಾಡಿದ್ದೇನೆ. ದೇಶದ ಆರ್ಥಿಕ ಸ್ಥಿತಿ ಚೆನ್ನಾಗಿದೆ ಎಂದು ಹೇಳಿದ್ದೇನೆ. ನಾನು ಯಾವುದೋ ದೇಶಕ್ಕೆ ಹೋಗಿ ನಮ್ಮ ದೇಶಕ್ಕೆ ಧಕ್ಕೆ ತರುವುದಕ್ಕೆ ಆಗುವುದಿಲ್ಲ. ▶ 6ನೇ ಪುಟಕ್ಕೆ

ಕೆ.ಸಿ.ನಗರದಲ್ಲಿ ಕೆರೆ ಸುತ್ತ ದಿಢೀರ್ ಕಾಂಪೌಂಡ್

- ಮಣ್ಣು ತುಂಬಿ ಕೆರೆ ಸಮತಟ್ಟು
- ಎಂಡಿಎ ನಕ್ಷೆಯಲ್ಲಿ ಕೆರೆ ಸ್ಪಷ್ಟ ಉಲ್ಲೇಖ


ಕೆರೆ ಜಾಗದ ಸುತ್ತಲೂ ಕಾಂಪೌಂಡ್ ನಿರ್ಮಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು.


ಕೆರೆಯನ್ನು ನಕ್ಷೆಯಲ್ಲಿ ತೋರಿಸಿರುವುದನ್ನು ಚಿತ್ರದ ಕೆಂಪು ವೃತ್ತದಲ್ಲಿ ಕಾಣಬಹುದು.


ಶಾಸಕ ಟಿ.ಎಸ್.ಶ್ರೀವತ್ಸ ಭಾನುವಾರ ಸಂಜೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು,ಜ.25– ಮೈಸೂರು ಕೆಸಿ ನಗರದ ಕೆರೆಯೊಂದು ಈಗ ಕಂಡವರ ಪಾಲಾಗುತ್ತಿದೆ. ಸತತ ಸರ್ಕಾರಿ ರಜೆ ಹಿನ್ನೆಲೆಯಲ್ಲಿ ಸದ್ದಿಲ್ಲದೆ ಈ ಕೆರೆಯ ಸುತ್ತಲೂ ಕಾಂಪೌಂಡ್ ನಿರ್ಮಿಸಲಾಗಿದೆ.

ಜೊತೆಗೆ ಎರಡು ಪುಟ್ಟ ಫಲಕಗಳನ್ನು ಅಳವಡಿಸಲಾಗಿದ್ದು, ಅವುಗಳಲ್ಲಿ ಒಂದರಲ್ಲಿ 23 ಗುಂಟೆ ಹಾಗೂ ಮತ್ತೊಂದರಲ್ಲಿ ‘3.17 ಎಕರೆಯ ಈ ಜಾಗ ನಮಗೆ ಸೇರಿದ್ದು ಎಂದು ನಮೂದಿಸಿ ಇಲ್ಲಿಗೆ ಯಾವುದೇ ರೀತಿಯ ಅತಿಕ್ರಮ ಪ್ರವೇಶವನ್ನು ನಿಷೇಧಿಸಲಾಗಿದೆ. ಒಂದು ವೇಳೆ ಅತಿಕ್ರಮ ಪ್ರವೇಶ ಮಾಡಿದ್ದಲ್ಲಿ ಕಠಿಣ ಕಾನೂನು ಕ್ರಮದ ಎಚ್ಚರಿಕೆ ನೀಡಲಾಗಿದೆ. ಈ ಜಾಗ ಸರ್ವೇ ನಂ.4, ಕುರುಬಾರಹಳ್ಳಿ ಗ್ರಾಮ ವ್ಯಾಪ್ತಿಗೆ ಸೇರಿದ್ದು, ಇದೊಂದು ಖಾಸಗಿ ಆಸ್ತಿ ಎಂದು ಉಲ್ಲೇಖಿಸಲಾಗಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ನಕ್ಷೆಯಲ್ಲಿ ಇದು ಕೆರೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ. ಅಲ್ಲದೆ, ಈ ಕೆರೆಗೆ ಸಂಪರ್ಕಿತ ರಾಜಕಾಲುವೆಗಳನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಇದರ ಆಧಾರದ ಮೇಲೆ ಇದೊಂದು ಸರ್ಕಾರಿ ಸ್ವತ್ತು ಎಂಬುದು ದಿಟವಾಗಿದೆ. ಯಾವುದೇ ನೈಸರ್ಗಿಕ ಜಲಮೂಲ, ಸಂಗ್ರಹ ಸ್ಥಳ ಸರ್ಕಾರಿ ಸ್ವತ್ತಾಗಿರುವುದರಲ್ಲಿ ಯಾವ ಅನುಮಾನವೂ ಇಲ್ಲ. ಹಾಗಾಗಿಯೇ ಎಂಡಿಎ ಸಹ ಸ್ಪಷ್ಟವಾಗಿ ನಕ್ಷೆಯಲ್ಲಿ ಪ್ರತ್ಯೇಕಿಸಿ ಅದಕ್ಕೆ ನೀರನ್ನು ಸೂಚಿಸುವ ಬಣ್ಣದಿಂದ ತೋರಿಸಿದೆ. ಇಷ್ಟಾದರೂ ಕಳೆದ ಎರಡು ದಿನಗಳಿಂದ ತಗ್ಗು ಪ್ರದೇಶವಾಗಿರುವ ಈ ಜಾಗದಲ್ಲಿ ಲೋಡುಗಟ್ಟಲೆ ಮಣ್ಣು ತಂದು ಸುರಿದು ಸಮತಟ್ಟು ಮಾಡಿ, ಸುತ್ತಲು ಕಾಂಪೌಂಡ್ ನಿರ್ಮಿಸಿ, ಅಲ್ಲಿ ಭದ್ರತೆಗಾಗಿ ಸೆಕ್ಯೂರಿಟಿ ಒಬ್ಬರನ್ನು ಕಾವಲಿರಿಸಲಾಗಿದೆ. ▶ 6ನೇ ಪುಟಕ್ಕೆ




ಸರ್ಕಾರಿ ಆಸ್ತಿ ರಕ್ಷಣೆ ಮಾಡುವಂತಹುದು ನಮ್ಮೆಲ್ಲರ ಕರ್ತವ್ಯ. ಮೈಸೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಕಂದಾಯ ಇಲಾಖೆ ಸೂಕ್ತ ರೀತಿ ಆಸ್ತಿ ರಕ್ಷಣೆ ಕೆಲಸ ಮಾಡಬೇಕಾಗುತ್ತದೆ. ಕೆರೆ ವಶಪಡಿಸಿಕೊಂಡಿರುವ ವಿಚಾರದ ಬಗ್ಗೆ ತಿಳಿದು ಅಧಿಕೃತ ಮಾಹಿತಿಯನ್ನು ಮಾಧ್ಯಮಕ್ಕೆ ನೀಡುತ್ತೇನೆ.
–ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು.

“ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ಸುತ್ತಮುತ್ತಲ ನಿವಾಸಿಗಳು ಕೂಡ ಇದು ಕೆರೆ ಎಂದು ಹೇಳುತ್ತಿದ್ದಾರೆ. ಆದರೆ ಪಕ್ಕದ ಜಾಗದ ಮಾಲೀಕರು ಇದೂ ನನ್ನದೇ ಆಸ್ತಿ ಎಂದು ಹೇಳಿಕೊಳ್ಳುತ್ತಾ ಬಂದಿದ್ದಾರೆ ಎಂಬ ವಿಚಾರವನ್ನೂ ನನ್ನ ಗಮನಕ್ಕೆ ತಂದಿದ್ದಾರೆ. ಈ ಹಿಂದೆಯೂ ಇಲ್ಲಿ ಬೇಲಿ ಹಾಕುವ ಪ್ರಯತ್ನ ನಡೆದಿತ್ತಂತೆ. ಅದನ್ನು ತಹಶೀಲ್ದಾರ್ ಕಿತ್ತು ಹಾಕಿದ್ದರಂತೆ. ಈಗಲೂ ತಹಶೀಲ್ದಾರ್ ಗಮನಕ್ಕೆ ಈ ವಿಷಯ ತಂದಿದ್ದೇನೆ. ಅವರು ನಾಳೆಯೇ ಪರಿಶೀಲಿಸಿ ಮಾಹಿತಿ ನೀಡುವುದಾಗಿ ಹೇಳಿದ್ದಾರೆ. ಇದರ ಜೊತೆಗೆ ಜಿಲ್ಲಾಧಿಕಾರಿಗಳ ಗಮನಕ್ಕೂ ತರುವುದರೊಂದಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವಕೀಲರನ್ನು ಸಂಪರ್ಕಿಸಿ, ಹೆಚ್ಚಿನ ಮಾಹಿತಿ ಸಂಗ್ರಹಿಸುತ್ತೇನೆ. ಕೆರೆ ಅತಿಕ್ರಮಣ ಮಾಡಿದ್ದರೆ ಸುಮ್ಮನೆ ಬಿಡಲಾಗದು. ಅದನ್ನು ಉಳಿಸುವ ಕರ್ತವ್ಯ ಎಲ್ಲರದ್ದು. ಮೇಲಾಗಿ ಇದರಲ್ಲಿ ನನ್ನ ಜವಾಬ್ದಾರಿಯೂ ಇದೆ.
–ಟಿ.ಎಸ್.ಶ್ರೀವತ್ಸ, ಶಾಸಕರು, ಕೃಷ್ಣರಾಜ ಕ್ಷೇತ್ರ.

ರಾಜಾ ರವಿವರ್ಮ: ಎವರ್ಲಾಸ್ಟಿಂಗ್ ಇಂಪ್ರಿಂಟ್–ಎಪಿಕ್ಸ್ ಇಮ್ಯಾಜಿನ್ಡ್ ಪುಸ್ತಕ ಸರಣಿಯ 4ನೇ ಸಂಪುಟ ಬಿಡುಗಡೆ

ಜ.31ರಂದು ಮೈಸೂರು ಅರಮನೆಯಲ್ಲಿ ಸಮಾರಂಭ

ಮೈಸೂರು, ಜ.25(ಬಿಎಲ್‌ಯು)– ರಾಜಾ ರವಿವರ್ಮ: ಎವರ್ಲಾಸ್ಟಿಂಗ್ ಇಂಪ್ರಿಂಟ್–ಎಪಿಕ್ಸ್ ಇಮ್ಯಾಜಿನ್ಡ್ ಪುಸ್ತಕ ಸರಣಿಯ 4ನೇ ಸಂಪುಟ ಜನವರಿ 31ರಂದು ಬಿಡುಗಡೆಯಾಗಲಿದೆ ಎಂದು ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಅಂದು ಸಂಜೆ 5.30 ಗಂಟೆಗೆ ಮೈಸೂರು ಅರಮನೆಯ ಚಂದ್ರಶಾಲೆ ತೊಟ್ಟಿ ಸಭಾಂಗಣದಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ ಎಂದಿದ್ದಾರೆ.


ಈ ಸಂಪುಟವು ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳನ್ನು ಪರಿಶೋಧಿಸುತ್ತದೆ. ರಾಜಾ ರವಿವರ್ಮ ಅವರು ಮೈಸೂರಿನ ಒಡೆಯರ ಪ್ರೋತ್ಸಾಹವನ್ನು ಪಡೆದಿದ್ದರು ಎಂದು ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ.

ಅದರಲ್ಲೂ ಚಾಮರಾಜ ಒಡೆಯರ್ ಹಾಗೂ ಕೃಷ್ಣರಾಜ ಒಡೆಯರ್ ಅವರು ರಾಮಾಯಣ ಮತ್ತು ಮಹಾಭಾರತದ ವಿಷಯಗಳಿಗೆ ಜೀವ ತುಂಬಿದ ಹಲವು ಸಾಂಪ್ರದಾಯಿಕ ಕೃತಿಗಳನ್ನು ನಿಯೋಜಿಸಿದ್ದರು ಎಂದು ಹೇಳಿದ್ದಾರೆ.

ಪುಸ್ತಕ ಬಿಡುಗಡೆ ಸಮಾರಂಭ ನಡೆಯುತ್ತಿರುವ ಸ್ಥಳವು ಮೈಸೂರು ಅರಮನೆಯ ಹಳೆಯ ಭಾಗದಲ್ಲಿರುವುದು ವಿಶೇಷವಾಗಿದೆ. ಇದನ್ನು ಅಂದು ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಯೋಗಶಾಲೆಗೆ ಬಳಸಲಾಗುತ್ತಿತ್ತು ಎಂದು ತಿಳಿಸಿದ್ದಾರೆ.

ಇತ್ತೀಚಿಗೆ ಪ್ರತಿಷ್ಠಾನವು ಈ ಸಭಾಂಗಣವನ್ನು ನವೀಕರಿಸಿದೆ ಇಂತಹ ಐತಿಹಾಸಿಕ ಸ್ಥಳದಲ್ಲಿ ಕಾರ್ಯಕ್ರಮ ನಡೆಯುತ್ತಿರುವುದು ವಿಶೇಷವಾಗಿದೆ ಎಂದು ಪ್ರಮೋದಾ ದೇವಿ ಒಡೆಯರ್ ಸಂತಸ ವ್ಯಕ್ತಪಡಿಸಿದ್ದಾರೆ.

ವಧು–ವರರಿಗೆ ಜಿಟಿಡಿ ದಂಪತಿ ಶುಭ ಹಾರೈಕೆ...



ಶಾಸಕರಾದ ಜಿ.ಟಿ.ದೇವೇಗೌಡರ (ಜಿಟಿಡಿ) ನಾದಿನಿ, ಜಿಪಂ ಮಾಜಿ ಅಧ್ಯಕ್ಷೆ ವನಜಾಕ್ಷಿ (ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡರ ಸಹೋದರಿ) ಹಾಗೂ ಹೆಚ್.ಎಸ್.ನಾಗರಾಜ್ (ಎಪಿಎಂಸಿ ಮಾಜಿ ಅಧ್ಯಕ್ಷರು) ಅವರ ಪುತ್ರನ ವಿವಾಹವು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸರಳವಾಗಿ ಜರುಗಿತು. ಜಿ.ಟಿ.ದೇವೇಗೌಡ ಮತ್ತು ಲಲಿತಾ ಜಿ.ಟಿ.ದೇವೇಗೌಡ ದಂಪತಿ ವಧು–ವರರಿಗೆ ಶುಭ ಹಾರೈಸಿದರು.

ಹರಿಪ್ರಸಾದ್, ಬಾಲಕೃಷ್ಣ ಅಮಾನತಿಗೆ ಆಗ್ರಹ

ಮೈಸೂರು,ಜ.25–ವಿಧಾನ ಮಂಡಲ ವಿಶೇಷ ಅಧಿವೇಶನದಲ್ಲಿ ರಾಜ್ಯಪಾಲರ ಮೇಲೆ ಹಲ್ಲೆಗೆ ಯತ್ನಿಸಿದ ಶಾಸಕರಾದ ಬಿ.ಕೆ.ಹರಿಪ್ರಸಾದ್ ಮತ್ತು ಬಾಲಕೃಷ್ಣ ಅವರನ್ನು ಕೂಡಲೇ ಸದನದಿಂದ ಅಮಾನತು ಮಾಡುವಂತೆ ಮಾಜಿ ಉಪಮೇಯರ್ ಹಾಗೂ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ ಆಗ್ರಹಿಸಿದ್ದಾರೆ.



ವಿ.ಶೈಲೇಂದ್ರ

ಪವಿತ್ರ ಸದನದಲ್ಲಿ ಇಂತಹ ಘಟನೆ ನಡೆದಿರುವುದು ಖಂಡನೀಯ. ಸಾಂವಿಧಾನಿಕ ಹುದ್ದೆಯಲ್ಲಿರುವ ಬಿ.ಕೆ.ಹರಿಪ್ರಸಾದ್ ಮತ್ತು ಬಾಲಕೃಷ್ಣ, ರಾಜ್ಯಪಾಲರ ಮೇಲೆ ನಡೆದುಕೊಂಡಿರುವ ರೀತಿ ಘೋರ ಅಪರಾಧ. ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಆಡಳಿತ ಪಕ್ಷದ ಸಾಧನೆ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಜನರಿಗೆ ತಪ್ಪು ಸಂದೇಶ ಸಾರಲಿಲ್ಲ ಎಂಬ ಕಾರಣಕ್ಕೆ ದುಂಡಾವರ್ತನೆ ಮೆರೆದಿರುವುದು ವಿಷಾದನೀಯ. ಇಂಥವರು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಇರಲು ಅರ್ಹರಲ್ಲವೆಂದು ಪರಿಗಣಿಸಿ ಕೂಡಲೇ ಸಭಾಧ್ಯಕ್ಷರು ಇವರನ್ನು ಅಮಾನತು ಮಾಡಬೇಕು ಎಂದು ಶೈಲೇಂದ್ರ ಒತ್ತಾಯಿಸಿದ್ದಾರೆ.

ಡಾ.ಅಂಬೇಡ್ಕರ್ ಅವರ ಸಂವಿಧಾನವನ್ನು ಗೌರವಿಸುತ್ತೇವೆ ಎನ್ನುವ ಕಾಂಗ್ರೆಸ್ ಶಾಸಕರು, ಅಂಬೇಡ್ಕರ್ ಹಾಗೂ ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳ ಓಲೈಕೆಗಾಗಿ ಹೀಗೆ ಬೀದಿರೌಡಿಗಳಂತೆ ವರ್ತಿಸಿದ್ದಾರೆ. ಈ ಮೂಲಕ ರಾಜ್ಯದ ಶಾಂತಿ ಕದಡುವ ಕೆಲಸವನ್ನು ಕಾಂಗ್ರೆಸ್ ಶಾಸಕರು ವಿಧಾನಸಭೆ ಒಳಗಡೆ ಹಾಗೂ ಹೊರಗಡೆ ಮುಂದುವರೆಸಿದ್ದಾರೆ. ಸಿದ್ದರಾಮಯ್ಯ ತಮ್ಮ ಕುರ್ಚಿ ಉಳಿಸಿಕೊಳ್ಳುವ ಸಲುವಾಗಿ ಇಂತಹ ಘಟನೆಗಳಿಗೆ ಪರೋಕ್ಷವಾಗಿ ಬೆಂಬಲಿಸುತ್ತಿರುವುದು ದುರ್ದೈವ ಎಂದಿದ್ದಾರೆ.

ಅದಮ್ಯ ಚಿಗುರು ಪ್ರತಿಭಾ ಚೇತನ ಪ್ರಶಸ್ತಿ ಪ್ರದಾನ



ರಾಷ್ಟ್ರೀಯ ಕರಾಟೆ ಸ್ಪರ್ಧೆಯಲ್ಲಿ ಸಾಧನೆಗೈದ ಮೈಸೂರು ನಗರದ ಸೇಂಟ್ ಜೋಸೆಫ್ ಸೆಂಟ್ರಲ್ ಶಾಲೆಯ 1ನೇ ತರಗತಿ ವಿದ್ಯಾರ್ಥಿ ಎನ್.ವಸಿಷ್ಠಗೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಮಕ್ಕಳ ಸಾಂಸ್ಕೃತಿಕ ಉತ್ಸವದಲ್ಲಿ ಅದಮ್ಯ ರಂಗಶಾಲೆ ವತಿಯಿಂದ ಅದಮ್ಯ ಚಿಗುರು ಪ್ರತಿಭಾ ಚೇತನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಸಾಹಿತಿ, ಆದಮ್ಯ ರಂಗಶಾಲೆ ಗೌರವ ಕಾರ್ಯದರ್ಶಿ ಸತೀಶ್ ಜವರೇಗೌಡ, ಲೋಕಾಯುಕ್ತ ಡಿವೈಎಸ್‌ಪಿ ಜಿ.ಎಸ್.ಗಜೇಂದ್ರಪ್ರಸಾದ್, ಚಂದ್ರು ಮಂಡ್ಯ ಹಾಜರಿದ್ದರು. ವಸಿಷ್ಠ ಕಳಸ್ತವಾಡಿ ನಿವಾಸಿ ನಾಗರಾಜು ಹಾಗೂ ಸಿ.ಸುಜಾತ ದಂಪತಿ ಪುತ್ರ.

ನಿಧನ

ಶ್ರೀಮತಿ ಜಯಲಕ್ಷ್ಮಿ



ಮೈಸೂರು: ಮೂಲತಃ ಚಾಮರಾಜನಗರ ತಾಲೂಕು ಹರದನಹಳ್ಳಿ ಗ್ರಾಮದ ಕೀರ್ತಿಶೇಷ ಅಡುಗೆ ಶ್ರೀಪತಿ ಅವರ ಧರ್ಮಪತ್ನಿ ಮೈಸೂರು ವಿದ್ಯಾರಣ್ಯಪುರಂ ನಿವಾಸಿ ಶ್ರೀಮತಿ ಜಯಲಕ್ಷ್ಮಿ ಅವರು ಶನಿವಾರ ರಾತ್ರಿ ನಿಧನರಾದರು. ಅವರಿಗೆ 71 ವರ್ಷ ವಯಸ್ಸಾಗಿತ್ತು. ಮೃತರು ಪುತ್ರ ನಾಗಶಯನ, ಪುತ್ರಿ ಜ್ಯೋತಿ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 1 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಕೆ.ಗೌರಮ್ಮ



ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ, ದಿವಂಗತ ಹೆಚ್.ಎನ್.ಕೃಷ್ಣಮೂರ್ತಿ ಅವರ ಪತ್ನಿ, ಹೆಚ್.ಕೆ.ಗೌರಮ್ಮ (73) ಭಾನುವಾರ ನಿಧನರಾದರು. ಮೃತರು ಪುತ್ರರಾದ ಭಾನುಪ್ರಕಾಶ್, ಗುರುಪ್ರಸಾದ್ (ಪತ್ರಕರ್ತ) ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಮೃತರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.1.2026 ಸೋಮವಾರ, ಮಳೆ ನಕ್ಷತ್ರ: ಶ್ರವಣ 24.01.2026 ರಿಂದ 05.02.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ತ್ರಯೀ ನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್:** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಶ್ರೀಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ರಿಂದ ಶ್ರೀ ದಶ ಶ್ಯಾಮಲಾ ಹೋಮ, ಶ್ರೀ ಹಯಗ್ರೀವ, ಶ್ರೀವಾಗ್ವಾದಿನಿ, ಶ್ರೀ ವಾಗೀಶ್ವರಿ, ಶ್ರೀ ಶುಕ ಶ್ಯಾಮಲಾ, ಶ್ರೀವೀಣಾ ಶ್ಯಾಮಲಾ, ಶ್ರೀ ವೇಣು ಶ್ಯಾಮಲಾ, ಶ್ರೀ ಶಾರಿಕಾ ಶ್ಯಾಮಲಾ, ಶ್ರೀ ಲಘು ಶ್ಯಾಮಲಾ, ಶ್ರೀ ನಕುಲಿ ಶ್ಯಾಮಲಾ, ಶ್ರೀ ಹಸಂತಿ ಶ್ಯಾಮಲಾ, ಮತ್ತು ಶ್ರೀ ರಾಜಶ್ಯಾಮಲಾ, ಆವರಣಾಂಗ ಹೋಮ, ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀ ನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್, ಜಯಲಕ್ಷ್ಮೀಪುರಂ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ರಕ್ತ ಪದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ. ಮೋತಿಯಾ ಬಿಂದು (cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿ ದೋಷಗಳ (Refractive errors) ತಿದ್ದುಪಡಿ, ಅಂಬ್ಲಾಯೋಪಿಯಾ ನಿರ್ವಹಣೆ, ಮಧು ಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನಿಟಿಸ್ ಫಿಗ್ಮೆಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಭಂಗು, ಚರ್ಮರೋಗ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ:** ಸಂಗೊಳ್ಳಿ ರಾಯಣ್ಣ ಹುತಾತ್ಮ ದಿನದ ಅಂಗವಾಗಿ ಬೆಳಗ್ಗೆ 10 ಗಂಟೆಗೆ ಕುರುಬಾರಹಳ್ಳಿಯ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಪ್ರಸಾದ ಹಂಚಿಕೆ. ಸಂಜೆ 6 ಗಂಟೆಗೆ ರಂಗೋಲಿಯಲ್ಲಿ ರಾಯಣ್ಣ ಚಿತ್ರ ಬಿಡಿಸಿ ಮೇಣದ ಬತ್ತಿ ಹಚ್ಚಿ ಗೌರವ. ಸ್ಥಳ: ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ.
- **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಡಾ. ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಡಾ. ಬಿ.ಆರ್.ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಶ್ರೀ ಶಂಕರ ವಿಲಾಸ ಸಂಸ್ಕೃತ ಪಾಠಶಾಲೆ, ಶ್ರೀ ಶಂಕರ ವಿಲಾಸ ಸಂಸ್ಕೃತ ಕಾಲೇಜು:** ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಬದುಕು, ಬರಹ ಹಾಗೂ ವಿಚಾರಧಾರೆಗಳ ವಿಶೇಷ ಉಪನ್ಯಾಸ. ದಿವ್ಯ ಸಾನ್ನಿಧ್ಯ: ಶ್ರೀ ಅರಮನೆ ಜಪದಕಟ್ಟೆ ಪೀಠಾಧ್ಯಕ್ಷ ಶ್ರೀ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿ. ಉದ್ಘಾಟನೆ: ಶ್ರೀ ಶಂಕರ ವಿಲಾಸ ಸಂಸ್ಕೃತ ಪಾಠಶಾಲಾ ಸಮಿತಿ ಕಾರ್ಯದರ್ಶಿ ಡಾ. ಎಸ್.ಜ್ಞಾನ ಶಂಕರ್. ಅಧ್ಯಕ್ಷತೆ: ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ. ಸ್ಥಳ: ಶ್ರೀ ಅರಮನೆ ಜಪದ ಕಟ್ಟೆ ಮಠದ ಸಭಾಂಗಣ. ಬೆಳಗ್ಗೆ 10.30ಕ್ಕೆ.
- **ಸಂಸ್ಕೃತಿ ಬುಕ್ ಏಜೆನ್ಸೀಸ್, ಮೈಸೂರು:** ಡಾ. ಎಂ.ಎಸ್.ವಿಜಯಾಹರನ್ ಅವರ 'ಧೀಮಂತ ಮಹಿಳೆ ಕಮಲಾ ಗೋಪಾಲಸ್ವಾಮಿ' ಪುಸ್ತಕ ಬಿಡುಗಡೆ. ಸ್ಥಳ: ಡಾ. ಎಂ.ವಿ.ಗೋಪಾಲಸ್ವಾಮಿ ಶಿಶುವಿಹಾರ ಆವರಣ, ಲಕ್ಷ್ಮೀಪುರಂ. ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯ:** ದಕ್ಷಿಣ ವಲಯ ಅಂತರ ವಿವಿ ಪುರುಷರ ಕ್ರಿಕೆಟ್ ಟೂರ್ನಮೆಂಟ್–2026. ದಿವ್ಯ ಸಾನ್ನಿಧ್ಯ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ. ಉದ್ಘಾಟನೆ: ಜೆಎಸ್‌ಎಸ್ ಮಹಾವಿದ್ಯಾ ಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಸಿ.ಜಿ.ಬೆಟಸೂರ್ ಮಠ್. ಮುಖ್ಯ ಅತಿಥಿ: ಕೆಎಸ್‌ಸಿಎ ಉಪಾಧ್ಯಕ್ಷ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಸುಜಿಕ್ ಸೋಮ ಸುಂದರ್. ಅಧ್ಯಕ್ಷತೆ: ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿಯ ಕುಲಪತಿ ಡಾ. ಎ.ಎನ್.ಸಂತೋಷ್ ಕುಮಾರ್. ಸ್ಥಳ ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿ–ಕೆಎಸ್‌ಸಿಎ ಮೈದಾನ. ಸಂಜೆ 4 ಗಂಟೆಗೆ.
- **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ:** 'ಸೃಜನಾತ್ಮಕ ಬೆಸುಗೆ' ಸಂಗೀತ ನಾಟಕ. ವಿಜ್ಞಾನ. ಸಂಜೆ 6 ಗಂಟೆಗೆ ದೆಹಲಿಯ ಖೇಲ್ ತಮಾಷಾ ಅವರಿಂದ ಮಕ್ಕಳಿಗಾಗಿ ಒಂದು ಗಿಬ್ಬಂಸ್ ನಾಟಕ–'ದಿನ್ ಚೆಕ್ ಹೋಮ್ ಹೋಮ್ ಪೋಕ್'. ಸ್ಥಳ: ಸಂಸ್ಥೆಯ ಸಭಾಂಗಣ, ಹಾರ್ಡ್ವಿಕ್ ಶಾಲಾ ಆವರಣ, ಜೆಎಲ್‌ಬಿ ರಸ್ತೆ. ಸಂಜೆ 6 ಗಂಟೆಗೆ.
- **ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಟೆಂಪಲ್ ಟ್ರಸ್ಟ್:** 60ನೇ ವರ್ಷದ ತೈಪೂಸಂ ಮಹೋತ್ಸವ–2026, ಪೂಜಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು. ಉದ್ಘಾಟನೆ: ಗೋ ಪೂಜೆ ಮೂಲಕ, ಚೇತನ ಸ್ಮಾರ್ಟ್ ಕಿಡ್ಸ್ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ. ಸ್ಥಳ: ದೇವಸ್ಥಾನದ ಪ್ರಾಂಗಣ, ವಿಶ್ವೇಶ್ವರನಗರ. ಸಂಜೆ 6.30ಕ್ಕೆ.
- **ಸಾಧನಾ ಮಂದಿರ(ಮೈಸೂರು):** ಸರಳವಾಗಿ ಕಲಿತು ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ವಿಶೇಷ ತರಬೇತಿ ಸ್ವಾಮಿ ಹಂಸಾನಂದ ಅವರಿಂದ. ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್.ಮೊಹಲ್ಲಾ, ಸಂಜೆ 6.30ರಿಂದ.

ಗಣರಾಜ್ಯೋತ್ಸವ ಕಾರ್ಯಕ್ರಮ




- **ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು:** 77ನೇ ಗಣರಾಜ್ಯೋತ್ಸವ ಕಾರ್ಯಕ್ರಮ. ಧ್ವಜಾರೋಹಣ: ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್. ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಗೌರವ ಕೋಶಾಧ್ಯಕ್ಷ ಶ್ರೀ ಶೈಲ ರಾಮಣ್ಣನವರ್. ಸ್ಥಳ: ಬಯಲು ರಂಗಮಂದಿರ, ಶಿಕ್ಷಣ ಸಂಸ್ಥೆಯ ಆವರಣ, ಶೇಷಾದ್ರಿ ಅಯ್ಯರ್ ರಸ್ತೆ. ಬೆಳಗ್ಗೆ 7.30ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ:** 77ನೇ ಗಣರಾಜ್ಯೋತ್ಸವ ದಿನಾಚರಣೆ. ಧ್ವಜಾರೋಹಣ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್. ಸ್ಥಳ: ಕ್ರಾಫರ್ಡ್ ಭವನದ ಮುಂಭಾಗ. ಬೆಳಗ್ಗೆ 7.30ರಿಂದ.
- **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು:** 77ನೇ ಗಣರಾಜ್ಯೋತ್ಸವ. ದಿವ್ಯ ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಮಹಾಸ್ವಾಮಿಗಳು. ಧ್ವಜಾರೋಹಣ: ನಿವೃತ್ತ ಭಾರತೀಯ ಸೇನಾ ಯೋಧರಾದ ಕರ್ನಲ್ ಎಂ.ಎಸ್.ಸುರೇಂದ್ರನಾಥ್. ಸ್ಥಳ ಶ್ರೀ ನಟರಾಜ ಪಬ್ಲಿಕ್ ಶಾಲಾ ಆವರಣ, ಬೆಳಗ್ಗೆ 8 ಗಂಟೆಗೆ.
- **ದಿ ಅಕ್ಕೆ ಶಾಲೆ:** ಗಣರಾಜ್ಯೋತ್ಸವ ಮತ್ತು ಸಾಧಕರ ದಿನಾಚರಣೆ. ಧ್ವಜಾರೋಹಣ. ಮುಖ್ಯ ಅತಿಥಿ: ಗೋಲ್ಡ್ ನ್ಯೂಟ್ರಿಷನ್ ಮತ್ತು ಡಯಟ್ ಸಲ್ಯೂಷನ್ಸ್ ಸಂಸ್ಥಾಪಕ ಹಾಗೂ ಪೌಷ್ಟಿಕಾಂಶ ಸಲಹೆಗಾರರಾದ ಡಾ. ಸುಷ್ಮಾ ಅಪ್ಪಯ್ಯ. ಸ್ಥಳ: ಶಾಲೆಯ ಆವರಣ, ನಿವೇದಿತಾ ನಗರ. ಬೆಳಗ್ಗೆ 8.30ಕ್ಕೆ.
- **ಶ್ರೀಕಾಂತ ವಿದ್ಯಾ ಸಂಸ್ಥೆ, ಕೆ.ಎನ್.ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್:** ಗಣರಾಜ್ಯೋತ್ಸವ ಸಮಾರಂಭ. ಧ್ವಜಾರೋಹಣ: ಶ್ರೀಕಾಂತ ಬಾಲಿಕಾ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಗಾಯತ್ರಿ. ಅಧ್ಯಕ್ಷತೆ: ಶ್ರೀಕಾಂತ ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಭಾರಿ ಪ್ರಾಂಶುಪಾಲರಾದ ಮಾದಲಾಂಬಿಕೆ ಸ್ಥಳ: ವಿದ್ಯಾ ಸಂಸ್ಥೆಯ ಆವರಣ, ಶಂಕರ ಮಠ ಬಡಾವಣೆ, ಖಿಲ್ಲೆ ಮೊಹಲ್ಲಾ. ಬೆಳಗ್ಗೆ 8.30ಕ್ಕೆ.
- **ದೀಪಾ ಶಿಕ್ಷಣ ಮತ್ತು ಸೇವಾ ಟ್ರಸ್ಟ್:** 77ನೇ ಗಣರಾಜ್ಯೋತ್ಸವ ಸಮಾರಂಭ. ಮುಖ್ಯ ಅತಿಥಿ: ಸಹ ಪ್ರಾಧ್ಯಾಪಕ ಡಾ. ವಿ.ಎಂ.ರಮೇಶ್. ಅಧ್ಯಕ್ಷತೆ: ದೀಪಾ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಸದಾಶಿವ ಪೂಜಾರಿ. ಸ್ಥಳ: ದೀಪಾ ಶಾಲೆಯ ಆವರಣ. ರೂಪಾನಗರ. ಬೆಳಗ್ಗೆ 8.45ಕ್ಕೆ.
- **ಜಿಲ್ಲಾಡಳಿತ, ಮೈಸೂರು:** 77ನೇ ಗಣರಾಜ್ಯೋತ್ಸವ. ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ. ಧ್ವಜಾರೋಹಣ: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ. ಅಧ್ಯಕ್ಷತೆ: ಶಾಸಕ ತನ್ವೀರ್ ಸೇಠ್. ಮುಖ್ಯ ಅತಿಥಿಗಳು: ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್. ಸ್ಥಳ: ಪಂಜಿನ ಕವಾಯಿತು ಮೈದಾನ, ಬನ್ನಿಮಂಟಪ. ಬೆಳಗ್ಗೆ 9ರಿಂದ.
- **ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳು:** ಗಣರಾಜ್ಯೋತ್ಸವ–2026. ಧ್ವಜಾರೋಹಣ ಮತ್ತು ಅಧ್ಯಕ್ಷತೆ; ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಬಿ.ಎಂ.ಸುಬ್ರಾಯ. ಮುಖ್ಯ ಅತಿಥಿ: ಭಾರತೀಯ ವಾಯು ಸೇನೆಯ ಏರ್ ಕಮಾಂಡರ್ ಟಿ.ಎಂ.ಶ್ರೀನಾಥ್. ಸ್ಥಳ: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ. ಬೆಳಗ್ಗೆ 9 ಗಂಟೆಗೆ.
- **ತಪೋನಂದನ ಉದ್ಯಾನವನ ಬಳಗ:** 77ನೇ ಗಣರಾಜ್ಯೋತ್ಸವ ದಿನಾಚರಣೆ. ಧ್ವಜಾರೋಹಣ: ಶಾಸಕ ಟಿ.ಎಸ್.ಶ್ರೀವತ್ಸ. ಅಧ್ಯಕ್ಷತೆ; ಮಾಜಿ ಮೇಯರ್ ಶಿವಕುಮಾರ್. ಸ್ಥಳ: ತಪೋನಂದನ ಉದ್ಯಾನವನ, ಕುವೆಂಪುನಗರ. ಬೆಳಗ್ಗೆ 9ಕ್ಕೆ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** 77ನೇ ಗಣರಾಜ್ಯೋತ್ಸವ ದಿನಾಚರಣೆ. ಅಧ್ಯಕ್ಷತೆ: ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ. ಮುಖ್ಯ ಭಾಷಣ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್. ಸ್ಥಳ: ಆಡಳಿತ ಭವನ ಮುಂಭಾಗ. ಬೆಳಗ್ಗೆ 11 ಗಂಟೆಗೆ.
- **ಮೈಸೂರು ವಿಶ್ವವಿದ್ಯಾಲಯ, ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** 77ನೇ ವರ್ಷದ ಗಣರಾಜ್ಯೋತ್ಸವದ ಅಂಗವಾಗಿ ವಿಶೇಷ ಉಪನ್ಯಾಸ 'ಸಾಂವಿಧಾನಿಕ ಸಂಸ್ಕೃತಿ'. ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್. ಉಪನ್ಯಾಸ: ಡಾ. ಬಿ.ಆರ್.ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ. ರಹಮದ್ ತರೀಕೆರೆ. ಅಧ್ಯಕ್ಷತೆ: ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ. ಎಸ್.ನರೇಂದ್ರ ಕುಮಾರ್. ಸ್ಥಳ: ಪ್ರೊ. ಬೆಟ್ರಿಕ್ಸ್ ಡಿ.ಸೌಜ ಸಭಾಂಗಣ, ಡಾ. ಬಿ.ಆರ್.ಅಂಬೇಡ್ಕರ್ ಕೇಂದ್ರ, ಮಾನಸ ಗಂಗೋತ್ರಿ. ಬೆಳಗ್ಗೆ 11 ಗಂಟೆಗೆ.
- **ಬಹುಜನ ಸಮಾಜ ಪಾರ್ಟಿ (ಬಿಎಸ್‌ಪಿ):** ಸಂವಿಧಾನ ದಿನಚರಣೆ. ಸ್ಥಳ: ರೋಟರಿ ಶಾಲಾ ಆವರಣ, ಜೆಎಲ್‌ಬಿ ರಸ್ತೆ. ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ ಪ್ರೊ.ಪ್ರಸನ್ನಕುಮಾರ್ ಕೆರಗೋಡು, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಪಿ.ಸುರಭಿ, ವ್ಯಾಖ್ಯಾನ –ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಗಣರಾಜ್ಯೋತ್ಸವ ಸಂದರ್ಭದಲ್ಲಿ ರಾಜ್ಯದ ರಾಜಪಾಲರಾದ ಥಾವರ್ ಚಂದ್ ಗೆಹ್ಲೋಟ್ ಹಾಗೂ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಂದ ಸಂದೇಶ. 9.05 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್,9.10 ನೆನಪಿನಂಗಳ (ಧ್ವನಿ ಭಂಡಾರದಿಂದ) ಸಾಹಿತ್ಯ ಸೃಷ್ಟಿ ಕುರಿತು ತ.ರಾ.ಸು ಅವರು ಮಾಡಿರುವ ಭಾಷಣದ ಧ್ವನಿ ಮುದ್ರಣ. 9.40 ನವದೆಹಲಿಯ ಕರ್ತವ್ಯ ಪಥದಲ್ಲಿ ಜರುಗಲಿರುವ ಗಣರಾಜ್ಯೋತ್ಸವ ದಿನದ ಪಥ ಸಂಚಲನದ ವೀಕ್ಷಕ ವಿವರಣೆಯ ನೇರ ಪ್ರಸಾರ. **ಮಧ್ಯಾಹ್ನ** 12.05 ವನಿತಾ ವಿಹಾರ (Co ordinated) : ಭಾರತದ ಗಣರಾಜ್ಯ ಮಾತನಾಡುತ್ತಾರೆ ಒ.ಅ ಶಶಿಕಲಾ ನಂತರ ಮಾಸ್ತಿ ಅವರ ಕಥೆಗಳಲ್ಲಿ ಗ್ರಾಮೀಣ ಮಹಿಳೆ ಈ ಕುರಿತು ಡಾ. ಶಂಕ್ರಮ್ಮ ಹೂಲಿಕಟ್ಟಿ ಅವರಿಂದ ಭಾಷಣ. ಕಾರ್ಯಕ್ರಮ ಸಂಯೋಜನೆ ಮಂಜುಳಾ ಪುರಾಣಿಕ. 12.35 ದೇವರನಾಮ, 12.45 ನಮ್ಮ ಆರೋಗ್ಯ ವಿಶ್ವ ಕುಷ್ಠರೋಗ ನಿರ್ಮೂಲನಾ ದಿನದ ಅಂಗವಾಗಿ ಮೈಸೂರು ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ಬೃಂದಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿಗಳ ನಿಯಮಬದ್ಧ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆ, 1.20 ಭಾವಗೀತೆಗಳು, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಕೆ.ಶ್ರೀಕಂಠನ್ ಹಾಡುಗಾರಿಕೆ, 4.00 ಮಹಿಳಾರಂಗ ಭಾವಸಂಗಮ ಭಾವಗೀತೆಗಳನ್ನಾಧರಿಸಿದ ಕಾರ್ಯಕ್ರಮ. 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 5.40 ಮೈಸೂರಿನಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದ ಬಾನುಲಿ ವರದಿ, ಪ್ರಸ್ತುತಿ: ಜಿ.ಎನ್.ಮಂಜುನಾಥ್, 6.50 ಕೃಷಿರಂಗ–ಗಣರಾಜ್ಯೋತ್ಸವದ ಮುನ್ನ ದಿನದಂದು ಭಾರತದ ಜನತೆಯನ್ನು ಉದ್ದೇಶಿಸಿ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಮಾಡುವ ಪ್ರಸಾರ ಭಾಷಣದ ಕನ್ನಡ ಅವತರಣಿಕೆಯ ಮರು ಪ್ರಸಾರ. 7.20 2. ಕೃಷಿಲೋಕ, ಪ್ರಸ್ತುತಿ : ಆರ್.ಲೋಕೇಶ್ವರಿ, 7.45 ರಾಜ್ಯದ ವಿವಿಧೆಡೆಗಳಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದ ವಿಶೇಷ ವಾರ್ತಾಚಿತ್ರ 9.30 ಕರ್ನಾಟಕ ಶಾಸ್ತ್ರೀಯ ಸಂಗೀತ ಎಂ.ಡಿ.ಸುಮತಿ ಮುರಾರಿ–ಹಾಡುಗಾರಿಕೆ, 10.00 ಶ್ರೀವಿದ್ಯಾ ವಿಶಾರದ ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ –ವಿದ್ವಾನ್.ವಿ.ನಂಜುಂಡಸ್ವಾಮಿ, 10.30 ಸವಿನೆನಪು.

ಮೈಸೂರು ಹಾಗೂ ಸುತ್ತಮುತ್ತ ನಾಳೆ...




ನಾಳಿನ ಪಂಚಾಂಗ

27.1.2026 ಮಂಗಳವಾರ, ಮಳೆ ನಕ್ಷತ್ರ: ಶ್ರವಣ 24.01.2026 ರಿಂದ 05.02.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ


- **ಕಾವೇರಿ ಆಯುರ್ವೇದ ಆಸ್ಪತ್ರೆ:** ರಕ್ತ ಪದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ. ಮೋತಿಯಾ ಬಿಂದು (Cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿ ದೋಷಗಳ (Refractive error) ತಿದ್ದುಪಡಿ, ಅಂಬ್ಲಿಯೋಪಿಯಾ ನಿರ್ವಹಣೆ, ಮಧುಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ. ರೆಟಿನಿಟಸ್ ಪಿಗ್ಮೆಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಭಂಗು ಮತ್ತು ಚರ್ಮ ರೋಗಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.
- **ತ್ರಯೀ ನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್:** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ. ಬೆಳಗ್ಗೆ 10 ಗಂಟೆಗೆ ಶ್ರೀ ಚಕ್ರಾರ್ಚನೆ, ನವಾರಣ ಪೂಜೆ. ಮಧ್ಯಾಹ್ನ 1 ಗಂಟೆಗೆ ಸಹಸ್ರ ಮುಖಿ ಚಂಡಿಯಾಗ. ಪೂರ್ಣಾಹುತಿ. ಬಲಿಹರಣ, ಕುಮಾರಿ, ಸುವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ. ಅಷ್ಟಾವಧಾನ ಸೇವೆ. ಪ್ರಸಾದ ವಿನಿಯೋಗ. ಸ್ಥಳ: ತ್ರಯೀ ನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್, ಜಯಲಕ್ಷ್ಮೀಪುರಂ.
- **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯಸ್ವಾಮಿ ಟೆಂಪಲ್ ಟ್ರಸ್ಟ್:** 60ನೇ ವರ್ಷದ ತೈಪೂಸಂ ಮಹೋತ್ಸವ–2026. ಸಂಜೆ 6.30ಕ್ಕೆ ವಿದುಷಿ ಎಸ್. ಸೌಮ್ಯರಾಣಿ ಮತ್ತು ತಂಡದವರಿಂದ ನೃತ್ಯ ಕಾರ್ಯಕ್ರಮ. ವಿದುಷಿ ಶಾಂತಲ ಶ್ರೀತ್ರೆ ಪುರುಷೋತ್ತಮ್ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ. ಸ್ಥಳ; ದೇವಸ್ಥಾನದ ಆವರಣ, ವಿಶ್ವೇಶ್ವರನಗರ.
- **ಸಾಧನಾ ಮಂದಿರ, ಮೈಸೂರು:** ಸುಲಭ, ಸರಳವಾಗಿ, ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆಗೆ ತರಬೇತಿ, ಸ್ವಾಮಿ ಹಂಸಾನಂದ ಅವರಿಂದ. ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್.ಮೊಹಲ್ಲಾ. ಸಂಜೆ 6.30ರಿಂದ.
- **ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ, ಶ್ರೀರಂಗಪಟ್ಟಣ:** ರಾಮಾಯಣ ಪ್ರವಚನ ಮಾಲಿಕೆ, (ಕಿಷ್ಕಿಂಧಾ ಕಾಂಡ–ಪ್ರವಚನ 8ನೇ ಸರಣಿ, ವಿಮರ್ಶಕ ಚಿಂತಕ ವಿದ್ವಾನ್ ಹ.ನಾ.ಭಟ್ ಅವರಿಂದ. ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ.ವಾಸುದೇವಾಚಾರ್ಯ ಭವನ. ಜೆಎಲ್‌ಬಿ ರಸ್ತೆ. ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ–ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ ಎ.ಎಸ್.ನಾಗಲಕ್ಷ್ಮಿ, ವ್ಯಾಖ್ಯಾನ –ಪ್ರೊ.ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 –ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ. ಪ್ರಾಯೋಜಕರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ತೆಲುಗು ಅಧ್ಯಯನ ಮತ್ತು ಸಂಶೋಧನ ವಿಭಾಗದಲ್ಲಿನ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಮುಖ್ಯಸ್ಥರು ಹಾಗೂ ಡೀನ್ ಅಕಾಡೆಮಿಕ್ ಪ್ರೊ.ಎಂ.ರಾಮನಾಥ ನಾಯ್ಡು ಅವರೊಂದಿಗಿನ ಸಂದರ್ಶನದ ಮೊದಲ ಭಾಗ. ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ: ಎನ್.ಕೇಶವಮೂರ್ತಿ, 8.30–ಕರೆಗೊಂದು ಗೀತೆ –ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 9.05 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10–ಕರೆಗೊಂದು ಗೀತೆ –ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ವಿದ್ವಾನ್.ಎಸ್.ಬಾಲಚಂದರ್, ವೀಣಾವಾದನ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ. ಪ್ರಸ್ತುತಿ: ಆರ್.ಲೋಕೇಶ್ವರಿ. ಬಿ.ಜಿ.ಕವಿತಾ, ಮಧ್ಯಾಹ್ನ 12.05 ವನಿತಾ ವಿಹಾರ: ಮಕ್ಕಳ ಪರೀಕ್ಷಾ ತಯಾರಿಯಲ್ಲಿ ಪೋಷಕರ ಪಾತ್ರ ಕುರಿತು ಶಿಕ್ಷಣ ಕ್ಷೇತ್ರದ ರಾಜ್ಯ ಸಂಪನ್ಮೂಲ ವ್ಯಕ್ತಿ, ಪಠ್ಯ ಪರಿಷ್ಕರಣ ಸಮಿತಿ ಸದಸ್ಯರು ಹಾಗೂ ತರಬೇತುದಾರರಾದ ಎಂ.ದಿವಾಕರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ನೇತ್ರಾ.ಕೆ, **ಮಧ್ಯಾಹ್ನ** 12.35 ದೇವರನಾಮ, 12.45–ಕನ್ನಡದಲ್ಲಿ ಭಾಷಣ–ಕನ್ನಡ ನವೋದಯ ಸಾಹಿತ್ಯದಲ್ಲಿ ಗಾಂಧಿ ಈ ಕುರಿತು ಮಾತನಾಡುತ್ತಾರೆ–ಡಾ.ದಿವ್ಯಾ.ಕೆ.ಎಲ್, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ. ಪ್ರಧಾನಮಂತ್ರಿ ಬೀದಿಬದಿ ವ್ಯಾಪಾರಿಗಳ ಆತ್ಮ ನಿರ್ಭರ ನಿಧಿ ಯೋಜನೆ ಕುರಿತು ಮಾತನಾಡುತ್ತಾರೆ–ಬಿ.ಎಂ.ಪ್ರಭುದೇವ. 1.20 ಭಾವಗೀತೆಗಳು, 2.40–ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಲ್. ವಸಂತಕುಮಾರಿ– ಹಾಡುಗಾರಿಕೆ, 3.30–ಹಿಂದಿ ಚಿತ್ರಗೀತೆಗಳು, 5.00 ಪ್ರಾಯೋಜಿತ ಕಾರ್ಯಕ್ರಮ : ನಿರಾಮಯ– ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು : ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು. ಭಾಗವಹಿಸುತ್ತಾರೆ– ಡಾ.ಹೇಮಪ್ರಿಯಾ ಲಾಲ್ ಚಂದ್, ವಿಷಯ–ಸರ್ವೈಕಲ್ ಕ್ಯಾನ್ಸರ್ ಲಸಿಕೆ, ಪ್ರಸ್ತುತಿ–ಡಾ.ಕುಲದೀಪ್.ಎನ್ ಹಾಗೂ ತೇಜಸ್ವಿನಿ ಗಿರೀಶ್, 5.35 ಚಿತ್ರಗೀತೆ, 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ. ಪ್ರಾಯೋಜಕರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ತೆಲುಗು ಅಧ್ಯಯನ ಮತ್ತು ಸಂಶೋಧನ ವಿಭಾಗದಲ್ಲಿನ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಮುಖ್ಯಸ್ಥರು ಹಾಗೂ ಡೀನ್ ಅಕಾಡೆಮಿಕ್ ಪ್ರೊ.ಎಂ.ರಾಮನಾಥ ನಾಯ್ಡು ಅವರೊಂದಿಗಿನ ಸಂದರ್ಶನದ ಎರಡನೇ ಭಾಗ. ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ: ಎನ್.ಕೇಶವಮೂರ್ತಿ, 6.50 ಕೃಷಿರಂಗ–ಕಿಸಾನ್‌ವಾಣಿ –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮತ್ತು ಕೃಷಿ ಈ ಕುರಿತು ಸೋಮವಾರ ಪೇಟೆಯ ಮೀನುಗಾರಿಕಾ ಇಲಾಖೆ ಸಹಾಯಕ ನಿರ್ದೇಶಕರಾದ ಮಿಲನ.ಕೆ.ಭರತ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಪಂಡಿತ್ ಸಾಬ್ರಿ ಖಾನ್ –ಸಾರಂಗಿ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಲಾಲ್ಗುಡಿ.ಜಿ.ಜೆ.ಆರ್.ಕೃಷ್ಣನ್ ಹಾಗೂ ಲಾಲ್ಗುಡಿ ವಿಜಯಲಕ್ಷ್ಮಿ ಅವರ ಯುಗಳ ವೈಯೋಲಿನ್ ವಾದನ. 10.00 ಚೈತ್ರವನ –ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ.

ಪುಸ್ತಕ ಪ್ರೇಮಿ ಅಂಕೇಗೌಡರಿಗೆ ಒಲಿದ ಪದ್ಮಶ್ರೀ


ಅಂಕೇಗೌಡರು

ಪಾಂಡವಪುರ, ಜ.25– ಪುಸ್ತಕಗಳನ್ನೇ ತನ್ನ ಜೀವಾಳ ಎಂದು ಕುಟುಂಬಕ್ಕಿಂತಲೂ ಹೆಚ್ಚು ಪ್ರೀತಿಸಿದ 'ಪುಸ್ತಕಮನೆ' ಎಂದೇ ಪ್ರಖ್ಯಾತಿ ಗಳಿಸಿರುವ ಅಂಕೇಗೌಡರಿಗೆ ಕೇಂದ್ರ ಸರಕಾರ ಪದ್ಮಶ್ರೀ ಪ್ರಶಸ್ತಿ ಘೋಷಿಸಿದ್ದು, ದಶಕಗಳ ಕಾಲ ಪುಸ್ತಕ ಪ್ರೀತಿಸಿದ್ದಕ್ಕೆ ಸಿಕ್ಕ ಫಲವಾಗಿದೆ.

ಪಾಂಡವಪುರ ತಾಲೂಕಿನ ಹರಳಹಳ್ಳಿ ಎಂಬ ಗ್ರಾಮದಲ್ಲಿ ಪುಸ್ತಕ ಮನೆ ಆರಂಭಿಸಿದ ಅಂಕೇಗೌಡರಿಗೆ ಎದುರಾದ ಕಷ್ಟಗಳು ಅಷ್ಟಿಷ್ಟಲ್ಲ. ತಮ್ಮ ನೌಕರಿಯನ್ನೇ ಪುಸ್ತಕಕ್ಕಾಗಿ ತ್ಯಾಗ ಮಾಡಿದ ಅಂಕೇಗೌಡರು ಇಂದು ಪದ್ಮಶ್ರೀಯವರೆಗೂ ಬೆಳೆದು ನಿಂತಿದ್ದಾರೆ. ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ 1949ರ ಅಕ್ಟೋಬರ್ 17ರಂದು ಬಡ ರೈತ ಕುಟುಂಬದಲ್ಲಿ ಜನಿಸಿದರು. ಇವರ ತಂದೆ ಮರೀಗೌಡ, ತಾಯಿ ನಿಂಗಮ್ಮ, ಅನರಕ್ಷತೆ, ಬಡತನ ತುಂಬಿದ ಕುಟುಂಬದ ಹಿನ್ನೆಲೆ ಹೊಂದಿದ ಇವರ ಶೈಕ್ಷಣಿಕ ಹಾದಿ ತುಂಬಾ ಸ್ವಾರಸ್ಯಕರವಾಗಿದೆ.

ನೇರವಾಗಿ 7ನೇ ತರಗತಿ ಪಬ್ಲಿಕ್ ಪರೀಕ್ಷೆಗೆ ಹಾಜರು: ಚಿನಕುರಳಿಯಲ್ಲಿ 5ನೇ ತರಗತಿಯ ಓದು ಮುಗಿಯುತ್ತಿದ್ದಂತೆಯೇ ತಂದೆ ಕುರಿ ಕಾಯುವುದಕ್ಕೆ ನೇಮಿಸಿದರು. ಕುರಿ ಕಾಯುವ ಕೆಲಸದಲ್ಲಿ ನಿರತರಾಗಿದ್ದರೂ, ಇವರಲ್ಲಿ ಓದಿನ ಆಸಕ್ತಿಯೇನು ಕುಂದಿರಲಿಲ್ಲ. ಇವರ ಓದಿನ ಆಸಕ್ತಿಯನ್ನು ಗಮನಿಸಿದ ಪರಮೇಶ್ವರಯ್ಯ, ಅನಂತಯ್ಯ ಎಂಬ ಶಿಕ್ಷಕರ ಸಹಾಯದಿಂದ 7ನೇ ತರಗತಿಯ ಪಬ್ಲಿಕ್ ಪರೀಕ್ಷೆಯನ್ನು ನೇರವಾಗಿ ತೆಗೆದುಕೊಂಡು ಉತ್ತೀರ್ಣರಾಗಿ 10ನೇ ತರಗತಿವರೆಗಿನ ಶಿಕ್ಷಣವನ್ನು ಆ ಗ್ರಾಮದಲ್ಲೇ ಪಡೆದರು.

ಮನೆಯವರ ವಿರೋಧದ ನಡುವೆಯೂ ಶಿಕ್ಷಣ: ಮುಂದೆ ಹಣಕಾಸಿನ ತೀವ್ರ ಮುಗ್ಗಟ್ಟು ಹಾಗೂ ಮನೆಯವರ ವಿರೋಧದ ನಡುವೆಯೂ ಇಂಟರ್ ಮೀಡಿಯೆಟ್ ಪದವಿಗಾಗಿ ಪಾಂಡವಪುರಕ್ಕೆ ಬಂದು ಒಪ್ಪೊತ್ತಿನ ಊಟ, ಸ್ಕಾಲರ್‌ಶಿಪ್ ನೆರವಿನಿಂದ ಓದು ಮುಗಿಸಿದರು. ಆ ನಂತರ ಮತ್ತೆ ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಗಲಿಲ್ಲ. ಯಾವುದಾದರೊಂದು ಕೆಲಸಕ್ಕೆ ಸೇರುವುದು ಅನಿವಾರ್ಯವಾಯಿತು. ಇಂಟರ್ ಮೀಡಿಯೆಟ್ ಮುಗಿಸಿದ ನಂತರ ಇವರು ಸೇರಿದ್ದು, ಅಂದಿನ ಎಂಎಸ್‌ಆರ್‌ಟಿಸಿ (ಮೈಸೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ) ಅಲ್ಲಿ ಕಂಡಕ್ಟರ್ ಆಗಿ ವೃತ್ತಿ ಪ್ರಾರಂಭಿಸಿದರು.

ವಿದ್ಯಾಭ್ಯಾಸ ಮುಂದುವರಿಕೆ: ಇಲ್ಲಿ ಕೆಲಸ ಮಾಡುತ್ತಿದ್ದ ಸಂಧರ್ಭದಲ್ಲಿ ಇಂಟರ್ ಮೀಡಿಯೆಟ್‌ನಲ್ಲಿ ಮೇಷ್ಟ್ರಾಗಿದ್ದ ಗೋಪಿನಾಥ್ ಬರ್ಕಿ ಅವರ ಮಾತುಗಳಿಂದ ಇವರು ಬದುಕು ಗಮನಾರ್ಹವಾದ ತಿರುವನ್ನು ಪಡೆಯಿತು. ಮತ್ತೆ ವಿದ್ಯಾಭ್ಯಾಸದತ್ತ ಮುಖ ಮಾಡಿದ ಅಂಕೇಗೌಡರು 1971–1973ರಲ್ಲಿ ಮೈಸೂರಿನ ಮಹಾರಾಜ ಸಂಜೆ ಕಾಲೇಜಿನಲ್ಲಿ ಬಿ.ಎ ಪದವಿ, 1976–1977ರಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಎಂ.ಎ ಪದವಿ ಪಡೆದುಕೊಂಡರು.

ಸಂಬಳದ ಶೇ.60ರಷ್ಟು ಹಣದಲ್ಲಿ ಪುಸ್ತಕ ಖರೀದಿ: ಸಾಹಿತ್ಯದ ವಿದ್ಯಾರ್ಥಿಯಾದರೂ ಇವರು ಸೇರಿದ್ದು, ಪಾಂಡವಪುರದ ಸಹಕಾರ ಸಕ್ಕರೆ ಕಾರ್ಖಾನೆಯ ಸಾಮಾನ್ಯ ದಿನಗೂಲಿ ನೌಕರರಾಗಿ ಕ್ರಮೇಣ ಮೇಲಾಧಿಕಾರಿಯಾಗಿ ಕಾರ್ಯ ನಿರ್ವಹಿಸಿ ತಮ್ಮ ಸಂಬಳದ ಶೇ.60ರಷ್ಟು ಭಾಗವನ್ನು ಪುಸ್ತಕ ಖರೀದಿಗೆ ಮೀಸಲಿಟ್ಟರು. ಪುಸ್ತಕಗಳ ಖರೀದಿಯಿಂದ ಗ್ರಂಥ ರಾಶಿಯೇ ಸೃಷ್ಟಿಯಾಯಿತು. ಇದನ್ನು ಕಾಪಾಡುವ ದೃಷ್ಟಿಯಿಂದ ಕೆಲಸದಿಂದ ಸ್ವಯಂ ನಿವೃತ್ತಿ ತೆಗೆದುಕೊಂಡು ಪುಸ್ತಕಗಳ ಪೋಷಣೆಯಲ್ಲಿ ತೊಡಗಿದರು.

ಪುಸ್ತಕಗಳ ದಾಹ: ಅಂಕೇಗೌಡರ ಪುಸ್ತಕ ಸಂಗ್ರಹ ಆರಂಭವಾದುದ್ದು, ಇವರು ಬಿ.ಎ ಓದುತ್ತಿದ್ದ ದಿನಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರೆಸ್‌ನಲ್ಲಿ ಉ.ಕಾ. ಸುಬ್ಬರಾಯಾಚಾರ್ ಅವರು ಅಧಿಕಾರದಲ್ಲಿದ್ದಾಗ ಬಡ ವಿದ್ಯಾರ್ಥಿಗಳಿಗಾಗಿದ್ದ ಅರ್ನ್ ಅಂಡ್ ಲರ್ನ್ ಯೋಜನೆಯಡಿಯಲ್ಲಿ ಕೆಲಸ ಮಾಡಿ ಬಂದ 5 ರೂ. ಹಣದಲ್ಲಿ ರಾಮಕೃಷ್ಣ ಮಿಷನ್ ಪ್ರಕಟಣೆಯ ಸಣ್ಣ ಸಣ್ಣ ಪುಸ್ತಕಗಳನ್ನು ಕೊಳ್ಳುವ ಮೂಲಕ ಸಂಗ್ರಹ ಆರಂಭಿಸಿದರು. ಆರಂಭದಲ್ಲಿ ನಿಧಾನವಾಗಿ ನಡೆದ ಈ ಕಾರ್ಯ ಅನಂತರ ಪುಸ್ತಕದಾಹ ತೀರಿಸಿಕೊಳ್ಳುವ ಭರದಲ್ಲಿ ಸಾಗಿತ್ತು.

ಮನೆಯೇ ಪುಸ್ತಕದ ಮೆದೆ: ಪುಸ್ತಕ ಸಂಗ್ರಹಣೆ ಪಾಂಡವಪುರ ವಿಶ್ವೇಶ್ವರನಗರದ ನಾಲ್ಕೂವರೆ ಚದರದ ಅವರ ಪುಟ್ಟ ಮನೆಯಲ್ಲಿತ್ತು. ಈ ಪುಸ್ತಕದ ರಾಶಿ ಇಡೀ ಮನೆಯನ್ನೇ ಆವರಿಸಿತ್ತು. ಅವರ ಮನೆಯನ್ನು ನೋಡುತ್ತಿದ್ದವರಿಗೆ ಅದೊಂದು ಪುಸ್ತಕದ ಮೆದೆ ಎನಿಸುತ್ತಿತ್ತು. ಪುಸ್ತಕಗಳ ಬೃಹತ್ ಸಂಗ್ರಹ ಹೊಂದಿರುವ ಅಂಕೇಗೌಡರಿಗೆ ಅವುಗಳ ರಕ್ಷಣೆ ಕೂಡ ದೊಡ್ಡ ಸವಾಲು ಹಾಗೂ ಜವಾಬ್ದಾರಿಯಾಗಿತ್ತು.

ಹರಿಖೋಡೆಯವರಿಂದ ಸಹಾಯ: ದಿನದಿಂದ ದಿನಕ್ಕೆ ಹೆಚ್ಚಾದ ಸಂಗ್ರಹದ ಪುಸ್ತಕಗಳನ್ನು ರಕ್ಷಿಸಲು ಸೂಕ್ತ ವ್ಯವಸ್ಥೆ ಅನಿವಾರ್ಯವಾಗಿತ್ತು. ಈ ಸಂಧರ್ಭದಲ್ಲಿ ಉದ್ಯಮಿಯಾಗಿದ್ದ ಹರಿಖೋಡೆ ಅವರು ಬೆಂಗಾವಲಾಗಿ ನಿಂತರು. ಆಕಸ್ಮಿಕವಾಗಿ ಅಂಕೇಗೌಡರ ಮನೆಗೆ ಭೇಟಿ ನೀಡಿದ ಹರಿಖೋಡೆ ಅವರು ಇವರ ಪುಸ್ತಕ ಸಂಗ್ರಹ ನೋಡಿ ಬೆರಗಾದರು. ಕೆಲಸಕ್ಕೆ ತ್ಯಾಗ ರೂಪವಿದೆ ಎಂದು ಇದರ ರಕ್ಷಣೆಗೆ ಸಹಾಯದ ಭರವಸೆ ನೀಡಿದ ಅವರು, 2005ರಲ್ಲಿ 12 ಲಕ್ಷ ರೂ. ಮೌಲ್ಯದ ನಿವೇಶನ ಖರೀದಿಸಿ ಅಂಕೇಗೌಡ ಜ್ಞಾನ ಪ್ರತಿಷ್ಠಾನದ ಅಡಿಯಲ್ಲಿ ಸುಮಾರು 80 ಲಕ್ಷ ರೂ. ವೆಚ್ಚದಲ್ಲಿ ಬೃಹತ್ ಗ್ರಂಥಾಲಯವನ್ನು ಪಾಂಡವಪುರ ಪಟ್ಟಣದ ವಿಶ್ವೇಶ್ವರ ನಗರದಲ್ಲಿ ನಿರ್ಮಿಸಿಕೊಟ್ಟರು.

ಅಂಕೇಗೌಡ ಪುಸ್ತಕ ಮನೆಯಾಗಿ ಪರಿವರ್ತನೆ: ಈ ಗ್ರಂಥಾಲಯವೇ ಈಗ ಅಂಕೇಗೌಡ ಪುಸ್ತಕ ಮನೆ ಎಂಬ ಹೆಸರಿನಲ್ಲಿ ಜನಾಕರ್ಷಣೆಯ ಕೇಂದ್ರಬಿಂದುವಾಗಿದೆ. ಪ್ರಸ್ತುತ ಈ ಬೃಹತ್ ಗ್ರಂಥಾಲಯದಲ್ಲಿ '15 ಲಕ್ಷ ಪುಸ್ತಕಗಳ ಸಂಗ್ರಹಣೆ ಇದೆ. ಪ್ರಪಂಚದ ವಿವಿಧ ಜ್ಞಾನ ಕ್ಷೇತ್ರಗಳ ಪುಸ್ತಕಗಳು ಇಲ್ಲಿ ಅಡಕವಾಗಿವೆ. ಇಲ್ಲಿ ಅಕ್ಷರ ಕಲಿಯುವ ಮಕ್ಕಳಿಂದ ಹಿಡಿದು 90 ವರ್ಷದವರೆಗಿನವರು ಓದುವಂಥ ಎಲ್ಲ ರೀತಿಯ ಅಪರೂಪದ ಪುಸ್ತಕಗಳು ಸಿಗುತ್ತವೆ. ಪುಸ್ತಕ ಮನೆ ಅಂಕೇಗೌಡರಿಗೆ ಪದ್ಮಶ್ರೀ ಪ್ರಶಸ್ತಿ ಸಿಕ್ಕಿರುವುದಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮೇನಾಗರ ಪ್ರಕಾಶ್ ಸೇರಿದಂತೆ ಅನೇಕ ಸಾಹಿತಿಗಳು, ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ.

ಪುಸ್ತಕಕ್ಕಾಗಿ ನೌಕರಿಯನ್ನು ತ್ಯಾಗ ಮಾಡಿದ ಗೌಡರ ಸಾಧನೆ ಅಪ್ರತಿಮ


ಪಾಂಡವಪುರ ಪಟ್ಟಣದ ಪುಸ್ತಕ ಪ್ರೇಮಿ ಅಂಕೇಗೌಡರು ಸಂಗ್ರಹಿಸಿರುವ ಪುಸ್ತಕ ಮನೆ.

ಸಂತಸ ತಂದಿದೆ

ನಾನು ಯಾವುದೇ ಪ್ರಶಸ್ತಿಯ ಬಗ್ಗೆಯೂ ಆಸೆ ಪಟ್ಟಿರಲಿಲ್ಲ. ಈಗ ಕೇಂದ್ರ ಸರ್ಕಾರದ ಪದ್ಮಶ್ರೀ ಮಹೋನ್ನತ ಪ್ರಶಸ್ತಿ ಬಂದಿರುವುದು ಸಂತೋಷ ತಂದಿದೆ ಎಂದು ಪುಸ್ತಕಪ್ರೇಮಿ ಅಂಕೇಗೌಡ ಪ್ರತಿಕ್ರಿಯಿಸಿದ್ದಾರೆ.

ಪದ್ಮಶ್ರೀ ಪ್ರಶಸ್ತಿ ಲಭಿಸಿರುವ ಹಿನ್ನೆಲೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅಂಕೇಗೌಡರು 20 ವರ್ಷಗಳಿಂದ ಪುಸ್ತಕ ಪ್ರೇಮಿಯಾಗಿ ಸಹೃದಯ ಆಸಕ್ತರಿಗೆ ಓದುವ ತಾಣ ಒದಗಿಸುತ್ತಿದ್ದರೂ ಯಾವುದೇ ಪ್ರಶಸ್ತಿಯ ಬೆನ್ನಹಿಂದೆ ಬೀಳದೆ ನನ್ನ ಕೆಲಸ ಮಾಡಿಕೊಂಡು ಬಂದಿದ್ದೇನೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು

ಅಂಕೇಗೌಡರಿಗೆ ಒಲಿದ ಪ್ರಶಸ್ತಿಗಳು

ಅಂಕೇಗೌಡ ಅವರ ಸಾಧನೆ ಗುರುತಿಸಿ ರಾಜ್ಯ ಸರ್ಕಾರ 2014ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಪುಸ್ತಕ ಪ್ರಾಧಿಕಾರ ನೀಡುವ ಸಾಹಿತ್ಯ ಪರಿಚಾರಕ ಪ್ರಶಸ್ತಿ, ಸುವರ್ಣ ಕರ್ನಾಟಕ–50ರ ಸಂಭ್ರಮದಲ್ಲಿ ಅಪ್ರತಿಮ ರತ್ನ ಪ್ರಶಸ್ತಿ 2011ರ 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, 2018ರಲ್ಲಿ ನಡೆದ ಪಾಂಡವಪುರ ತಾಲೂಕು 7ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ, ಮಿನಿಸ್ಟ್ರಿ ಆಫ್ ಕಾರ್ಪೋರೇಟ್ ಅಫೇರ್ಸ್ ಸಂಸ್ಥೆಯಿಂದ ಪ್ರತಿಷ್ಠಾ ವರ್ಲ್ಡ್ ರೆಕಾರ್ಡ್ ಪ್ರಶಸ್ತಿ ನೀಡಿ ಗೌರವಿಸಿದೆ. ಅಂಕೇಗೌಡರ ಪುಸ್ತಕ ಮನೆ 'ಲಿಮ್ಕಾ ಬುಕ್ ಆಫ್ ರೆಕಾರ್ಡ್' ಕೂಡ ಸೇರಿದೆ.

ಬಹುಮುಖದ ಅಂಕೇಗೌಡ: ಪತ್ನಿಯಿಂದಲೂ ಸಹಕಾರ

ಪುಸ್ತಕ ಪ್ರೇಮವು ಇಂದು ಅಂಕೇಗೌಡರನ್ನು ಎತ್ತರದ ಸ್ಥಾನದಲ್ಲಿಟ್ಟಿದೆ. ಪುಸ್ತಕ ಸಂಗ್ರಹದ ಜೊತೆಗೆ ದೇಶ ವಿದೇಶಗಳ ವೈವಿಧ್ಯಮಯ ಹಾಗೂ ಅಪರೂಪದ ನಾಣ್ಯಗಳು, ಅಂಚೆ ಚೀಟಿಗಳು, ಶುಭಾಶಯ ಪತ್ರಗಳು, ಹಳೆಯ ಕ್ಯಾಮರಾಗಳು, ಭೂಪಟಗಳು, ಇತ್ಯಾದಿಗಳಿಂದ ಕೂಡಿರುವ ಸಂಗ್ರಹ ಅವರ ಹವ್ಯಾಸದ ಬಹುಮುಖತೆ ನಮಗೆ ಪರಿಚಯಿಸುತ್ತದೆ ಇವರ ಈ ದೊಡ್ಡ ಸಾಧನೆಗೆ ಅವರ ಪತ್ನಿಯ ಸಹಕಾರವೂ ಇದೆ. ನಿವೇಶನ ಮಾರಿ ಪುಸ್ತಕ ತಂದಾಗಲೂ, ಹಬ್ಬ ಹರಿದಿನಕ್ಕೆ ಹೊಸ ಬಟ್ಟೆ ತರುವ ಬದಲು ಪುಸ್ತಕ ತಂದಾಗಲು ಬೇಸರಿಸಿಕೊಳ್ಳದೆ ಸಾಥ್ ಕೊಟ್ಟಿದ್ದಾರೆ.

ಅಭಿಷೇಕ್, ಸೂರ್ಯಕುಮಾರ್ ಭರ್ಜರಿ ಬ್ಯಾಟಿಂಗ್

ನ್ಯೂಜಿಲೆಂಡ್ ವಿರುದ್ಧ ಭಾರತಕ್ಕೆ ಸರಣಿ ಜಯ



ಗುವಾಹಟಿ, ಜ.25(ವಿವಿಹೆಚ್)– ಟೀಂ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಅವರ ಭರ್ಜರಿ ಬ್ಯಾಟಿಂಗ್ ಬಲದಿಂದಾಗಿ ನ್ಯೂಜಿಲೆಂಡ್ ವಿರುದ್ಧ 8 ವಿಕೆಟ್‌ಗಳ ಗೆಲುವು ಸಾಧಿಸುವ ಮೂಲಕ ಭಾರತ ಸರಣಿ ವಶಪಡಿಸಿಕೊಂಡಿತು.

ಇಲ್ಲಿನ ಬಾರ್ಸಪರ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 153 ರನ್ ಗಳಿಸಿತು. ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಟೀಂ ಇಂಡಿಯಾ ಕೇವಲ 60 ಎಸೆತಗಳಲ್ಲಿ 155 ರನ್‌ಗಳನ್ನು ಚಚ್ಚಿ ಗೆಲುವಿನ ನಗೆ ಬೀರಿ, ಐದು ಪಂದ್ಯಗಳ ಸರಣಿಯನ್ನು 3–0 ಮೂಲಕ ತನ್ನದಾಗಿಸಿಕೊಂಡಿತು.

ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್‌ಗೆ ಆರಂಭಿಕ ಆಘಾತ ಎದುರಾಯಿತು. ಡೆವೊನ್ ಕಾನ್ವೇ 1 ರನ್, ಟಿಮ್ ಸೀಫರ್ಟ್ 12 ರನ್‌ಗಳಿಸಿ ನಿರ್ಗಮಿಸಿದರು. ಉತ್ತಮ ಲಯದಲ್ಲಿದ್ದ ರಚಿನ್ ರವೀಂದ್ರ ಕೂಡ ಕೇವಲ 4 ರನ್ ಗಳಿಸಿ, ಹಾರ್ದಿಕ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. 34 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ನ್ಯೂಜಿಲೆಂಡ್ ತಂಡಕ್ಕೆ ಗ್ಲೆನ್ ಫಿಲಿಪ್ಸ್ 48 ರನ್ ಬಾರಿಸಿ ಆಸರೆಯಾದರು. ಇವರಿಗೆ ಮಾರ್ಕ್ ಚಾಪ್ಮನ್ 32 ರನ್‌ಗಳಿಸಿ ಸಾಥ್ ನೀಡಿದರು.

ಉಳಿದಂತೆ ಡ್ಯಾರೆಲ್ ಮಿಚೆಲ್ 14, ನಾಯಕ ಮಿಚೆಲ್ ಸ್ಯಾಂಟ್ನರ್ 27, ಕೈಲ್ ಜಾಮಿಸನ್ 3, ಮ್ಯಾಟ್ ಹೆನ್ರಿ 1 ರನ್, ಇಶ್ ಸೋಧಿ ಹಾಗೂ ಜಾಕೋಬ್ ಡಫಿ ಕ್ರಮವಾಗಿ 2 ಮತ್ತು 4 ರನ್ ಬಾರಿಸಿ ಅಜೇಯರಾಗಿ ಉಳಿದರು.

ಭಾರತದ ಪರ ಬೂಮ್ರಾ 3 ವಿಕೆಟ್ ಪಡೆದರೆ, ಹಾರ್ದಿಕ್ ಪಾಂಡ್ಯ ಹಾಗೂ ರವಿ ಬಿಷ್ಣೋಯಿ ತಲಾ 2 ವಿಕೆಟ್ ಪಡೆದು ಮಿಂಚಿದರು.

ಕಿವೀಸ್ ನೀಡಿದ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಟೀಂ ಇಂಡಿಯಾಗೆ ಅಭಿಷೇಕ್ ಶರ್ಮಾ (68 ರನ್, 20ಎ, 7ಬೌ, 5ಸಿ), ನಾಯಕ ಸೂರ್ಯಕುಮಾರ್ ಯಾದವ್ (57 ರನ್, 26ಎ, 6ಬೌ, 3ಸಿ) ಅಜೇಯ ಜೊತೆಯಾಟದ ಬಲದಿಂದ ಕೇವಲ 60 ಎಸೆತಗಳಲ್ಲಿ ಗುರಿ ಮುಟ್ಟಿ ಸಂಭ್ರಮಿಸಿತು. ಉಳಿದಂತೆ ಸಂಜು ಸ್ಯಾಮ್ಸನ್ ಗೋಲ್ಡನ್ ಡಕ್ ಆದರೆ, ಇಶಾನ್ ಕಿಶನ್ 28 ರನ್ ಗಳಿಸಿ ಉಪಯುಕ್ತ ಕಾಣಿಕೆ ನೀಡಿದರು.

ಕಿವೀಸ್ ಪರ ಮ್ಯಾಟ್ ಹೆನ್ರಿ ಹಾಗೂ ಇಶ್ ಸೋಧಿ ತಲಾ ಒಂದೊಂದು ವಿಕೆಟ್ ಪಡೆದರು. ಟೀಂ ಇಂಡಿಯಾ ಪರ ಉತ್ತಮ ಬೌಲಿಂಗ್ ಪ್ರದರ್ಶನ ತೋರಿದ ಜಸ್ಪ್ರಿತ್ ಬುಮ್ರಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ನಕ್ಕರೆ ಅದೇ ಸ್ವರ್ಗ

ಗಂಡ : ಡಾರ್ಲಿಂಗ್ ಇವತ್ತು ಊಟಕ್ಕೆ ಹೋಟೆಲ್‌ಗೆ ಹೋಗೋಣ.
ಹೆಂಡತಿ (ಸಿಟ್ಟಿನಿಂದ) : ಯಾಕೆ ನಾನು ಮಾಡೋ ಅಡುಗೆ ಬೋರಾಯ್ತ?
ಗಂಡ : ಹಾಗೇನಿಲ್ಲ... ಇವತ್ತು ಯಾಕೋ
ಪಾತ್ರೆ ತೊಳೆಯೋಕ್ಕೆ ಮೂಡ್ ಇಲ್ಲ.

ಮೈಸೂರು ಮಿತ್ರ
ಸೋಮವಾರ, ಜನವರಿ 26, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಉರಿಯುವ ಹಣತೆಗೆ ನೀರು ತಾಕಿಸಿ ನಂದಿಸುವ ಜನರಿರುವಾಗ
ಮತ್ತೆ ಮತ್ತೆ ಬೆಳಗಬೇಕೆಂಬ ಆಸೆ ನಿಲ್ಲಿಸಿ ಬಿಡುವುದೇ ಲೇಸು.

ವೇದ ಸುಳ್ಳಾದರೂ { ಕಂಕುಳಲ್ಲಿ ದೊಣ್ಣೆ,
ಗಾದೆ ಸುಳ್ಳಾಗದು { ಕೈಯಲ್ಲಿ ಶರಣಾರ್ಥಿ.

ನಿಮ್ಮ ಪತ್ರಗಳು

ವೋಟ್ ಚೋರಿ ಆಯ್ತು, ಈಗ ವಿಬಿ ಜಿ ರಾಮ್ ಜಿ ವಿರುದ್ಧ ಹೋರಾಟವೆ?

ಮಾನ್ಯರೆ,

ಎಲೆಕ್ಟ್ರಾನಿಕ್ಸ್ ಮತಯಂತ್ರಗಳ ಬಗ್ಗೆ ದೇಶವ್ಯಾಪಿ ವೋಟ್ ಚೋರಿ ಅಭಿಯಾನ ನಡೆಸಿ ನೀರೀಕ್ಷಿತ ಯಶಸ್ಸು ಸಿಗದ ಹಿನ್ನೆಲೆಯಲ್ಲಿ ಇದೀಗ ಕಾಂಗ್ರೆಸ್ ಪಕ್ಷ ವಿಬಿ ಜಿ ರಾಮ್ ಜಿ ವಿರುದ್ಧ ದೊಡ್ಡ ಮಟ್ಟದ ಹೋರಾಟಕ್ಕೆ ಮುಂದಾಗಿರುವುದು ವಿಪರ್ಯಾಸದ ಸಂಗತಿ.ಕಳೆದ ಇಪ್ಪತ್ತು ವರ್ಷಗಳಿಂದ ಜಡ್ಡುಗಟ್ಟಿದ್ದ ಮನ್ರೇಗಾವನ್ನು ರದ್ದು ಗೊಳಿಸಿ ಹೊಸ ಮಾರ್ಪಾಡಿನೊಂದಿಗೆ ಜಾರಿಗೆ ತಂದಿರುವ ವಿಬಿ ಜಿ ರಾಮ್ ಜಿ ಯೋಜನೆಗೆ ಅಪಸ್ವರ ಎತ್ತಿರುವ ಕಾಂಗ್ರೆಸ್ ಅಜೆಂಡಾದ ಹಿಂದೆ ಪಕ್ಕಾ ರಾಜಕೀಯ ಲೆಕ್ಕಾಚಾರ ಅಡಗಿರುವುದು ಸ್ಪಷ್ಟವಾಗುತ್ತಿದೆ.

ದೇಶದ ಬಹುತೇಕ ರಾಜ್ಯಗಳು ಈ ಯೋಜನೆಗೆ ಸಂಪೂರ್ಣ ಸಹಕಾರ ನೀಡಿವೆ. ತಮಿಳುನಾಡು, ಕೇರಳ ಮತ್ತು ತೆಲಂಗಾಣ ರಾಜ್ಯಗಳಲ್ಲೂ ಈ ಬಗ್ಗೆ ಅಪಸ್ವರ ಇಲ್ಲಾ. ಆದರೇ ಕರ್ನಾಟಕದಲ್ಲಿ ಮಾತ್ರ ಇದನ್ನು ಪ್ರತಿಷ್ಠೆಯಾಗಿ ಪರಿಗಣಿಸಿರುವ ಸರ್ಕಾರ ಇದಕ್ಕಾಗಿ ವಿಶೇಷ ಅಧಿವೇಷನವನ್ನು ಕರೆದು ಚರ್ಚಿಸುವ ಅವಶ್ಯಕತೆ ಇತ್ತೇ ಎಂಬ ಪ್ರಶ್ನೆ ಹುಟ್ಟು ಹಾಕುತ್ತದೆ. ಯೋಜನೆ ವಿರೋಧಿಸುವ ವರದಿಯನ್ನು ರಾಜ್ಯಪಾಲರ ಮೂಲಕ ಓದಿಸಿ ಕೇಂದ್ರ ಸರ್ಕಾರಕ್ಕೆ ಟಕ್ಕರ್ ನೀಡುವ ತಂತ್ರಕ್ಕೆ ರಾಜ್ಯಪಾಲರು ತಣ್ಣೀರೆರೆಚುವ ಮೂಲಕ ತಮ್ಮ ಜಾಣ್ಮೆ ಪ್ರದರ್ಶಿಸಿದ್ದಾರೆ.

ಇತ್ತ ಸಂವಿಧಾನದ ನಿಯಮಗಳಿಗೂ ಬದ್ಧರಾಗಿ ಅತ್ತ ಈ ಮೂಲಕ ಏನನ್ನೊ ಸಾಧಿಸಲು ಹೊರಟಿದ್ದ ಕಾಂಗ್ರೆಸ್ ಸರ್ಕಾರಕ್ಕೆ ಸರಿಯಾದ ಪೆಟ್ಟು ನೀಡಿದ್ದಾರೆ. ರಾಜ್ಯಪಾಲರ ಭಾಷಣದ ನಂತರ ವಿಧಾನ ಮಂಡಲ ಅಧಿವೇಷನದಲ್ಲಿ ನಡೆದ ಪ್ರಹಸನಗಳು ತೀರಾ ಬಾಲಿಷತನದಿಂದ ಕೂಡಿದ್ದು ಈ ಹಿಂದೆ ತಮಿಳುನಾಡು, ಪಶ್ಚಿಮ ಬಂಗಾಳ ವಿಧಾನಸಭಾ ಅಧಿವೇಶನದಲ್ಲಿ ನಡೆದ ಘಟನೆಗಳನ್ನು ನೆನಪಿಗೆ ತರುವಂತಿತ್ತು. ತಳ್ಳಾಟ, ನೂಕಾಟ, ಬಟ್ಟೆ ಹರಿದ ಪ್ರಸಂಗಗಳು ನಡೆದಿದ್ದು ಇದು ಕರ್ನಾಟಕ ವಿಧಾನಸಭೆ ಇತಿಹಾಸದಲ್ಲೇ ಪ್ರಥಮವಾಗಿದ್ದು, ಇದು ಆಡಳಿತ ಪಕ್ಷಕ್ಕೆ ಒಂದು ಕಪ್ಪು ಚುಕ್ಕೆ ಎನ್ನಬಹುದು.

ವಿಬಿಜಿ ರಾಮ್ ಜಿ ಯೋಜನೆ ಸಂಸತ್‌ನ ಎರಡೂ ಸದನಗಳಲ್ಲಿ ಅಂಗೀಕಾರವಾಗಿ ರಾಷ್ಟ್ರಪತಿಗಳು ಅಂಕಿತ ಹಾಕಿದ್ದಾರೆ. ಆದರೆ ಕಾಂಗ್ರೆಸ್ ಇದನ್ನು ಪ್ರತಿಷ್ಠೆಯಾಗಿ ಪರಿಗಣಿಸುವ ಮೂಲಕ ತನ್ನ ವರ್ಚಸ್ಸಿಗೆ ಧಕ್ಕೆ ತಂದು ಕೊಳ್ಳುತ್ತಿದೆ. ರಾಜ್ಯಪಾಲರು ರಾಷ್ಟ್ರಪತಿಗಳಿಂದ ನೇಮಕವಾಗುತ್ತಾರೆ. ರಾಷ್ಟ್ರಪತಿಗಳಿಂದ ಅಂಕಿತಗೊಂಡಿರುವ ಕಾಯಿದೆಯನ್ನು ಯಾವ ರಾಜ್ಯಪಾಲರಾದರೂ ವಿರೋಧಿಸಿ ಭಾಷಣ ಮಾಡಲು ಸಾಧ್ಯವೆ? ಇಂತಹ ಸಂದರ್ಭದ ಅರಿವಿದ್ದರೂ ಸರ್ಕಾರ ವ್ಯರ್ಥ ಕಸರತ್ತು ನಡೆಸಿ ವಿಧಾನಸಭಾ ಅಧಿವೇಶನದಲ್ಲಿ ಜಟಾಪಟಿಗೆ ಕಾರಣವಾಗಿದ್ದು ನಿಜಕ್ಕೂ ಬೇಸರದ ಸಂಗತಿ. **–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.**

ಶಾಲಾ ಮಕ್ಕಳ ಬ್ಯಾಗ್ ಹೊರೆ ತಪ್ಪಿಸಿ

ಮಾನ್ಯರೆ,

ಮಕ್ಕಳು ಶಾಲೆಗೆ ಭಾರವಾದ ಪುಸ್ತಕಗಳ ಬ್ಯಾಗ್ ಹೊರಲಾರದೆ ಹೊತ್ತು ಬೆನ್ನು ಬಾಗಿಸಿಕೊಂಡು ನಡೆಯುವ ದೃಶ್ಯ ಈಗ ಎಲ್ಲೆಡೆ ಸಾಮಾನ್ಯ. ಬ್ಯಾಗ್ ಅಲ್ಲದೆ ಲಂಚ್ ಬಾಕ್ಸ್, ವಾಟರ್ ಬಾಟಲ್ ಅವೂ ಸೇರಿ ಮತ್ತಷ್ಟು ಭಾರ ಹೊರುವ ಪರಿಸ್ಥಿತಿ ಅನಿವಾರ್ಯ ಆಗಿದೆ. ಇದಕ್ಕೊಂದು ಸಲಹೆ.

ಪ್ರತಿಯೊಂದು ಪಠ್ಯ ಪುಸ್ತಕವನ್ನು ಎರಡು ಪ್ರತ್ಯೇಕ ಭಾಗವಾಗಿ ವಿಂಗಡಿಸಿ ಎರಡು ಬೇರೆ ಬೇರೆ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದು. ಉದಾಹರಣೆಗೆ, ಒಂದು ವಿಷಯದ ಪುಸ್ತಕದಲ್ಲಿ 20 ಅಧ್ಯಾಯಗಳು ಇದ್ದರೆ ಮೊದಲ 10 ಅಧ್ಯಾಯ ಒಳಗೊಂಡ ಪುಸ್ತಕ ಭಾಗ 1 ಉಳಿದ 10 ಅಧ್ಯಾಯಗಳ ಪುಸ್ತಕ ಭಾಗ..2 ಎಂದು ಎರಡು ಪುಸ್ತಕಗಳನ್ನು ಮುದ್ರಿಸುವುದು. ಮೊದಲ ಭಾಗದ ಪಠ್ಯ ಕ್ರಮ ಮುಗಿಯುವವರೆಗೆ ಮಕ್ಕಳು ಭಾಗ 1 ಪುಸ್ತಕಗಳನ್ನು ಮಾತ್ರ ಕೊಂಡೊಯ್ಯುವುದು. ಅದಾದ ಬಳಿಕ ಭಾಗ..2 ಪುಸ್ತಕಗಳನ್ನು ಕೊಂಡೊಯ್ಯಬಹುದು. ಈ ರೀತಿ ಅನುಸರಿಸಿದರೆ ಮಕ್ಕಳ ಶಾಲಾ ಬ್ಯಾಗ್‌ಗಳ ಭಾರ ಅರ್ಧದಷ್ಟು ಕಡಿಮೆ ಮಾಡಲು ಸಾಧ್ಯ.

ಪುಸ್ತಕ ಎರಡು ಭಾಗ ಮುದ್ರಿಸಲು ಸ್ವಲ್ಪ ಹೆಚ್ಚು ಖರ್ಚು ತಗಲಿದರೂ, ಮಕ್ಕಳಿಗೆ ಇದರಿಂದ ಬೆನ್ನಿನ ಹೊರೆ ಕಡಿಮೆ ಆಗುವುದರಿಂದ ಆಗುವ ಲಾಭಕ್ಕೆ ಹೋಲಿಸಿದರೆ ಆ ಖರ್ಚು ನಗಣ್ಯ. ಈ ಸಲಹೆಯನ್ನು ಶಿಕ್ಷಣ ಇಲಾಖೆಯವರು ಪರಿಶೀಲಿಸಬೇಕೆಂದು ಮನವಿ. **–ಲಕ್ಷ್ಮಣ್ ಗೊರ್ಲಕಟ್ಟೆ, ಬೋಗಾದಿ, ಮೈಸೂರು**

ಬೆಂಗಳೂರಲ್ಲಿ ಪ್ರಾದೇಶಿಕ ನೀತಿ ಆಯೋಗದ ಕಚೇರಿ ಸ್ಥಾಪನೆಯಾಗಲಿ

ಮಾನ್ಯರೆ,

ಬೆಂಗಳೂರು ಇಂದು ಜಾಗತಿಕ ತಂತ್ರಜ್ಞಾನದ ಭೂಪಟದಲ್ಲಿ ಅಗ್ರಸ್ಥಾನದಲ್ಲಿದ್ದರೂ, ರಾಷ್ಟ್ರೀಯ ನೀತಿ ನಿರೂಪಣೆಯಲ್ಲಿ ದೆಹಲಿಯ ಏಕಪಕ್ಷೀಯ ನಿರ್ಧಾರಗಳೇ ಇಂದಿಗೂ ಮೇಲುಗೈ ಸಾಧಿಸುತ್ತಿರುವುದು ವಿಷಾದನೀಯ. ದಕ್ಷಿಣದ ರಾಜ್ಯಗಳ ಆರ್ಥಿಕ ಶಕ್ತಿ ಮತ್ತು ನವೋದ್ಯಮಗಳ ಸಾಮರ್ಥ್ಯವನ್ನು ಕೇವಲ ತೆರಿಗೆ ಸಂಗ್ರಹಕ್ಕೆ ಬಳಸಿಕೊಳ್ಳುವ ಕೇಂದ್ರ ಸರ್ಕಾರ ನೀತಿ ರೂಪಣೆಯಲ್ಲಿ ಮಾತ್ರ ಈ ಭಾಗವನ್ನು ದೂರವಿಟ್ಟಿರುವುದು ಸರಿಯಲ್ಲ.

ಬೆಂಗಳೂರಿನಲ್ಲಿ ತಕ್ಷಣವೇ ನೀತಿ ಆಯೋಗದ ಪ್ರಾದೇಶಿಕ ಕಚೇರಿ ಸ್ಥಾಪನೆಯಾಗಬೇಕು. ಇದು ಕೇವಲ ಆಡಳಿತಾತ್ಮಕ ವಿಕೇಂದ್ರೀಕರಣವಲ್ಲ ಬದಲಿಗೆ ನಮ್ಮ ನೈಜ ಸಮಯದ ನೀತಿ ಪ್ರಯೋಗ ಸಾಮರ್ಥ್ಯಕ್ಕೆ ಸಿಗಬೇಕಾದ ಮನ್ನಣೆ. ಇಸ್ರೋ ಮತ್ತು ಜಾಗತಿಕ ಸಂಶೋಧನಾ ಕೇಂದ್ರಗಳಿರುವ ಈ ನಗರವನ್ನು ಕೇವಲ ಆಜ್ಞೆ ಪಾಲಿಸುವ ಕೇಂದ್ರವಾಗಿ ನೋಡದೆ ಜಾಗತಿಕ ಪಾಲಿಸಿ ಹಬ್ ಆಗಿ ರೂಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಕೇಂದ್ರವು ತನ್ನ ಹಳೆಯ ನೀತಿ ರೀತಿಯನ್ನು ಬಿಟ್ಟು, ಪ್ರಾದೇಶಿಕ ಅಗತ್ಯಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ತಕ್ಷಣ ಕಚೇರಿಯನ್ನು ತೆರೆಯಲಿ.

–ಡಾ.ವಿಜಯಕುಮಾರ ಎಚ್.ಕೆ.

ಶ್ರೀರಾಂಪುರದ ಕಬಿನಿ ಬಡಾವಣೆಯ ರಸ್ತೆಗೆ ಡಾಂಬರು ಹಾಕಿ

ಮಾನ್ಯರೆ,

ಮೈಸೂರಿನ ಶ್ರೀರಾಂಪುರ 2ನೇ ಹಂತದಲ್ಲಿ ಬರುವ ಕಬಿನಿ ಬಡಾವಣೆಯ ಮನೆ ಮುಂದೆ (ಮನೆ ನಂ.43) ಇರುವ ರಸ್ತೆ ತುಂಬಾ ಹಾಳಾಗಿದೆ. ರಸ್ತೆಗೆ ಹಾಕಿರುವ ಡಾಂಬರು ಕಿತ್ತು ಹೋಗಿ ಜೆಲ್ಲಿಯು ರಸ್ತೆಯ ಮೇಲೆ ಹರಡಿದೆ. (ಉತ್ತರದಿಂದ ದಕ್ಷಿಣಕ್ಕೆ ಬರುವ ರಸ್ತೆಯು). ಇದರಿಂದ ಈ ರಸ್ತೆಯಲ್ಲಿ ಹಿರಿಯರು ಮತ್ತು ಮಕ್ಕಳು ಓಡಾಡಲು, ವಾಹನಗಳು ಸಂಚರಿಸಲು ಬಹಳ ಕಷ್ಟವಾಗಿದೆ. ಈ ರಸ್ತೆಗೆ ಹೊಸದಾಗಿ ಡಾಂಬರು ಹಾಕಿಸಲು ಕ್ರಮಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಲ್ಲಿ ಈ ಮೂಲಕ ಮನವಿ. **–ನೊಂದ ಕಬಿನಿ ಬಡಾವಣೆ ನಿವಾಸಿಗಳು, ಮೈಸೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಅರಿವು

ಸಾಕ್ಷರನ ಒಳಗಿರುವ ರಾಕ್ಷಸನ ಸಂಹಾರವಾಗಲಿ...!

ದೇಶದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಾಗುತ್ತಿದ್ದಂತೆ ಹಿಂಸಾಚಾರ, ಅಪರಾಧ, ವಂಚನೆ ಪ್ರಕರಣಗಳು ಕಡಿಮೆಯಾಗಬೇಕಿತ್ತು. ಆದರೆ ಸಾಕ್ಷರತೆ ಹೆಚ್ಚಾಗುತ್ತಿದ್ದಂತೆ ಸಾಕ್ಷರರಲ್ಲಿ ಮನುಷ್ಯ ಗುಣ ಗಣನೀಯವಾಗಿ ಕಡಿಮೆಯಾಗುತ್ತಾ, ರಾಕ್ಷಸಗುಣ ಹೆಚ್ಚು ಜಾಗೃತವಾದಂತೆ ಕಾಣುತ್ತಿದೆ. ಇಂದು ಸಹಕಾರ, ಸಹಿಷ್ಣುತೆ, ಸದಾಚಾರ ಕಡಿಮೆಯಾಗಿ ಅಸಹಕಾರ, ಅಸಿಹಿಷ್ಣುತೆ, ದುರಾಚಾರ ತಾಂಡವವಾಡುತ್ತಿದೆ. ಮಾನವನೊಳಗೆ ಮಾನವೀಯತೆ ವಿರಳವಾಗಿ ದಾನವತೆ ಹೆಚ್ಚಳವಾಗುತ್ತಿರುವುದು ಕಳವಳಕಾರಿಯಾಗಿದೆ. ವಿದ್ಯಾವಂತರಲ್ಲೂ ವಿಕೃತಿ ವಿಜೃಂಭಿಸುತ್ತಿರುವುದು ನಾಗರೀಕ ಸಮಾಜದಲ್ಲಿ ಒಂದು ಅಸಹಜ ಹಾಗೂ ಆತಂಕಕಾರಿ ಬೆಳವಣಿಯಾಗಿದೆ. ಶಿಕ್ಷಣ ಮನುಷ್ಯನಲ್ಲಿ ಮನುಷ್ಯತ್ವವನ್ನು ಜಾಗೃತಗೊಳಿಸುವಂತೆ ಮಾಡಬೇಕಿತ್ತು, ಆದರೆ ಅನಾರೋಗ್ಯಕರ ಸ್ಪರ್ಧೆ, ಅಸೂಯೆಯನ್ನು ವೃದ್ಧಿಸುವಂತೆ ಮಾಡುತ್ತಿರುವುದು ಭವಿಷ್ಯದ ದಿನಗಳನ್ನು ದಿಗಿಲಿನಿಂದ ನೋಡುವಂತೆ ಆಗಿದೆ.

ಒಬ್ಬರ ಗೆಲುವು ನಿನಗೆ ಸಂತೋಷ ತಂದರೆ ನಿನ್ನಲ್ಲಿ ಮಾನವೀಯತೆ ಮನೆ ಮಾಡಿದೆ ಎಂದರ್ಥ. ಒಬ್ಬರ ಸೋಲು ನಿನಗೆ ಸಂಭ್ರಮಿಸುವಂತೆ ಮಾಡಿದರೆ ನಿನ್ನಲ್ಲಿ ರಾಕ್ಷಸ ಗುಣ ಜಾಗೃತವಾಗಿದೆ ಎಂದರ್ಥ. ಹಿಂದೆ ನಮ್ಮ ದೇಶ, ನಮ್ಮ ರಾಜ್ಯ, ನಮ್ಮ ಜಿಲ್ಲೆ, ನಮ್ಮ ತಾಲೂಕು, ನಮ್ಮೂರು, ನಮ್ಮನೆ ಹೀಗೆ ಯಾರೇ ಸಾಧನೆ ಮಾಡಿದರೂ ಸಂಭ್ರಮಪಡುತ್ತಿದ್ದರು. ಈಗ ಸಂಭ್ರಮಿಸುವವರಷ್ಟೇ ಹೊಟ್ಟೆಕಿಚ್ಚು ಪಡುವವರು ಹೆಚ್ಚಾಗುತ್ತಿದ್ದಾರೆ. ಹಿಂದೆ ರಕ್ತ ಸಂಬಂಧಿಗಳು ಸಾಧನೆ ಮಾಡಿದರೆ ತಮ್ಮ ಮನೆಯ ಮಕ್ಕಳೇ ಸಾಧನೆ ಮಾಡಿದಷ್ಟು ಕೊಂಡಾಡುವವರು ಹೆಚ್ಚಾಗಿದ್ದರು. ಆ ಮೂಲಕ ತಮ್ಮ ವಿಶಾಲ ಹೃದಯ, ಪ್ರಶಂಸಿಸುವ ಗುಣವನ್ನು ತೋರುತ್ತಿದ್ದರು. ಆದರೆ ಇಂದು ಸಾಧಕರಲ್ಲೂ ಏನಾದರೂ ಹುಳುಕು ಹುಡುಕುವುದು, ಅವರ ಇತಿಹಾಸ ನಮಗೆ ಗೊತ್ತಿಲ್ಲವೇ? ಯಾರದೋ ಶಿಫಾರಸ್ಸಿನಿಂದ ಸಾಧನೆಯಾಗಿದೆ.... ಹೀಗೆ ಸಾಧನೆಯನ್ನು ಹೊಗಳುವುದಕ್ಕಿಂತ ಅಲ್ಲಗಳೆಯುವವರೇ ಹೆಚ್ಚಾಗಿದ್ದಾರೆ.

ಶುದ್ಧವಾದ ಮನಸ್ಸು ವಿಶಾಲ ಹೃದಯ, ನಿಸ್ವಾರ್ಥ ಮನೋಭಾವವಿದ್ದರೆ ಬದುಕು ನಿತ್ಯ ಆನಂದಮಯವಾಗಿರುತ್ತದೆ. ಕಲುಷಿತ ಮನಸ್ಸು, ಸಂಕುಚಿತ ಹೃದಯ ಹಾಗೂ ಸ್ವಾರ್ಥಪರತೆ ಇದ್ದರೆ ಬದುಕಿನಲ್ಲಿ ನಿತ್ಯ ಆನಂದ ಮಾಯವಾಗಿರುತ್ತದೆ. ಒಬ್ಬರಿಗೆ ಒಳ್ಳೆಯದನ್ನು ಮಾಡಿ, ಅವರ ಮುಖದಲ್ಲಿ ಮೂಡುವ ಸಮಾಧಾನ, ಮುಗುಳ್ನಗೆಯಿಂದ ಅಮಿತಾನಂದ ದೊರಕುತ್ತದೆ. ಅದೇ ಮಾನವಾನಂದವಾಗಿರುತ್ತದೆ. ಒಬ್ಬರಿಗೆ ಕೆಟ್ಟದ್ದನ್ನು ಮಾಡಿ, ಅವರು ನರಳುತ್ತಿದ್ದರೆ, ನಲುಗುತ್ತಿದ್ದರೆ ಅದರಿಂದ ಆನಂದ ದೊರಕಿದರೆ ಅದು ದಾನವಾನಂದವಾಗಿರುತ್ತದೆ. ಜಗವೆಲ್ಲ ನಗುತಿರಲಿ, ಜಗದಳಲು ನನಗಿರಲಿ ಎಂಬ ಕವಿ ಈಶ್ವರ ಸಣಕಲ್ಲ ಅವರ ಈ ವಾಣಿಯು ಮಾನವತೆಯ ಪರಾಕಾಷ್ಠೆಯನ್ನು ಹೇಳುತ್ತದೆ.

ಮನುಷ್ಯ ನಿತ್ಯವೂ ಆನಂದ ಹಾಳಾಗುವಂತಹ ಕರ್ಮಗಳನ್ನು ಪಾಪಕೃತ್ಯಗಳನ್ನು ಮಾಡಿ, ನಂತರ ಆನಂದಕ್ಕಾಗಿ ಅಲೆದಾಡುವುದು ಹಾಸ್ಯಾಸ್ಪದವೆನಿಸುತ್ತದೆ. ಸತ್ಯ, ಶುದ್ಧವಾದ ಕಾಯಕದಿಂದಲೂ ಆನಂದ ಕಾಣಬಹುದು. ಒಬ್ಬರ ಏಳ್ಗೆಯನ್ನು ಸಹಿಸಿಕೊಳ್ಳುವಷ್ಟು ಅವರ ಸಾಧನೆಯನ್ನು ಪ್ರಶಂಸಿಸುವಷ್ಟು ಹೃದಯವಂತಿಕೆ ಇದ್ದರೆ, ಮನುಷ್ಯ ಆನಂದವನ್ನು ಹುಡುಕಿಕೊಂಡು ಹೋಗುವ ಅಗತ್ಯವೇ ಇರುವುದಿಲ್ಲ.

ಈರ್ಷೆಯಿಂದ ಮನುಷ್ಯ ಅನೇಕ ಆನಂದದ ಕ್ಷಣಗಳನ್ನು ಕಳೆದುಕೊಳ್ಳುತ್ತಾನೆ. ಎಷ್ಟೋ ಜನರ ಮನೋಭಾವ ಹೇಗಿದೆ ಎಂದರೆ ತನಗೆ ಒಂದು ಕಣ್ಣು ಹೋದರೂ ಪರವಾಗಿಲ್ಲ, ಅನ್ಯರಿಗೆ ಎರಡು ಕಣ್ಣು ಹೋಗಲಿ ಎಂದು ಆಶಿಸುತ್ತಾರೆ. ಇಂದಿಗೂ ವಿದ್ಯಾವಂತ ಸುಮುದಾಯವು ವಾಮಾಚಾರದಂತಹ ಹೇಯ ಕೃತ್ಯಗಳಿಂದ ಒಳ್ಳೆಯವರಿಗೂ ಕೆಟ್ಟದ್ದನ್ನು ಮಾಡುವ ಮಟ್ಟಕ್ಕೆ ಇಳಿಯುತ್ತಿದೆ. ಕಪೋಕಲ್ಪಿತ ವಿಚಾರಗಳಿಂದ ಒಬ್ಬರನ್ನು ಹಣಿಯುವ, ಅವರ ಬದುಕನ್ನು ಹಾಳು ಮಾಡುವ ನೀಚಕೃತ್ಯಕ್ಕೆ ಕೈಹಾಕುತ್ತಾರೆ. ಅಸೂಯೆ ಅನ್ಯರನ್ನು ಸುಡುವ ಮೊದಲು ತನ್ನನ್ನು ಸುಡುತ್ತದೆ ಎಂಬ ಸತ್ಯದ ಅರಿವು ಅವರಿಗೆ ಇರುವುದಿಲ್ಲ. ಒಬ್ಬರ ಅವನತಿ ಬಯಸಿದರಿ ಎಂದರೆ ಮೊದಲು ನಿಮ್ಮ ಅವನತಿ ಆರಂಭ ಎಂದು ತಿಳಿಯಬೇಕು.

ಒಬ್ಬರ ಕೆಲಸ ಹಾಳಾಗಲಿ ಎಂಬ ಮನೋಭಾವ ಹೊಂದಿರುವವರನ್ನು ವಿಘ್ನಸಂತೋಷಿಗಳು ಎಂದು ಕರೆಯುತ್ತಾರೆ. ಇದೊಂದು ರಾಕ್ಷಸಿಗುಣ. ಈ ರೀತಿ ಮನೋಭಾವ ಹೊಂದಿರುವವರು ತುಂಬಾ ದೂರದವರೇನು ಆಗಿರುವುದಿಲ್ಲ. ನಮ್ಮ ಹತ್ತಿರದವರೇ ಆಗಿರುತ್ತಾರೆ. ಹಿತೈಷಿಗಳಂತೆ ಮುಖವಾಡ ಧರಿಸುವ ಅವರು ಮೂಲಭೂತವಾಗಿ ಹಿತಶತೃಗಳಾಗಿರುತ್ತಾರೆ.



> “ ಏನಾದರೂ ಆಗು ಮೊದಲು ಮಾನವನಾಗು ಎಂಬ ಕವಿವಾಣಿಯಂತೆ ಮನುಷ್ಯ ಏನೇ ಸಾಧನೆ ಮಾಡಿದರೂ ಮನುಷ್ಯತ್ವವನ್ನು ಮರೆತರೆ ಅವೆಲ್ಲವೂ ಶೂನ್ಯ ಎನಿಸಿಬಿಡುತ್ತದೆ. ಸದ್ಭಾವನೆ, ಸದಾಚಾರಗಳಿಂದ ಮಾನವ ಪ್ರಜ್ಞೆಯನ್ನು ಜಾಗೃತಗೊಳಿಸಿ ಉಳಿಸಿಕೊಳ್ಳುವ ಅಗತ್ಯವಿದೆ. ಮನುಷ್ಯ ಮಾನವನಾಗಿ ಹುಟ್ಟುವುದಿಲ್ಲ, ಮಾನವನಾಗಲು ಹುಟ್ಟುವುದು. ಮನುಷ್ಯನಲ್ಲಿ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಇರುತ್ತವೆ. ಆದರೆ ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಅಗತ್ಯವಿದೆ. ಇವುಗಳು ಮಿತಿ ಮೀರಿದಾಗಲೇ ಮಾನವೀಯತೆ ಮರೆಯಾಗಿ ದಾನವೀಯತೆ ಮೆರೆಯುತ್ತದೆ. ಈಗಾಗಲೇ ಜಗತ್ತು ಹಲವಾರು ವಿಕೃತ ಮನಸ್ಸುಗಳಿಂದ ನಲಗುತ್ತಿದೆ. ಆದ್ದರಿಂದ ಸಾಕ್ಷರನ ಒಳಗಿರುವ ರಾಕ್ಷಸನ ಸಂಹಾರ ಮಾಡುವ ಅಗತ್ಯವಿದೆ.

ಅಂತಹವರ ಬಳಿ ಸಲಹೆ ಸೂಚನೆ ಕೇಳಿದರಂತೂ ಕಥೆ ಮುಗಿಯಿತು. ದಾರಿ ತಪ್ಪಿಸುವ ಕೆಲಸವನ್ನು ನೀಟಾಗಿ ಮಾಡಿ ಮುಗಿಸುತ್ತಾರೆ. ಯಾರೋ ದೂರದವರು ನಮ್ಮ ಅಭಿವೃದ್ಧಿಯನ್ನು ಬಯಸುತ್ತಿದ್ದರೆ, ನಮ್ಮ ಹತ್ತಿರದಲ್ಲಿ ಇದ್ದುಕೊಂಡೇ, ನಮ್ಮವರಂತೆ ಕಾಣುವವರು ನಮ್ಮ ಅವನತಿ ಬಯಸುತ್ತಿರುತ್ತಾರೆ.

ಕೆಲಸ ಮಾಡುವ ಸ್ಥಳಗಳಲ್ಲಿ ರಾಕ್ಷಸಾನಂದ ಪಡೆಯುವ ಜನ ಇರುತ್ತಾರೆ. ಕ್ರಮಬದ್ಧವಾಗಿ ಕೆಲಸ ಮಾಡುವ ಶ್ರದ್ಧೆ, ಪ್ರಾಮಾಣಿಕತೆಯಿಂದ ಕೆಲಸ ಮಾಡುವ ಸಿಬ್ಬಂದಿಯನ್ನು ಅವರ ಮುಖ್ಯಸ್ಥರೇ ಇಷ್ಟಪಡುವುದಿಲ್ಲ. ಮಾಡುವ ಕೆಲಸದಲ್ಲಿ ತಪ್ಪಾದರೆ, ಸಣ್ಣಪುಟ್ಟ ವ್ಯತ್ಯಾಸಗಳಾದರೆ ಮೇಲಾಧಿಕಾರಿಗೆ ಸಂತೋಷ, ಏಕೆಂದರೆ ಅವರನ್ನು ಎಲ್ಲರೆದುರು ನಿಂದಿಸಿ ಖುಷಿಪಡಬಹುದಲ್ಲಾ? ಇಂತಹ ವಿಕೃತಾನಂದಿಗಳು ಅನೇಕ ಕಡೆ ಇರುತ್ತಾರೆ. ಕಳ್ಳರು, ಸೋಮಾರಿಗಳು, ಅಪ್ರಾಮಾಣಿಕರ ಜೊತೆ ರಾಜಿ ಮಾಡಿಕೊಂಡು ನಗು ನಗುತಾ ಇರುವ ಅವರು ಪ್ರಾಮಾಣಿಕರನ್ನು ಸಹಿಸಿಕೊಳ್ಳುವುದಿಲ್ಲ ಎಂದರೆ ಅವರನ್ನು ಮಾನವರೆನ್ನಲು ಸಾಧ್ಯವೇ?

ದೃಶ್ಯ ಮಾಧ್ಯಮವು ಜನರ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಸಿನೆಮಾ ಆಗಲಿ, ಟಿ.ವಿ.ಧಾರಾವಾಹಿಗಳಾಗಲಿ, ಸಾಮಾಜಿಕ ಜಾಲತಾಣಗಳಲ್ಲಿ ಬರುವ ರೀಲ್ಸ್‌ಗಳಾಗಲಿ ಜನರಲ್ಲಿ ಧನಾತ್ಮಕ ಮನೋಭಾವ ವೃದ್ಧಿಸುವಂತಹ ಕಂಟೆಂಟ್‌ಗಳನ್ನು ಹೊಂದಿರದೆ, ಮಾನಸಿಕ ಸ್ವಾಸ್ಥ್ಯ ಹಾಳುಮಾಡುವ, ಹಿಂಸಾಚಾರವನ್ನು ವೈಭವೀಕರಿಸುವ, ವಾಮಮಾರ್ಗದಲ್ಲಿ ಒಬ್ಬರನ್ನು ನಾಶಪಡಿಸುವ, ಹೀಗೆ ಕೆಟ್ಟ ಸಂದೇಶಗಳೇ ರಾರಾಜಿಸುತ್ತಿವೆ. ಇವುಗಳಿಂದ ಪ್ರೇರೇಪಿತರಾಗುವ ಜನರು ಕೊಲೆ, ಸುಲಿಗೆ, ಅತ್ಯಾಚಾರದಂತಹ ಕೃತ್ಯಗಳು ಸಾಮಾನ್ಯ ಎಂಬಂತೆ ಪರಿಗಣಿಸಿ, ಕಾನೂನಿನ ಮೇಲೆ ಭಯವಿಲ್ಲದೆ, ನೈತಿಕ ಪ್ರಜ್ಞೆಯಿಲ್ಲದೆ, ಸಮಾಜದ ಅಳುಕಿಲ್ಲದೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ.

ಹಿಂದೆ ಮಕ್ಕಳು ಧನಾತ್ಮಕ ಮನೋಭಾವ ಮೂಡಿಸುವಂತಹ ಆಟಗಳಲ್ಲಿ ಭಾಗಿಯಾಗುತ್ತಿದ್ದರು. ಅವರ ಬುದ್ಧಿವಂತಿಕೆ ವೃದ್ಧಿಯಾಗುವುದರ ಜೊತೆಗೆ ದೈಹಿಕವಾಗಿ ಸದೃಢರಾಗಿರುತ್ತಿದ್ದರು. ಆದರೆ ಇಂದಿನ ಮಕ್ಕಳು ವಿಡೀಯೋ ಗೇಮ್‌ಗಳಲ್ಲಿ ಕುಳಿತು ಆಟವಾಡುತ್ತಿದ್ದಾರೆ, ಅದೂ ಎಂತಹ ಗೇಮ್‌ಗಳನ್ನು ಆಡುತ್ತಿದ್ದಾರೆ. ಪಬ್ಜಿ, ಫ್ರೀ ಫೈರ್ ನಂತಹ ವಿಧ್ವಂಸಕ ಗೇಮ್‌ಗಳನ್ನು ಆಡುತ್ತಿದ್ದಾರೆ. ಗುಂಡಿಕ್ಕಿ ಕೊಂದು ಮುಂದುವರಿಯುವಂತಹ ಈ ಆಟಗಳು ಮಕ್ಕಳ ಮನಸ್ಸಿನಲ್ಲಿ ವಿಕೃತಾನಂದವನ್ನು ಜಾಗೃತಗೊಳಿಸುತ್ತಾ, ಮುಂದೆ ಸಮಾಜದಲ್ಲಿ ಹಿಂಸಾಚಾರ ಕಂಡಾಗ, ಮಾಡಿದಾಗ ಅವರಿಗೆ ಯಾವುದೇ ಅಪರಾಧ ಮನೋಭಾವ ವಿರಲ್ಲ. ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳ ಅವಶ್ಯವಿದೆ.

ಯಾರಾದರೂ ತೀರಿ ಹೋದರೆ ಸಾಮಾಜಿಕ ಜಾಲತಾಣದಲ್ಲಿ ತಮ್ಮ ಸಂತೋಷ ವ್ಯಕ್ತಪಡಿಸುವ ವಿಕೃತ ಮನೋಭಾವವು ಕೆಟ್ಟ ಬೆಳವಣಿಗೆ. ಒಬ್ಬರ ಸಾಧನೆಯನ್ನು ಸಾಮಾಜಿಕ ಜಾಲತಾಣದಲ್ಲಿ ಕೊಂಡಾಡುವಷ್ಟೇ ಒಬ್ಬರ ಸೋಲು, ಸಾವನ್ನು ಸಹ ಸಂಭ್ರಮಿಸುವವರು ಇದ್ದಾರೆ. ಇವರಾರು ಅವಿದ್ಯಾವಂತರಲ್ಲ, ವಿದ್ಯಾವಂತ ಸಮುದಾಯದಲ್ಲಿಯೇ ಇಂತಹ ವಿಕೃತ ಮನೋಭಾವ ವೃದ್ಧಿಸುತ್ತಿರುವುದು ಅನಾರೋಗ್ಯಕರ ಬೆಳವಣಿಗೆಯಾಗಿದೆ.

ಯಾರಾದರೂ ಸಾಧನೆ ಮಾಡಿದಾಗ ಕೆಲವರು ಅವರು ಒಬ್ಬರೇ ಇದ್ದಾಗ ಪ್ರಶಂಸೆ ಮಾಡುತ್ತಾರೆ. ಆದರೆ ಏನಾದರೂ ಸಣ್ಣ ತಪ್ಪಾದರೆ ಸಾರ್ವಜನಿಕವಾಗಿ ಟೀಕೆ ಮಾಡಿ ಮಾನಹರಣ ಮಾಡುತ್ತಾರೆ. ಎಷ್ಟೋ ಜನ ಮೇಲ್ನೋಟಕ್ಕೆ ಒಳ್ಳೆಯವರಂತೆ ಕಂಡರೂ ಒಳಗೆ ಒಂದು ವಿಕೃತ ಮನಸ್ಸನ್ನು ಹೊಂದಿರುವುದು ವಿಷಾಧನೀಯ. ನಗುನಗುತ್ತಲೇ ಮಾತನಾಡುವ ಇವರು ಇತರರ ಬಗ್ಗೆ ಕುಹಕವಾಡುವ, ಅಸೂಯೆಯ ಮಾತುಗಳನ್ನಾಡಿ ಒಬ್ಬರ ಮನಸ್ಸನ್ನು ನೋಯಿಸಿಬಿಡುತ್ತಾರೆ. ಉದಾಹರಣೆಗೆ ತಮ್ಮ ಮಕ್ಕಳು ಉತ್ತಮ ಫಲಿತಾಂಶ ಪಡೆದು, ನೆರೆಹೊರೆಯವರ ಮಕ್ಕಳು, ಬಂಧುಗಳ ಮಕ್ಕಳು ಅಷ್ಟೇನೂ ಉತ್ತಮ ಫಲಿತಾಂಶ ಗಳಿಸದೇ ಇದ್ದಲ್ಲಿ, ಅಥವಾ ಫೇಲ್ ಆಗಿದ್ದಲ್ಲಿ, ಆ ವಿಚಾರ ಗೊತ್ತಿದ್ದರೂ, ಮತ್ತೆ ದೂರವಾಣಿ ಕರೆ ಮಾಡಿ ಅವರ ಮಕ್ಕಳ ಫಲಿತಾಂಶ ಕೇಳಿ ಅವರ ಮನಸ್ಸನ್ನು ನೋಯಿಸುವ ಮನೋಭಾವ ಹೊಂದಿರುತ್ತಾರೆ. ಇವರು ವಿದ್ಯಾವಂತರಾಗಿದ್ದರೂ, ವಿವೇಕದಿಂದ ನಡೆದುಕೊಳ್ಳದೆ ವಿಕೃತದಿಂದ ನಡೆದುಕೊಂಡು ತಮ್ಮ ಸಣ್ಣತನ ಪ್ರದರ್ಶಿಸಿಬಿಡುತ್ತಾರೆ.

ಅನೇಕ ಶುಭಾಶಯಗಳ ಹಿಂದೆ, ಅಭಿನಂದನೆಗಳ ಹಿಂದೆ, ಶುಭಹಾರೈಕೆಗಳ ಹಿಂದೆ ಸದ್ಭಾವನೆಗಳೇ ಇರುತ್ತವೇ ಅಂತೇನಿಲ್ಲ. ಗುಲಾಬಿ ಹೂಗಳಲ್ಲಿ ಮುಳ್ಳುಗಳು ಇರುವಂತೆ ಶುಭ ಹಾರೈಕೆಗಳಲ್ಲಿಯೂ ಮುಳ್ಳಿನಂತಹ ಅಸೂಯೆ, ಅಶುಭ ಹಾರೈಕೆಗಳು ಇರುತ್ತವೆ. ಅವುಗಳ ಬಗ್ಗೆ ಹೆಚ್ಚು ಗಮನ ಕೊಡದೆ, ಸಾಧನೆ ಮಾಡುವವರು ತಮ್ಮ ಪಥದೆಡೆಗೆ ಗಮನ ಕೊಡುವುದು ಜಾಣತನ. ಪರಿಶ್ರಮದ ಹಾದಿಯಲ್ಲಿ ಮುಳ್ಳುಗಳನ್ನು ಹಾಕಿ ತೊಂದರೆ ಕೊಡುವವರು ಸಹ ಇರುತ್ತಾರೆ. ಅವುಗಳನ್ನು ಮೆಟ್ಟಿ ನಡೆಯುವವನೆ ನಿಜ ಸಾಧಕ.

ಏನಾದರೂ ಆಗು ಮೊದಲು ಮಾನವನಾಗು ಎಂಬ ಕವಿವಾಣಿಯಂತೆ ಮನುಷ್ಯ ಏನೇ ಸಾಧನೆ ಮಾಡಿದರೂ ಮನುಷ್ಯತ್ವವನ್ನು ಮರೆತರೆ ಅವೆಲ್ಲವೂ ಶೂನ್ಯ ಎನಿಸಿಬಿಡುತ್ತದೆ. ಸದ್ಭಾವನೆ, ಸದಾಚಾರಗಳಿಂದ ಮಾನವ ಪ್ರಜ್ಞೆಯನ್ನು ಜಾಗೃತಗೊಳಿಸಿ ಉಳಿಸಿಕೊಳ್ಳುವ ಅಗತ್ಯವಿದೆ. ಮನುಷ್ಯ ಮಾನವನಾಗಿ ಹುಟ್ಟುವುದಿಲ್ಲ, ಮಾನವನಾಗಲು ಹುಟ್ಟುವುದು. ಮನುಷ್ಯನಲ್ಲಿ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಇರುತ್ತವೆ. ಆದರೆ ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಅಗತ್ಯವಿದೆ. ಇವುಗಳು ಮಿತಿ ಮೀರಿದಾಗಲೇ ಮಾನವೀಯತೆ ಮರೆಯಾಗಿ ದಾನವೀಯತೆ ಮೆರೆಯುತ್ತದೆ. ಈಗಾಗಲೇ ಜಗತ್ತು ಹಲವಾರು ವಿಕೃತ ಮನಸ್ಸುಗಳಿಂದ ನಲಗುತ್ತಿದೆ. ಆದ್ದರಿಂದ ಸಾಕ್ಷರನ ಒಳಗಿರುವ ರಾಕ್ಷಸನ ಸಂಹಾರ ಮಾಡುವ ಅಗತ್ಯವಿದೆ.

ಹೂರಣ: ರಾಕ್ಷಸಗುಣ ಹುಟ್ಟುಗುಣವಲ್ಲ, ಮನುಷ್ಯತ್ವ ಹುಟ್ಟುಗುಣ ಎಂದು ಭಾವಿಸಿದರೆ ಒಳಿತು

ಗುಂಪುಮನೆ ಯೋಜನೆಯಡಿ ಆಟೋ ಚಾಲಕರಿಗೂ ಮನೆ ನೀಡಿ

ಸರ್ಕಾರವನ್ನು ಒತ್ತಾಯಿಸಲು ಮೈಸೂರಲ್ಲಿ ಆಟೋ ಚಾಲಕರ ಸಭೆ

ಮೈಸೂರು, ಜ.25(ಜಿಎ)–ಮೈಸೂರಿನ ಕೃಷ್ಣ ಬುಲೇವಾರ್ಡ್ ರಸ್ತೆಯಲ್ಲಿರುವ ನ್ಯಾಯಲಯದ ಮುಂಭಾಗವಿರುವ ಉದ್ಯಾನವನದಲ್ಲಿ ಗುಂಪುಮನೆ ಯೋಜನೆಯಡಿ ಆಟೋ ಚಾಲಕರಿಗೆ ಮನೆಗಳನ್ನು ನೀಡಬೇಕು ಎಂಬ ಬೇಡಿಕೆ ಸೇರಿದಂತೆ ತಮ್ಮ ಹಲವಾರು ಬೇಡಿಕೆಗಳನ್ನು ಈಡೇರಿಸುವುದರೊಂದಿಗೆ ಆಟೋ ಚಾಲಕರ ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಸರ್ಕಾರವನ್ನು ಒತ್ತಾಯಿಸುವ ಸಲುವಾಗಿ ಮೈಸೂರಿನ ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಭಾನುವಾರ ಸಭೆ ನಡೆಸಿ ಚರ್ಚಿಸಲಾಯಿತು.

ಸಭೆಯಲ್ಲಿ ಸಂಘದ ಅಧ್ಯಕ್ಷ ಎಂ.ವಿ. ಶ್ರೀನಿವಾಸ್ ಮಿತ್ರ ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ಆಟೋ ಚಾಲಕರ ಅನೇಕ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ಸಾಕಷ್ಟು ಬಾರಿ ಪ್ರಯತ್ನ ಮಾಡಲಾಗಿತ್ತು. ಇತ್ತೀಚೆಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಕೇಂದ್ರ ಸಾರಿಗೆ ಸಚಿವರು, ಕಂದಾಯ ಸಚಿವರು, ಹಣಕಾಸು ಸಚಿವರಿಗೆ ಪತ್ರ ಬರೆಯಲಾಗಿತ್ತು. ಅದಕ್ಕೆ ಈಗ ಉತ್ತರ ಬಂದಿದ್ದು, ರಾಜ್ಯದ ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿ ಮಾಡಲು ಸದ್ಯದಲ್ಲಿಯೇ ಅವಕಾಶ ನೀಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದು ಸಭೆ ನಡೆಸಲಾಗುತ್ತಿದೆ ಎಂದು ಹೇಳಿದರು.



ಮೈಸೂರಿನ ನ್ಯಾಯಲಯದ ಮುಂಭಾಗವಿರುವ ಉದ್ಯಾನವನದಲ್ಲಿ ಮೈಸೂರಿನ ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಭೆ ನಡೆಸಲಾಯಿತು.

ಸಭೆಯಲ್ಲಿ ಪ್ರಮುಖವಾಗಿ ಮೈಸೂರಿನಲ್ಲಿ 25 ಸಾವಿರಕ್ಕೂ ಅಧಿಕ ಆಟೋಗಳಿವೆ. ಅವುಗಳಿಗೆ ತಕ್ಕಂತೆ ತಾತ್ಕಾಲಿಕ ರಹದಾರಿ ನೀಡಬೇಕು. ರಸ್ತೆಗಳು ಅಗಲೀಕರಣವಾಗಬೇಕಿದೆ. ಸುಸಜ್ಜಿತ ಆಟೋ ನಿಲ್ದಾಣಗಳ ಅವಕಶ್ಯಕತೆ ಇದೆ. ಗುಂಪು ಮನೆ ಯೋಜನೆ ಅಡಿ ಆಟೋ ಚಾಲಕರಿಗೂ ಮನೆ ನೀಡಬೇಕು. ಆಂಧ್ರ ಪ್ರದೇಶದಲ್ಲಿ ಸೇವಾ ಯೋಜನೆ ಅಡಿ ಆಟೋ ಚಾಲಕರಿಗೆ 15 ಸಾವಿರ ರೂ. ನೀಡುತ್ತಿರುವ ಹಾಗೇ ಕರ್ನಾಟಕದಲ್ಲಿಯೂ ನೀಡಬೇಕು ಎಂದು ತಿಳಿಸಿದರು.

ಆಟೋ ಚಾಲಕರ ಆರ್ಥಿಕ ಸ್ಥಿತಿ ದುಸ್ಥಿರವಾಗಿದ್ದು, ಅವರಿಗೆ ಹಾಗೂ ಅವರ ಕುಟುಂಬಸ್ಥರಿಗೆ ಆರೋಗ್ಯ ಸಮಸ್ಯೆ ಎದುರಾದಲ್ಲಿ ವಿಮೆ ನೀಡಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ವೇತನ ನೀಡಬೇಕು ಎಂಬ ಮುಂತಾದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುತ್ತೇವೆ ಎಂದರು.

ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಪಿ.ಸುನೀಲ್‌ಕುಮಾರ್, ಜಿ.ಪ್ರಕಾಶ್, ಆರ್.ಸುರೇಶ್, ಸುಲೇಮಾನ್, ಗೋವಿಂದರಾಜು, ದಿವಾಕರ್, ಜಗದೀಶ್ ಪಂಚಮುಖಿ, ಲೋಕೇಶ್, ಕುಮಾರ್, ಸೆಲ್ವರಾಜು, ಸುಧನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನೊಂದ ಒಂಟಿ ಜೀವಗಳಿಗೆ ಪೊಲೀಸ್ 'ಆಸರೆ'

ಮೈಸೂರು, ಜ.25(ಎಸ್‌ಪಿಎನ್)– ಒಂಟಿಯಾಗಿ ವಾಸಿಸುವ ಮಹಿಳೆಯರು ಹಾಗೂ ಹಿರಿಯ ನಾಗರಿಕರ ಸುರಕ್ಷತೆಯ ಕಾಳಜಿಯೊಂದಿಗೆ ರಾಜ್ಯ ಪೊಲೀಸ್ 'ಆಸರೆ' ವಿನೂತನ ಉಪಕ್ರಮವನ್ನು ಜಾರಿಗೆ ತಂದಿದೆ.

ಹಿರಿಯ ನಾಗರಿಕರು, ವಿಶೇಷವಾಗಿ ಒಂಟಿಯಾಗಿರುವವರು ಹೆಚ್ಚಿನ ಸಾಮಾಜಿಕ, ದೈಹಿಕ, ಮಾನಸಿಕ ಮತ್ತು ಸೈಬರ್ ಸಂಬಂಧಿತ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಪರಿಣಾಮ ಅವರು ಅಪರಾಧ, ನಿರ್ಲಕ್ಷ್ಯ, ನಿಂದನೆ ಮತ್ತು ಪ್ರತ್ಯೇಕತೆಗೆ ಗುರಿಯಾಗುತ್ತಿದ್ದಾರೆ. ಒಂಟಿಯಾಗಿ ಜೀವನ ನಡೆಸುತ್ತಿರುವ ಮಹಿಳೆಯರು ಮತ್ತು ವೃದ್ಧರ ಸಂಖ್ಯೆ ಗಣನೀಯವಾಗಿ ಹೆಚ್ಚಿರುವುದು ಸಮೀಕ್ಷೆಯಿಂದ ತಿಳಿದಿದೆ. ಅವರ ಬಗ್ಗೆ ಕಾಳಜಿ ವಹಿಸುವ ಹಾಗೂ ಅವರ ಸುರಕ್ಷತೆಗಾಗಿ ಎಲ್ಲಾ ಕ್ರಮ ಕೈಗೊಳ್ಳುವ ಆಸರೆ ಕೈಗಳು ಇಲ್ಲದೆ ಅನಾಥಭಾವದಿಂದ ಬದುಕು ಸಾಗಿಸುತ್ತಿದ್ದಾರೆ. ಇಂತಹವರೊಂದಿಗೆ ಸರ್ಕಾರ ಸದಾ ಜೊತೆಗಿರುತ್ತದೆ ಎಂಬ ಮನೋಸ್ಥೈರ್ಯ ತುಂಬುವ ಉದ್ದೇಶದಿಂದ 'ಆಸರೆ' ಯೋಜನೆಯನ್ನು ಜಾರಿಗೆ ತರಲಾಗಿದೆ.

ಇದರ ಪರಿಣಾಮಕಾರಿ ಅನುಷ್ಠಾನಗೊಳಿಸುವಲ್ಲಿ ಪೊಲೀಸ್ ಠಾಣೆಗಳ ಪಾತ್ರ ಮತ್ತು ಜವಾಬ್ದಾರಿ ನಿರ್ವಹಣೆ ಕುರಿತು ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಆದೇಶದಲ್ಲಿ ವಿವರಿಸಿದ್ದಾರೆ.

ಪಿರಿಯಾಪಟ್ಟಣ ಬಳಿ ಇಬ್ಬರು ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

ಮೈಸೂರು, ಜ.25(ಪಿಎಂ)– ಕೌಟುಂಬಿಕ ಕಲಹದಿಂದ ಬೇಸತ್ತು ಇಬ್ಬರು ಮಕ್ಕಳೊಂದಿಗೆ ತಾಯಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಹೊನ್ನೇನಹಳ್ಳಿ ಮಠದ ಕೊಪ್ಪಲು ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ಮಹದೇವ ಅವರ ಪತ್ನಿ ಹೇಮಲತಾ (38) ಎಂಬುವವರರೇ ತಮ್ಮ ಇಬ್ಬರು ಮಕ್ಕಳಾದ ಅನು (14) ಮತ್ತು ಚೇತನ್ (13) ಅವರೊಂದಿಗೆ ಆತ್ಮಹತ್ಯೆ ಮಾಡಿಕೊಂಡವರು. ಹೇಮಲತಾ ಅವರು ಗ್ರಾಮದ ತಮ್ಮ ತಂಬಾಕು ಬ್ಯಾರಲ್ ಮನೆಗೆ ತೆರಳಿ ಮನೆಯ ಕಂಬಕ್ಕೆ ನೇಣಿನ ಕುಣಿಕೆ ಹಾಕಿ ಮೊದಲಿಗೆ ಮಕ್ಕಳನ್ನು ಕೊಂದು ಬಳಿಕ ತಾವು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಪತಿ ಮಹದೇವ ಹಾಗೂ ಅವರ ಕುಟುಂಬದವರ ಕಿರುಕುಳದಿಂದ ಬೇಸತ್ತು ಹೇಮಲತಾ ತಮ್ಮ ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಹೇಮಲತಾ ಅವರ ಸಹೋದರ ನೀಡಿದ ದೂರಿನನ್ವಯ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

400 ಕೋಟಿ ದರೋಡೆ ಪ್ರಕರಣ; ಒಟ್ಟು ಆರು ಮಂದಿ ಬಂಧನ

ಮುಂಬೈ: ಸುಮಾರು 400 ಕೋಟಿ ಮೌಲ್ಯದ 2 ಸಾವಿರ ಮುಖಬೆಲೆಯ ನೋಟುಗಳ ಸಾಗಣೆ ಹಾಗೂ ವ್ಯಕ್ತಿಯ ಅಪಹರಣ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು(ಎಸ್‌ಐಟಿ) ಈವರೆಗೆ ಆರು ಮಂದಿಯನ್ನು ಬಂಧಿಸಿದೆ.

ಜಯೇಶ್ ಕದಂ, ವಿಶಾಲ್ ನಾಯ್ಡು, ಸುನಿಲ್ ಧುಮಾಲ್, ವಿರಾಟ್ ಗಾಂಧಿ, ಜನಾರ್ದನ್ ದೈಗುಡೆ ಮತ್ತು ಸಯ್ಯದ್ ಅಜರ್ ಬಂಧಿತರು. ಮಹಾರಾಷ್ಟ್ರ–ಕರ್ನಾಟಕ ಗಡಿಯ ಬೆಳಗಾವಿ ಜಿಲ್ಲೆಯ ಖಾನಾಪುರ ವ್ಯಾಪ್ತಿಯ ಅರಣ್ಯ ಮತ್ತು ಅಪಘಾತ ವಲಯವಾದ ಚೋರ್ಲಾ ಘಾಟ್ ಪ್ರದೇಶದಲ್ಲಿ ಅಪಾರ ಪ್ರಮಾಣದ ಹಣವನ್ನು ಸಾಗಿಸುತ್ತಿದ್ದ ಎರಡು ಕಂಟೇನರ್‌ಗಳು 2025ರ ಅಕ್ಟೋಬರ್ 16ರಂದು ನಾಪತ್ತೆಯಾಗಿದ್ದವು. ಈ ಹಣವನ್ನು ಕರ್ನಾಟಕದಿಂದ ಗುಜರಾತ್‌ಗೆ ಸಾಗಿಸಿ, ನಂತರ ಬೇರೆ ಬೇರೆ ಮುಖಬೆಲೆಯ ನೋಟುಗಳಾಗಿ ಪರಿವರ್ತಿಸಿ ಮಹಾರಾಷ್ಟ್ರಕ್ಕೆ ಸಾಗಿಸಲು ಉದ್ದೇಶಿಸಲಾಗಿತ್ತು ಎನ್ನಲಾಗಿದೆ.

ಕಂಟೇನರ್ ದರೋಡೆಗೆ ಕಿಶೋರ್ ಶೇಠ್ ಯೋಜನೆ ರೂಪಿಸಿದ್ದರು. ಅವರ ಸಹಚರರು ನನಗೆ ಬಂದೂಕು ತೋರಿಸಿ ಅಪಹರಿಸಿದ್ದರು. ಒಂದು ತಿಂಗಳಿಗೂ ಹೆಚ್ಚು ಕಾಲ ವಶದಲ್ಲಿಟ್ಟುಕೊಂಡು 400 ಕೋಟಿ ನೀಡುವಂತೆ ಒತ್ತಾಯಿಸಿ ಹಿಂಸೆ ನೀಡಿದ್ದರು. ಕೊನೆಗೂ ಅಲ್ಲಿಂದ ತಪ್ಪಿಸಿಕೊಂಡು ಬಂದೆ ಎಂದು ಸಂದೀಪ್ ಪಾಟೀಲ್ ದೂರು ದಾಖಲಿಸಿದ ಬಳಿಕ, ಕರ್ನಾಟಕ ಮತ್ತು ಗೋವಾ ಪೊಲೀಸರ ಸಮನ್ವಯದೊಂದಿಗೆ ತನಿಖೆ ನಡೆಸಲಾಗುತ್ತಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ

ಲ್ಯಾಪ್‌ಟಾಪ್ ಬದಲು 50 ಸಾವಿರ ನಗದು ಖಾತೆಗೆ

ಮೈಸೂರು, ಜ.25(ಎಸ್‌ಪಿಎನ್)– ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಪಡೆದ ಜಿಲ್ಲೆ ಹಾಗೂ ತಾಲೂಕಿನ ಮೂವರು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಬದಲು 50 ಸಾವಿರ ರೂ.ಗಳನ್ನು ನೀಡಲು ನಿರ್ಧರಿಸಲಾಗಿದೆ. ಈ ಹಣವನ್ನು ಆಧಾರ್ ಸಂಖ್ಯೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಡೆಬೆಟ್ ಮೂಲಕ ವಿತರಿಸಲು ಕರ್ನಾಟಕ ಶಾಲಾ ಪರೀಕ್ಷಾ ಮಂಡಳಿ ಸೂಚಿಸಿದೆ.

ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿ ಅತೀ ಹೆಚ್ಚು ಅಂಕ ಪಡೆದ ಪ್ರತಿ ತಾಲೂಕು ಮತ್ತು ಪ್ರತಿ ಜಿಲ್ಲೆಯಲ್ಲಿ ಮೂವರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕವಾಗಿ ಈ ಮೊದಲು ಲ್ಯಾಪ್‌ಟಾಪ್ ವಿತರಿಸಲಾಗಿತ್ತು. ಆದರೆ, 2024–25ನೇ ಸಾಲಿನಲ್ಲಿ ಲ್ಯಾಪ್‌ಟಾಪ್‌ಗಳನ್ನು ವಿತರಿಸುವ ಬದಲು ಪ್ರೋತ್ಸಾಹ ಧನವಾಗಿ ಪ್ರತಿ ವಿದ್ಯಾರ್ಥಿಗಳಿಗೆ 50 ಸಾವಿರ ರೂ.ಗಳ ಮೊತ್ತವನ್ನು ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಹಾಕಲು ಆದೇಶಿಸಲಾಗಿದೆ. ಗಣರಾಜ್ಯೋತ್ಸವದಂದು ನಗದು ಪುರಸ್ಕಾರಕ್ಕೆ ಭಾಜನರಾದ ವಿದ್ಯಾರ್ಥಿಗಳನ್ನೂ ಸನ್ಮಾನಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕೆ.ಜಿ.ಕೊಪ್ಪಲು ಶ್ರೀ ಚಾಮುಂಡೇಶ್ವರಿ ಅಮ್ಮನವರ ಕುಂಭಾಭಿಷೇಕ...





ಮೈಸೂರಿನ ಕನ್ನೆಗೌಡನಕೊಪ್ಪಲಿನ ಶ್ರೀ ಚಾಮುಂಡೇಶ್ವರಿ ಅಮ್ಮನವರ 36ನೇ ವರ್ಷದ ಕುಂಭಾಭಿಷೇಕ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಅಂಬಾರಿ ಚೀಟ್ ಫಂಡ್ ಮಾಲೀಕ ಸ್ವೀಟ್ ಮಹೇಶ್ ಇತರ ಗಣ್ಯರು ಆಗಮಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಅಮ್ಮನವರ ಸಮಿತಿ ದೇವಸ್ಥಾನದ ಧರ್ಮದರ್ಶಿ ನಿಂಗಪ್ಪ, ಗೌರವಾಧ್ಯಕ್ಷ ನಿಂಗಣ್ಣ, ಅಧ್ಯಕ್ಷ ಗಿರೀಶ್ ಡಿ.ಗೌಡ, ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಕಾರ್ಯದರ್ಶಿ ಮಲ್ಲೇಗೌಡ (ಮಲ್ಲಣ್ಣ), ಖಜಾಂಚಿ ಪಾಲ್ಕನ್ ರಾಜಣ್ಣ, ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್ ಗೌಡ, ಕೆಜಿ ಕೊಪ್ಪಲಿನ ಯಜಮಾನರು, ಯುವಕ ಮಿತ್ರರು ಉಪಸ್ಥಿತರಿದ್ದರು.

ರೋಹಿತ್, ಹರ್ಮನ್ ಪ್ರೀತ್ ಸೇರಿ 9 ಕ್ರೀಡಾ ಸಾಧಕರಿಗೆ ಪದ್ಮ ಪ್ರಶಸ್ತಿ

ನವದೆಹಲಿ: ಕ್ರಿಕೆಟ್‌ನಲ್ಲಿ ಭಾರತ ತಂಡವನ್ನು ಐಸಿಸಿ ಟ್ರೋಫಿಗೆ ಮುನ್ನಡೆಸಿದ್ದ ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಪುರುಷರ ತಂಡದ ಮಾಜಿ ನಾಯಕ ರೋಹಿತ್ ಶರ್ಮ ಸೇರಿದಂತೆ 9 ಕ್ರೀಡಾ ಸಾಧಕರಿಗೆ ಈ ಬಾರಿ ಪದ್ಮ ಪ್ರಶಸ್ತಿ ಸಂದಿದೆ.


ಟೆನ್ನಿಸ್ ಪಟು ವಿಜಯ್ ಅಮೃತರಾಜ್ ಅವರು 'ಪದ್ಮಭೂಷಣ' ಪ್ರಶಸ್ತಿಗೆ ಭಾಜನರಾಗಿದ್ದು, ಹರ್ಮನ್‌ಪ್ರೀತ್ ಕೌರ್, ರೋಹಿತ್ ಶರ್ಮ ಜೊತೆಗೆ ಪ್ಯಾರಾ ಅಥ್ಲೆಟಿಕ್ಸ್ ಸಾಧಕ ಪ್ರವೀಣ್ ಕುಮಾರ್, ಹಾಕಿ ಪಟುಗಳಾದ ಬಲದೇವ್ ಸಿಂಗ್, ಸವಿತಾ ಪುನಿಯಾ, ಸಾಂಪ್ರದಾಯಿಕ ಸಮರ ಕಲೆಗಳ ಸಾಧಕ ಭಗವಾನ್‌ದಾಸ್ ರಾಯ್ಕ್ವಾರ್, ಕೆ.ಪಜನಿವೇಲ್ (ಸಿಲಂಬಂ), ಕುಸ್ತಿ ತರಬೇತುದಾರ ವ್ಲಾಡಿಮಿರ್ ಮೆಸ್ಟ್ವಿರಿಶ್ವಿಲಿ(ನಿಧನ) ಅವರಿಗೆ 'ಪದ್ಮಶ್ರೀ' ಪ್ರಶಸ್ತಿ ದಕ್ಕಿದೆ.




ರೋಹಿತ್ ಶರ್ಮ



ಹರ್ಮನ್‌ಪ್ರೀತ್



ಪ್ರವೀಣ್ ಕುಮಾರ್



ಸವಿತಾ ಪುನಿಯಾ

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ


ಶ್ರೀರಂಗನಾಥಸ್ವಾಮಿಯ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಜರುಗಿತು.

ಶ್ರೀರಂಗಪಟ್ಟಣ, ಜ.25– ಪಟ್ಟಣದಲ್ಲಿ ರಥಸಪ್ತಮಿ ಅಂಗವಾಗಿ ಪ್ರಸಿದ್ಧ ಶ್ರೀರಂಗನಾಥಸ್ವಾಮಿಯ ಬ್ರಹ್ಮ ರಥೋತ್ಸವ ಸಡಗರ ಸಂಭ್ರಮದಿಂದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಜರುಗಿತು.

ಶ್ರೀರಂಗನಾಯಕಿ ದೇವಿ ಸಮೇತ ಶ್ರೀರಂಗನಾಥ ಸ್ವಾಮಿ ದೇವರ ಉತ್ಸವ ಮೂರ್ತಿಯನ್ನು ಪೂಜಿಸಿ ರಥದ ಸುತ್ತಲೂ ಮೆರವಣಿಗೆ ಮಾಡಿ ಬ್ರಹ್ಮ ರಥದ ಮೇಲೆ ಕೂರಿಸಿ ದೇವಾಲಯದ ಮುಖ್ಯ ಅರ್ಚಕ ವಿಜಯಸಾರಥಿ ಅವರಿಂದ ಅರ್ಚಕರು ರಥೋತ್ಸವಕ್ಕೆ ಪೂಜೆ ನೆರವೇರಿಸಿದರು.

ಮಧ್ಯಾಹ್ನ 3.15ಕ್ಕೆ ಸಲ್ಲುವ ಶುಭ ಲಗ್ನದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಎಸ್ಪಿ ಶೋಭಾರಾಣಿ, ಅಪರ ಜಿಲ್ಲಾಧಿಕಾರಿ ಬಿ.ಶಿವಾನಂದ ಮೂರ್ತಿ, ಡಾ. ಭಾನು ಪ್ರಕಾಶ್ ಶರ್ಮ, ಜೊತೆಗೂಡಿ ಬ್ರಹ್ಮ ರಥೋತ್ಸವಕ್ಕೆ ಚಾಲನೆ ನೀಡಿದರು.

ದೇವಾಲಯದ ಆವರಣದಲ್ಲಿ ನೆರೆದ ಸಾವಿರಾರು ಭಕ್ತರು ರಥದ ಹಗ್ಗ ಹಿಡಿದು ಎಳೆಯುವಾಗ ಉಘೇ, ಉಘೇ ಘೋಷಣೆಗಳು ಮೊಳಗಿದವು. ನೆರೆದಿದ್ದ ಭಕ್ತರು ರಥಕ್ಕೆ ಹಣ್ಣು, ದವನ ಎಸೆದರು. ಹರಕೆ ಹೊತ್ತವರು ತುಪ್ಪದ ದೀಪದ ಸೇವೆ ಸಲ್ಲಿಸಿದರು. ಶ್ರೀ ರಂಗನಾಥಸ್ವಾಮಿ ದೇವಾಲಯದ ಒಂದು ಸುತ್ತು ರಥವನ್ನು ಪ್ರದಕ್ಷಿಣೆ ಮಾಡಲಾಯಿತು. ಅನ್ನದಾನಿಗಳಿಂದ ಭಕ್ತರಿಗೆ ಅಲ್ಲಲ್ಲಿ ಮಜ್ಜಿಗೆ, ಪಾನಕ, ಕೋಸುಂಬರಿ ಹಾಗೂ ಅನ್ನ ಸಂತರ್ಪಣೆ ನಡೆಯಿತು.

ಇದಕ್ಕೂ ಮುನ್ನ ಸೂರ್ಯ ಮೂಡುವ ಮೊದಲು ಬೆಳಗಿನ ಜಾವ ವಿಶೇಷ ಪೂಜೆಗಳೊಂದಿಗೆ ರಂಗನಾಥನಿಗೆ ಎಣ್ಣೆ ಮಜ್ಜನ, ಕ್ಷೀರಾಭಿಷೇಕ ಮಾಡಿ ಪುಷ್ಪಗಳಿಂದ ವಿಶೇಷ ಅಲಂಕಾರ ಮಾಡಲಾಯಿತು. ನಂತರ ದೇವಾಲಯದ ಮುಂಭಾಗದಲ್ಲಿ ಸೂರ್ಯನಿಗೆ ಮಂಡಲ ಪೂಜೆ ನೆರವೇರಿಸಿ ಶ್ರೀರಂಗನಾಥ ಸ್ವಾಮಿ ಉತ್ಸವ ಮೂರ್ತಿಯನ್ನು ಮಂಡಲದಲ್ಲಿ ಪ್ರತಿಷ್ಠಾಪಿಸಿ ಅಲಂಕಾರ ಮಾಡಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸೂರ್ಯ ಮಂಡಲ ಉತ್ಸವವನ್ನು ನಡೆಸಲಾಯಿತು.

ತಹಶೀಲ್ದಾರ್ ಚೇತನಾ ಯಾದವ್, ದೇವಾಲಯದ ಇಒ ಉಮಾ, ದೇವಾಲಯ ಸಮಿತಿ ಅಧ್ಯಕ್ಷ ಸೋಮಶೇಖರ್, ಸದಸ್ಯರಾದ ಆನಂದ್, ಕಮಲಮ್ಮ, ಆಶಾಲತಾಪುಟ್ಟೇಗೌಡ, ಸತೀಶ್, ಇತರ ಅಧಿಕಾರಿ ವರ್ಗದವರು ರಥೋತ್ಸವದಲ್ಲಿ ಭಾಗಿಯಾಗಿದ್ದರು.

ಮೈಷುಗರ್ ಖಾಸಗೀಕರಣ ಇಲ್ಲ

ಕಾರ್ಖಾನೆ ಅಧ್ಯಕ್ಷ ಸಿ.ಡಿ.ಗಂಗಾಧರ್ ಸ್ಪಷ್ಟನೆ



ಮಂಡ್ಯ,ಜ.25– ಮೈಷುಗರ್ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸುವ ಪ್ರಶ್ನೆಯೇ ಇಲ್ಲ. ಸರ್ಕಾರವೇ ಕಾರ್ಖಾನೆಯನ್ನು ಮುನ್ನಡೆಸಲಿದ್ದು, ಪುನಶ್ಚೇತನಾಗ್ಗಿ ಹಾಗೂ ಸಮರ್ಥವಾಗಿ ನಡೆಸಲು ಕ್ರಮ ವಹಿಸಲಾಗುತ್ತಿದೆ ಎಂದು ಕಾರ್ಖಾನೆ ಅಧ್ಯಕ್ಷ ಸಿ.ಡಿ.ಗಂಗಾಧರ್ ಸ್ಪಷ್ಟನೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಖಾನೆಗೆ ನಮ್ಮ ಸರ್ಕಾರ 113 ಕೋಟಿ ರೂ. ಆರ್ಥಿಕ ನೆರವು ನೀಡಿ ಹಿಂದಿನ ಸರ್ಕಾರಕ್ಕಿಂತ ಹೆಚ್ಚು ಶಕ್ತಿಯನ್ನು ನೀಡಿದೆ. ಮುಂದಿನ 2026–27ನೇ ಸಾಲಿನ ಹಂಗಾಮಿಗೆ ಈಗಾಗಲೇ ಬಾಯ್ಲಿಂಗ್ ಹೌಸ್, ಬಾಯ್ಲರ್ ದುರಸ್ತಿ, ಕಾಕಂಬಿ ಟ್ಯಾಂಕ್ ನಿರ್ಮಾಣಕ್ಕೆ ಸುಮಾರು 74 ಕೋಟಿ ರೂ. ಅಂದಾಜು ವೆಚ್ಚದ ಪಟ್ಟಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮೋದನೆ ಹಂತದಲ್ಲಿದೆ ಎಂದು ತಿಳಿಸಿದರು.

ಕಾರ್ಖಾನೆಯನ್ನು ಸಮರ್ಥವಾಗಿ ಮುನ್ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಕ್ಕರೆ ಸಚಿವ ಶಿವಾನಂದ ಪಾಟೀಲ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಸೇರಿದಂತೆ ಜಿಲ್ಲೆಯ ಎಲ್ಲಾ ಶಾಸಕರು ಸಹಕಾರ ನೀಡುತ್ತಿದ್ದಾರೆ. ಕಳೆದ 2 ವರ್ಷಗಳಿಂದ ಕಾರ್ಖಾನೆಯನ್ನು ಸ್ವಾವಲಂಬಿಯಾಗಿ ಮಾಡುವ ನಿಟ್ಟಿನಲ್ಲಿ ದಾಪುಗಾಲು ಇಟ್ಟಿದೆ. ಈಗಾಗಲೇ ಕೋ ಜನ್ ಆರಂಭಿಸಿ 16 ಕೋಟಿ ರೂ. ವಿದ್ಯುತ್ ಉತ್ಪಾದನೆ ಮಾಡಲಾಗಿದೆ. 120 ಕೋಟಿ ರೂ. ಆದಾಯ ತೆರಿಗೆ ಮನ್ನಾ ಮಾಡಲು ಹೋರಾಟ, ಹಿಂದೆ ನೆನೆಗುದಿಗೆ ಬಿದ್ದಿದ್ದ 270 ಕೋಟಿ ರೂ. ಕಾರ್ಖಾನೆಗೆ ನೀಡಿ ಆರ್ಥಿಕ ಶಕ್ತಿ ನೀಡಲಾಗಿದೆ ಎಂದು ಹೇಳಿದರು.

127 ಕೋಟಿ ರೂ. ಭ್ರಷ್ಟಾಚಾರ ಹಿನ್ನೆಲೆಯಲ್ಲಿ ಮಾಜಿ ಅಧ್ಯಕ್ಷ ನಾಗರಾಜಪ್ಪ ಅವರಿಂದ ವಸೂಲಾತಿ ಕ್ರಮಕ್ಕೆ ಮುಂದಾಗಿದ್ದು, 27 ಎಕರೆ ಜಮೀನು ಸೇರಿದಂತೆ ಸುಮಾರು 50 ಕೋಟಿ ರೂ. ಮೌಲ್ಯದ ಆಸ್ತಿ ಜಪ್ತಿ ಮಾಡಲು ಕ್ರಮ ವಹಿಸಲಾಗಿದೆ. ಅದರಂತೆ ಕಾರ್ಖಾನೆಯನ್ನು ಸರ್ಕಾರಿ ಸ್ವಾಮ್ಯದಲ್ಲಿಯೇ ನಡೆಸಲು ಮುಂದಾಗಿದ್ದೇವೆ ಎಂದು ಭರವಸೆ ನೀಡಿದರು.

ಕಾರ್ಖಾನೆಯಿಂದ ಉತ್ಪಾದಿಸುವ ಉತ್ಪನ್ನಗಳನ್ನು ದಾಖಲೆಯ ದರಕ್ಕೆ ಪಾರದರ್ಶಕವಾಗಿ ಮಾರಾಟ ಮಾಡಲಾಗುತ್ತಿದೆ. ಸಕ್ಕರೆ ಖೋಟಾಗೆ ಹೆಚ್ಚುವರಿಯಾಗಿ 2024–25 ಹಾಗೂ 2025–26ನೇ ಸಾಲಿನಲ್ಲಿ ಸಕ್ಕರೆ ಮಾರಾಟದ ಆದೇಶವನ್ನು ತಂದು ರೈತರಿಗೆ ಒಂದೇ ಕಂತಿನಲ್ಲಿ ಹಣ ಬಟವಾಡೆ ಮಾಡಲಾಗಿದೆ. ಅಲ್ಲದೆ, 11 ವರ್ಷಗಳ ನಂತರ ಮುಂದಿನ ಮಾಹೆಯಲ್ಲಿ ಸಾಮಾನ್ಯ ಸಭೆ ನಡೆಸಲಾಗುವುದು. ನೆನಗುದಿಗೆ ಬಿದ್ದಿರುವ ಎಲ್ಲ ಆದಾಯ ತೆರಿಗೆ ಫೈಲ್ ಮಾಡಲು ಕ್ರಮ ಕೈಗೊಂಡಿದ್ದು, ಶಿಸ್ತು ಬದ್ಧವಾಗಿ ಪಾರದರ್ಶಕವಾಗಿ ಕಾರ್ಖಾನೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಹೊರಗುತ್ತಿಗೆ ನೇಮಕಾತಿ, ಮೀಸಲಾತಿ ನಿಯಮ ಉಲ್ಲಂಘನೆ, 2023–24ನೇ ಸಾಲಿನಲ್ಲಿ ಕಡಿಮೆ ಬೆಲೆ ಸಕ್ಕರೆ ಮಾರಾಟ, ನೀರು ಸರಬರಾಜಿಗೆ ಪೈಪ್‌ಲೈನ್ ಕಾಮಗಾರಿ ಅಕ್ರಮ, ಕಾರ್ಖಾನೆ ಜಾಗ ಅಕ್ರಮ ಗುತ್ತಿಗೆ ನೀಡಿ ನಷ್ಟ, ನಿವೃತ್ತ ನೌಕರ ಪುನರ್ ನೇಮಕ, ನಿಯಮ ಬಾಹಿರ ಸತ್ಯಶೋಧನಾ ಸಮಿತಿ ನೇಮಕ, ಅವ್ಯವಹಾರ, ನಿಯಮಬಾಹಿರ ಚಟುವಟಿಕೆಗಳ ಬಗ್ಗೆ ಸಂಪೂರ್ಣ ತನಿಖೆ ನಡೆಸಲು ಸರ್ಕಾರ ಸಮಿತಿ ರಚಿಸಿದೆ. ಸಮಿತಿ ನಡೆಸುವ ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಸುಂಡಹಳ್ಳಿ ಮಂಜುನಾಥ್, ಸಿ.ಎಂ.ದ್ಯಾವಪ್ಪ, ಚಂದಗಾಲು ವಿಜಯಕುಮಾರ್, ದೀಪಕ್, ಕಿರಣ್, ನಾಗರಾಜು ಇದ್ದರು.

ಮೇಲುಕೋಟೆಯಲ್ಲಿ ವೈಭವದ ರಥಸಪ್ತಮಿ ಮಹೋತ್ಸವ


ಮೇಲುಕೋಟೆ ಶ್ರೀ ಚೆಲುವನಾರಾಯಣನ ರಥಸಪ್ತಮಿಯ ಸೂರ್ಯ ಮಂಡಲ ವಾಹನೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮೈಸೂರು ಮುಡಾ ಮಾಜಿ ಅಧ್ಯಕ್ಷ ರಾಜೀವ್ ಚಾಲನೆ ನೀಡಿದರು

ಮೇಲುಕೋಟೆ, ಜ.25– ಚೆಲುವನಾರಾಯಣಸ್ವಾಮಿಯ ವಿಶ್ವಾ ವಸು ಸಂವತ್ಸರದ ರಥಸಪ್ತಮಿ ಮಹೋತ್ಸವ ವೈವಿಧ್ಯಮಯ ಜನಪದ ಕಲಾತಂಡಗಳ ಜಾನಪದ ಕಲಾರಾಧನೆಯೊಂದಿಗೆ ವೈಭವದಿಂದ ನೆರವೇರಿತು.

ಸ್ಥಾನೀಕಂ ನಾಗರಾಜ ಅಯ್ಯಂಗಾರ್ ಸಾಂಸ್ಕೃತಿಕ ವೇದಿಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಏರ್ಪಡಿಸಿದ್ದ 27ನೇ ವರ್ಷದ ರಾಜ್ಯಮಟ್ಟದ ಜಾನಪದ ಕಲಾಮೇಳದಲ್ಲಿ ಪಾಲ್ಗೊಂಡ ನೂರಾರು ಜನಪದ ಕಲಾವಿದರ ವೈವಿಧ್ಯಮಯ ಕಲಾತಂಡಗಳು ಚೆಲುವನಾರಾಯಣಸ್ವಾಮಿಗೆ ಭಕ್ತಿಪೂರ್ವಕವಾಗಿ ಕಲಾರಾಧನೆ ನೆರವೇರಿಸಿದ ಪರಿಣಾಮ ರಥಸಪ್ತಮಿ ಉತ್ಸವ ಧಾರ್ಮಿಕ ಮಹತ್ವದೊಂದಿಗೆ ಭಾರತೀಯ ಸಂಸ್ಕೃತಿ ಅನಾವರಣಗೊಳಿಸುವ ಅತ್ಯಂತ ಅರ್ಥಪೂರ್ಣ ಜಾನಪದ ಹಬ್ಬವಾಗಿ ಅಭೂತಪೂರ್ವವಾಗಿ ನಡೆಯಿತು.

ಬೆಳಿಗ್ಗೆ 6.45ರ ವೇಳೆಗೆ ಮೇಲುಕೋಟೆಗೆ ಆಗಮಿಸಿದ ಕೃಷಿ ಇಲಾಖೆ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ತಮ್ಮ ಪತ್ನಿ ಲಕ್ಷ್ಮಿ ದಂಪತಿಗಳು ಕಲಾಮೇಳಕ್ಕೆ ಚಾಲನೆ ನೀಡಿದರು. ಮೇಲುಕೋಟೆ ಶಾಸಕ ದರ್ಶನ್‌ಪುಟ್ಟಣ್ಣಯ್ಯ, ಮೈಸೂರು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ ರಾಜೀವ್, ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್, ತಹಶೀಲ್ದಾರ್ ಬಸವರೆಡ್ಡಪ್ಪ, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಾಲೆಗಳು ಆಧುನೀಕರಣಗೊಂಡರೆ ಸಮರ್ಪಕ ನೀರು


ರೈತರ ಸಭೆ ನಡೆಸಿದ ಶಾಸಕ ಪಿ.ಎಂ ನರೇಂದ್ರಸ್ವಾಮಿ

ಮಳವಳ್ಳಿ,ಜ.25– ತಾಲೂಕಿನ ಪ್ರಮುಖ ಕೆರೆಗಳಿಗೆ ಸಂಪರ್ಕ ನಾಲೆಗಳನ್ನು ಕಲ್ಪಿಸುವುದರ ಜೊತೆಗೆ ನಾಲೆಗಳನ್ನು ಆಧುನೀಕರಣಗೊಳಿಸಿದರೆ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನೀರು ಬಿಟ್ಟ ಒಂದೂವರೆ ದಿನದಲ್ಲಿಯೇ ತಾಲೂಕಿಗೆ ನೀರು ಬರುವಂತಹ ರೀತಿಯಲ್ಲಿ ಪ್ರಾಮಾಣಿಕವಾಗಿ ಶ್ರಮಿಸಲಾಗುತ್ತಿದೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಪಿ.ಎಂ ನರೇಂದ್ರಸ್ವಾಮಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ರೈತರ ಸಭೆ ನಡೆಸಿ ಮಾತನಾಡಿದ ಅವರು, ತಾಲೂಕಿಗೆ ಯೋಜನೆಗಳನ್ನು ತಂದು ಅನುದಾನ ಬಿಡುಗಡೆಗೊಳಿಸಿ ವಿದ್ಯುತ್, ರಸ್ತೆ, ಆರೋಗ್ಯ, ಕುಡಿಯುವ ನೀರು, ಶಾಲೆಗಳ ಅಭಿವೃದ್ಧಿ ಸೇರಿದಂತೆ ಸರ್ವಾಂಗೀಣವಾಗಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಿದರೂ ಕೂಡ ಸಾರ್ವಜನಿಕವಾಗಿ ಕೆಲವರು ತಪ್ಪು ಮಾಹಿತಿಯನ್ನು ನೀಡಲು ಮುಂದಾಗುತ್ತಿದ್ದು, ಕಾಂಗ್ರೆಸ್ ಮುಖಂಡರು ಯೋಜನೆಗಳ ಲಾಭ ಹಾಗೂ ಉಪಯೋಗಗಳ ಬಗ್ಗೆ ಸರಿಯಾದ ಮಾಹಿತಿ ನೀಡಬೇಕೆಂದು ತಿಳುವಳಿಕೆ ನೀಡಿದರು.

ತುರುಗನೂರು, ಹೆಬ್ಬಕವಾಡಿ, ನಿಡಘಟ್ಟ ಭಾಗದ ನಾಲೆಗಳನ್ನು ಆಧುನೀಕರಣಗೊಳಿಸಿದರೆ ಹೆಚ್ಚಿನ ನೀರು ಕೊನೆ ಭಾಗಕ್ಕೆ ತಲುಪುತ್ತದೆ. ಉಪನಾಲೆಗಳ ಗೇಟ್‌ವಾಲ್‌ಗಳನ್ನು ಸರಿಪಡಿಸಿದರೆ ವ್ಯಯವಾಗುತ್ತಿರುವ ನೀರನ್ನು ಉಳಿತಾಯ ಮಾಡಿ ಮುಂದಿನ ಬಯಲಿಗೆ ಹೋಗಲು ಸಹಕಾರಿಯಾಗುತ್ತದೆ.

ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಬಳಸಿಕೊಂಡು ನಾಲೆಗಳು ಹಾಗೂ ರಸ್ತೆಗಳನ್ನು ಅಭಿವೃದ್ಧಿಗೊಳಿಸಿದರೆ ಸುಮಾರು 35 ವರ್ಷ ರೈತರು ನೆಮ್ಮದಿಯಿಂದ ವ್ಯವಸಾಯವನ್ನು ಮಾಡಬಹುದಾಗಿದೆ ಎಂದರು.

ಕಾವೇರಿ ನೀರಾವರಿ ನಿಗಮ ಅಧೀಕ್ಷಕ ಅಭಿಯಂತರ ರಘುರಾಮನ್ ಮಾತನಾಡಿದರು. ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಬಾಬು ಕೃಷ್ಣದೇವ್, ಸಹಾಯಕ ಕಾರ್ಯಪಾಲಕ ಅಭಿಯಂತರ ಭರತೇಶ್, ಮನ್‌ಮುಲ್ ನಿರ್ದೇಶಕ ಕೃಷ್ಣೇಗೌಡ, ಗ್ಯಾರಂಟಿ ಯೋಜನೆ ಅನುಷ್ಠಾನ ಜಿಲ್ಲಾಧ್ಯಕ್ಷ ಚಿಕ್ಕಲಿಂಗಯ್ಯ ಇದ್ದರು.

ಮಾಜಿ ಸಚಿವ ಸಿ.ಎಸ್ ಪುಟ್ಟರಾಜು ವಿರುದ್ಧ ಗೋಮಾಳ ಒತ್ತುವರಿ ಆರೋಪ

ದಾಖಲೆ ಬಿಡುಗಡೆಗಿಂತ ಅಧಿಕಾರಿಗಳನ್ನು ಕರೆತನ್ನಿ ನಾನೇ ನಿಂತು ಸರ್ವೇ ಮಾಡಿಸುವೆ



ಪಾಂಡವಪುರ:ಭೂಮಿ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ರೈತಸಂಘದ ಅಧ್ಯಕ್ಷರು ದಾಖಲೆ ಬಿಡುಗಡೆ ಮಾಡುವುದಕ್ಕಿಂತ, ಅಧಿಕಾರಿಗಳನ್ನು ಸ್ಥಳಕ್ಕೆ ಕರೆ ತಂದರೆ ನಾನೆ ನಿಂತು ಸರ್ವೇ ಮಾಡಿಸುತ್ತೇನೆ ಎಂದು ರೈತಸಂಘದ ಅಧ್ಯಕ್ಷರ ಆರೋಪಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿರುಗೇಟು ನೀಡಿದ್ದಾರೆ. ತಾಲೂಕಿನ ಎಲೆಕೆರೆ ಗ್ರಾಮದ ಸಮೀಪ ಜೆಡಿಎಸ್ ಮುಖಂಡ, ಉದ್ಯಮಿ ಕೆಂಚನಹಳ್ಳಿ ಕುಮಾರ್ ಆರಂಭಿಸಿರುವ ಪುಟ್ಟರಾಜು ಕಚೇರಿಯನ್ನು ಉದ್ಘಾಟಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಗೋಮಾಳವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ರೈತಸಂಘದ ಅಧ್ಯಕ್ಷ ವಿಜಯಕುಮಾರ್ ಅವರ ಆರೋಪಕ್ಕೆ ತಿರುಗೇಟು ನೀಡಿದ ಪುಟ್ಟರಾಜು ಅವರು ನಾನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ದಾಖಲೆ ಬಿಡುಗಡೆ ಮಾಡುವುದಕ್ಕಿಂತ, ನಿಮ್ಮದೆ ಅಧಿಕಾರವಿದೆ. ಸ್ಥಳಕ್ಕೆ ಅಧಿಕಾರಿಗಳನ್ನೇ ಕರೆದುಕೊಂಡು ಬಂದರೆ ನಾನೇ ನಿಂತು ಸರ್ವೇ ನಡೆಸಿ, ಒತ್ತುವರಿಯಾಗಿರುವುದು ಸಾಬೀತುಪಡಿಸಿದರೆ ಅಲ್ಲೇ ಒತ್ತುವರಿ ಬಿಟ್ಟುಕೊಡುತ್ತೇವೆ ಎಂದು ಸವಾಲು ಹಾಕಿದರು. ನಾವೇ ನಮ್ಮ ಶಾಲೆ ನಿರ್ಮಿಸಬೇಕಾದರೆ ನಮ್ಮ ಜಾಗದಲ್ಲಿ 20 ಅಡಿ ಆಳಮಾಡಿ ಮಣ್ಣು ತೆಗೆದು ಹೊರಕ್ಕೆ ಹಾಕಿ ನಂತರ ಶಾಲೆ ನಿರ್ಮಿಸಿದ್ದೇವೆ, ಸರಕಾರಿ ಗೋಮಾಳದಲ್ಲಿ ಮಣ್ಣು ತೆಗೆಯುವ ದರ್ದು ನಮಗಿಲ್ಲ ಎಂದು ಕಿಡಿಕಾರಿದರು.

ಚಿನಕುರಳಿಗೆ ಮಂಜೂರಾಗಿದ್ದ ಠಾಣೆಯನ್ನು ಕ್ಯಾತನಹಳ್ಳಿಗೆ ವರ್ಗಾವಣೆಯಾಗಿಲ್ಲ ಎಂಬುದಾಗಿ ಹೇಳುವ ರೈತ ಸಂಘದ ಅಧ್ಯಕ್ಷರೇ ಚಿನಕುರಳಿಗೆ ಮಂಜೂರಾಗಿದ್ದ ಠಾಣೆಯನ್ನು ರದ್ದುಪಡಿಸಲಾಗಿದೆ ಎಂದು ಆದೇಶವಿದೆಯಲ್ಲ, ನಿಮಗೆ ಅದಕ್ಕಿಂತ ಸಾಕ್ಷಿ ಬೇಕೆ, ಗೃಹ ಇಲಾಖೆಯ ಮುಖ್ಯ ಕಾರ್ಯದರ್ಶಿಯಾಗಿದ್ದ ನಮ್ಮ ತಾಲೂಕಿನ ಮಗ ಎಸ್.ಆರ್.ಉಮಾಶಂಕರ್ ಅವರೇ ಮಂಜೂರು ಮಾಡಿಕೊಟ್ಟಿದ್ದರು. ಅವರೇ ನೊಂದುಕೊಂಡಿದ್ದಾರೆ. ಅವರೇ ಸಾಕ್ಷಿ ಇದ್ದಾರೆ. ಅವರನ್ನೇ ಕೇಳಿದರೆ ಈ ಬಗ್ಗೆ ಸ್ಪಷ್ಟನೆ ನೀಡಲಿದ್ದಾರೆ ಎಂದರು. ಈ ವೇಳೆ ಡಿಸಿಸಿ ಬ್ಯಾಂಕ್ ನಿರ್ದೇಶಕ ಎಚ್.ಸಿ.ಪುಟ್ಟಸ್ವಾಮೀಗೌಡ (ಹೊಸಕೋಟೆ ಪುಟ್ಟಣ್ಣ), ಮಾಜಿ ನಿರ್ದೇಶಕ ಶ್ಯಾದನಹಳ್ಳಿ ಚಲುವರಾಜು, ಟಿಎಪಿಸಿಎಂಎಸ್ ನಿರ್ದೇಶಕ ವಡ್ಡರಹಳ್ಳಿ ವಿ.ಎಸ್.ನಿಂಗೇಗೌಡ, ಮುಖಂಡರಾದ ಕೆಂಚನಹಳ್ಳಿ ಕುಮಾರ್, ಹಾರೋಹಳ್ಳಿ ಶ್ವೇತ ಉಮೇಶ್, ವೆಂಕಟೇಶ್ ಇದ್ದರು.

ಒಂದನೇ ಪುಟದಿಂದ

ಶತಾವಧಾನಿ ಗಣೇಶ್ ಪದ್ಮಭೂಷಣ

ಕಲಾಲೋಕಕ್ಕೆ ಪುರಸ್ಕಾರ: ಭಾರತೀಯ ಚಿತ್ರರಂಗಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿರುವ ನಟ ಧರ್ಮೇಂದ್ರ ಸಿಂಗ್ ಡಿಯೋಲ್ ಅವರಿಗೆ ಮರಣೋತ್ತರವಾಗಿ 'ಪದ್ಮವಿಭೂಷಣ' ಗೌರವ ಸಂದಿದೆ. ಭಾರತೀಯ ಜನಪ್ರಿಯ ಹಿನ್ನೆಲೆ ಗಾಯಕಿ ಅಲ್ಕಾ ಯಾಗ್ನಿಕ್ ಮತ್ತು ದಕ್ಷಿಣ ಭಾರತದ ಸೂಪರ್ ಸ್ಟಾರ್ ಮಮ್ಮುಟ್ಟಿ ಅವರು 'ಪದ್ಮಭೂಷಣ' ಗೌರವಕ್ಕೆ ಪಾತ್ರ ರಾಗಿದ್ದಾರೆ. ನಟ ಮತ್ತು ನಿರ್ದೇಶಕ ಆರ್.ಮಾಧವನ್, ಬಂಗಾಳಿ ಚಿತ್ರ ರಂಗದ ಪ್ರಮುಖ ನಟ ಪ್ರೊಸೆನ್ಜಿತ್ ಚಟರ್ಜಿ ಮತ್ತು ಮರಣೋತ್ತರವಾಗಿ ಸತೀಶ್ ಶಾ ಅವರಿಗೆ 'ಪದ್ಮಶ್ರೀ' ಪ್ರಶಸ್ತಿ ಸಂದಿದೆ.

ಮಹಾರಾಷ್ಟ್ರದ ಧರ್ಮೇಂದ್ರ ಸಿಂಗ್ ಡಿಯೋಲ್ (ಕಲೆ), ಉತ್ತರ ಪ್ರದೇಶದ ಎನ್.ರಾಜಮ್(ಕಲೆ), ಕೇರಳದ ಕೆ.ಟಿ.ಥಾಮಸ್ (ಸಾರ್ವಜನಿಕರ ವ್ಯವಹಾರಗಳು), ಪಿ.ನಾರಾಯಣನ್(ಸಾಹಿತ್ಯ–ಶಿಕ್ಷಣ), ವಿ.ಎಸ್.ಅಚ್ಯುತಾನಂದನ್(ಮರಣೋತ್ತರ) ಸೇರಿ ಐವರು ಸಾಧಕರಿಗೆ 'ಪದ್ಮ ವಿಭೂಷಣ', ಕರ್ನಾಟಕದ ಶತಾವಧಾನಿ ಆರ್.ಗಣೇಶ್, ಅಮೆರಿಕಾದಲ್ಲಿರುವ ಅನಿವಾಸಿ ಭಾರತೀಯ ವಿಜಯ ಅಮೃತ್‌ರಾಜ್ ಸೇರಿದಂತೆ 13 ಮಂದಿಗೆ 'ಪದ್ಮಭೂಷಣ' ಹಾಗೂ ಕರ್ನಾಟಕದ ಆರು ಮಂದಿ ಸೇರಿ ನೂರಕ್ಕೂ ಹೆಚ್ಚು ಸಾಧಕರಿಗೆ 'ಪದ್ಮಶ್ರೀ' ಗೌರವ ಸಂದಿದೆ.

ಈ ವರ್ಷದ ಪದ್ಮ ಪ್ರಶಸ್ತಿಗೆ ಕೇಂದ್ರ ಸರ್ಕಾರವು ಭಾರತದ ಉದ್ದಗಲಕ್ಕೂ ಇರುವ ವಿವಿಧ ಕ್ಷೇತ್ರದ ಪ್ರಚಾರವಿಲ್ಲದ ಸಾಧಕರನ್ನು ಗುರುತಿಸಿದೆ. ಇವರಲ್ಲಿ ಹಿಂದುಳಿದ ಮತ್ತು ದಲಿತ ಸಮುದಾಯಗಳು, ಪ್ರಾಚೀನ ಬುಡಕಟ್ಟು ಜನಾಂಗದವರು ಮತ್ತು ದೂರದ ಮತ್ತು ಕಷ್ಟಕರ ಪ್ರದೇಶಗಳಿಂದ ಬಂದವರು ಸೇರಿದ್ದಾರೆ. ಆರೋಗ್ಯ ರಕ್ಷಣೆ, ಶಿಕ್ಷಣ, ಜೀವನೋಪಾಯ, ನೈರ್ಮಲ್ಯ, ಸುಸ್ಥಿರತೆ ಇತ್ಯಾದಿಗಳನ್ನು ಉತ್ತೇಜಿಸುವಲ್ಲಿ ಕೆಲಸ ಮಾಡುವವರು, ದಿವ್ಯಾಂಗರು, ಮಹಿಳೆಯರು, ಮಕ್ಕಳು, ದಲಿತರು ಮತ್ತು ಬುಡಕಟ್ಟು ಜನಾಂಗದವರ ಸೇವೆಗಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟವರನ್ನೂ ಗುರುತಿಸಿ, ಗೌರವಿಸಲಾಗಿದೆ.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಿಗೆ ಶಾಸಕ ಜಿಟಿಡಿ ಅಭಿನಂದನೆ

ದೇಶದ ಅತ್ಯುನ್ನತ ಗೌರವವಾದ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುವ ಮಂಡ್ಯದ ಅಂಕೇಗೌಡರು ಸೇರಿದಂತೆ ಮೂವರಿಗೆ ಶಾಸಕ ಜಿ.ಟಿ.ದೇವೇಗೌಡರು ಅಭಿನಂದನೆ ಸಲ್ಲಿಸಿದ್ದಾರೆ. ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಪುಸ್ತಕ ಪ್ರೇಮಿ ಅಂಕೇಗೌಡರಿಗೆ, ದಾವಣಗೆರೆಯ ಹಿಮೋಫಿಲಿಯಾ ಸೊಸೈಟಿ, ಜೆಜೆಎಂ ವೈದ್ಯಕೀಯ ಕಾಲೇಜು ಪ್ರಾಧ್ಯಾಪಕ ಡಾ.ಸುರೇಶ್ ಹನಗವಾಡಿ ಹಾಗೂ ಬೆಂಗಳೂರಿನ ಸುಮಂಗಲಿ ಸೇವಾ ಆಶ್ರಮದ ಸ್ಥಾಪಕಿ ಎಸ್.ಜಿ.ಸುಶೀಲಮ್ಮ ಅವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿರುವುದು ಅತ್ಯಂತ ಸಂತಸದ ಸಂಗತಿ ಎಂದಿದ್ದಾರೆ. ಪ್ರಶಸ್ತಿಗೆ ಪಾತ್ರರಾಗಿರುವ ಮೂವರಿಗೂ ಶಾಸಕ ಜಿ.ಟಿ.ದೇವೇಗೌಡರು ಅಭಿನಂದನೆ ಸಲ್ಲಿಸಿದ್ದಾರೆ.

ರಾಷ್ಟ್ರಪತಿ ಪದಕ

ಸಮಾದೇಷ್ಟರಾದ ಎಸ್.ಸವಿತಾ, ಕಲಬುರುಗಿ ಪಿಟಿಸಿ ಡಿಐಜಿಪಿ ಎಂ.ಪುಟ್ಟಮಾದಯ್ಯ, ಬಳ್ಳಾರಿ ಜಿಲ್ಲೆ ಎಎಸ್ಪಿ–2 ಎನ್.ನವೀನ್ ಕುಮಾರ್, ಬೆಂಗಳೂರು ನಗರ ಡಿಸಿಪಿ (ಅಪರಾಧ) ರಾಜ ಇಮಾಮ್ ಖಾಸಿಂ, ಮಂಗಳೂರು ಡಿಸಿಆರ್‌ಇ ಪೊಲೀಸ್ ಅಧೀಕ್ಷಕ ಸಿ.ಎ.ಸೈಮನ್, ಲೋಕಾಯುಕ್ತ ಬೀದರ್ ಡಿವೈಎಸ್ಪಿ ಹಣಮಂತರಾಯ ಎಸ್., ಬೆಂಗಳೂರು ಮಡಿವಾಳ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಂ.ಎ.ಮಹಮದ್, ಬೆಂಗಳೂರು ವಿದ್ಯಾರಣ್ಯಪುರ ಠಾಣೆ ಇನ್ಸ್‌ಪೆಕ್ಟರ್ ಸಿ.ಬಿ.ಶಿವಸ್ವಾಮಿ, ಹುಬ್ಬಳ್ಳಿ–ಧಾರವಾಡನಗರ ವಿದ್ಯಾಗಿರಿ ಠಾಣೆಯ ಇನ್ಸ್‌ಪೆಕ್ಟರ್ ಮಹಮದ್ ರಫೀಕ್ ಎಂ.ತಹಶೀಲ್ದಾರ್, ಬೆಳಗಾವಿ ಮುಡಲಗಿ ವೃತ್ತದ ಇನ್ಸ್‌ಪೆಕ್ಟರ್ ಶ್ರೀಶೈಲ್ ಕೆ.ಬ್ಯಾಕೋಡ್, ಬೆಂಗಳೂರು ಕೆಎಸ್‌ಆರ್‌ಪಿ ಆರ್‌ಎಸ್‌ಐ ಬಿ.ಕಾಶಿನಾಥ್, ಮಲ್ಪೆ ಕರಾವಳಿ ಕಾವಲು ಪೊಲೀಸ್ ಠಾಣೆಯ ಪಿಎಸ್‌ಐ ವೈಲೆಟ್ ಫೆಮಿನ, ಶಿವಮೊಗ್ಗ ಡಿಎಸ್‌ಬಿಯ ಪಿಎಸ್‌ಐ ಹೆಚ್.ಕೆ.ಶಕುಂತಲ, ಬೆಂಗಳೂರು ಹೆಬ್ಬಾಳ ಸಂಚಾರ ಠಾಣೆ ಎಎಸ್‌ಐ ಹರ್ಷ ನಾಗರಾಜ್, ಹುಳಿಮಾವು ಠಾಣೆ ಎಎಸ್‌ಐ ಜಿ.ಸಿದ್ದರಾಜು, ಕೆಎಸ್‌ಆರ್‌ಪಿ 3ನೇ ಪಡೆ ಆರ್‌ಹೆಚ್‌ಸಿ ಹೆಚ್.ದೊಡ್ಡ ಈರಪ್ಪ ಹಾಗೂ ಉತ್ತರ ಕನ್ನಡ ಶಿರಸಿಯ ನ್ಯೂ ಮಾರ್ಕೆಟ್ ಠಾಣೆಯ ಬಸವರಾಜ್ ಮ್ಯಾಗೆರಿ, ಅಗ್ನಿಶಾಮಕ ಇಲಾಖೆಯಿಂದ ಅಸಿಸ್ಟೆಂಟ್ ಫೈರ್ ಸ್ಟೇಷನ್ ಆಫೀಸರ್ ಗುರುಸ್ವಾಮಿ, ಲೀಡಿಂಗ್ ಫೈರ್‌ಮ್ಯಾನ್ ಅರುಣ್ ಸಿ.ನಾಯ್ಕ್, ಗೃಹರಕ್ಷಕ ದಳದಿಂದ ಕಮಾಂಡಿಂಗ್ ಆಫೀಸರ್ ಸುನಂದ್ ಸಂಪತ್, ಕಮಾಂಡಿಂಗ್ ಆಫೀಸರ್ ಬಾಲಾಜಿ ಶ್ರೀನಿವಾಸನ್, ಪ್ಲಟೂನ್ ಕಮಾಂಡರ್‌ಗಳಾದ ಮಲಾಲಿ ಗೌಡ, ವಾದಿರಾಜ್ ನಾರಾಯಣ್ ರಾವ್ ದೇಶಪಾಂಡೆ ಹಾಗೂ ಸಹಾಯಕ ಅಧೀಕ್ಷಕ ಹೆಚ್.ಎ.ಪರಮೇಶ್ ಶ್ಲಾಘನೀಯ ಸೇವಾ ಪದಕಕ್ಕೆ ಆಯ್ಕೆಯಾಗಿದ್ದಾರೆ.

ಸಿಎಂ ಸ್ಥಾನ ಸಿಗಲ್ಲ

ಬಜೆಟ್ ತಯಾರಿ: ಬಜೆಟ್ ಮಂಡನೆ ಕುರಿತಂತೆ ಫೆಬ್ರವರಿ 2ರಿಂದ ಬಜೆಟ್ ತಯಾರಿ ಅಧಿಕೃತ ಸಭೆ ಆರಂಭಿಸಲಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಈಗಾಗಲೇ ಬಜೆಟ್ ತಯಾರಿ ಪ್ರಕ್ರಿಯೆ ನಡೆಯುತ್ತಿದೆ. ಆದರೆ ಅಧಿಕೃತ ಸಭೆಯನ್ನು ಫೆ.2ರಿಂದ ಆರಂಭ ಮಾಡುತ್ತೇನೆ ಎಂದ ಅವರು, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಗೆ ಒಳ್ಳೆಯ ವಾತಾವರಣ ವಿದೆ. ಒಳ್ಳೆಯ ಕೌಶಲ್ಯ ತರಬೇತಿ ಇರುವ ಮಾನವ ಸಂಪನ್ಮೂಲ ಕರ್ನಾಟಕದಲ್ಲಿ ಹೆಚ್ಚಾಗಿ ದೊರೆಯುತ್ತದೆ. ಇದನ್ನು ಮನಗಂಡು ಕರ್ನಾಟಕದಲ್ಲಿ ಖಾಸಗಿ ಕಂಪನಿ ಗಳು ಹೆಚ್ಚು ಬಂಡವಾಳ ಹೂಡುತ್ತಿವೆ. ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಸಮ್ಮೇಳನದಲ್ಲಿ ಈ ಬಗ್ಗೆ ಮಹತ್ವದ ಚರ್ಚೆ ನಡೆದಿದೆ ಎಂದು ಹೇಳಿದರು.

ಭಾಷಣ ಬದಲಾವಣೆ ಸಾಧ್ಯತೆ ಇದೆ: ವಿಧಾನಸಭೆಯ ಜಂಟಿ ಅಧಿವೇಶನದಲ್ಲಿ ನಡೆದ ಬೆಳವಣಿಗೆ ಬಗ್ಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ರಾಷ್ಟ್ರಪತಿಗೆ ವರದಿ ನೀಡಿದ್ದಾರೆ ಎಂದರು. ಜಂಟಿ ಅಧಿವೇಶನದಲ್ಲಿ ಸರ್ಕಾರ ನೀಡುವ ಭಾಷಣವನ್ನು ರಾಜ್ಯಪಾಲರು ಓದಲೇಬೇಕು. ಈ ಬಗ್ಗೆ ಸಂವಿಧಾನದ 176 ಮತ್ತು 163ರ ಪರಿಚ್ಛೇತದದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಭಾಷಣ ಬದ ಲಾವಣೆ ಮಾಡುವ ವಿವೇಚನ ರಾಜ್ಯ ಪಾಲರಿಗೆ ಇಲ್ಲ ಎಂದು ಹೇಳಿದರು. ನಾಳೆ ನಡೆಯುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ರಾಜ್ಯಪಾಲರಿಗೆ ಸರ್ಕಾರ ಭಾಷಣ ಬರೆದುಕೊಟ್ಟಿದೆ. ಆದರೆ ಅವರು ಬದಲಾವಣೆ ಮಾಡಿ ಭಾಷಣ ಮಾಡುವ ಸಾಧ್ಯತೆ ಇದೆ ಎಂದು ಸಿಎಂ ಸಂಶಯ ವ್ಯಕ್ತಪಡಿಸಿದರು. ದೆಹಲಿಯಲ್ಲಿ ನಡೆಯುವ ಗಣ ರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರ ಪಾಲ್ಗೊಳ್ಳುವ ಕುರಿತಂತೆ ರಾಜ್ಯ ಸರ್ಕಾರ ಪತ್ರ ವ್ಯವಹಾರ ನಡೆಸಿತ್ತು. ಆದರೆ ಕೇಂದ್ರ ಸರ್ಕಾರ ಆಯ್ಕೆ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರಕ್ಕೆ ಬಂದೇ ಬರುತ್ತೇವೆ

ನನ್ನ ಅಂತಿಮದ ದಿನಗಳು, ಹೋರಾಟಗಳು ರಾಮನಗರದಲ್ಲೇ ನಡೆಯಲಿವೆ. ಮಂಡ್ಯ ಜನರ ಒತ್ತಡಕ್ಕೆ ಮಣಿದು ಮಂಡ್ಯಗೆ ಹೋದೆ ಅಷ್ಟೇ ಎಂದು ಪರೋಕ್ಷವಾಗಿ ಮುಂದಿನ ಚುನಾವಣೆಯಲ್ಲಿ ರಾಮನಗರದಿಂದ ಸ್ಪರ್ಧಿಸುವ ಬಗ್ಗೆ ಸುಳಿವಿತ್ತಿದ್ದಾರೆ.

ನನಗೆ ಮಾತಾಡೋ ಚಪಲ, ಅವನಿಗೆ ಲೂಟಿ ಚಪಲ. ಡಿಕೆಶಿ ಸಹೋದರ ಮೊನ್ನೆ ಏನೋ ಹೇಳವ್ನೆ, ನಮಗೆ ಮಾತನಾಡುವ ಚಪಲ ಅಂದವ್ನೆ. ನನಗೆ ಮಾತಾಡುವ ಚಪಲ. ಅವನಿಗೆ ಲೂಟಿ ಚಪಲ. ಯಾರಿಗೂ ಅಧಿಕಾರ ಶಾಶ್ವತ ಅಲ್ಲ. ಡಿಕೆಶಿ ಜೊತೆ ಚರ್ಚೆ ಅನಾವಶ್ಯಕ. ನಾನು ಆ ವ್ಯಕ್ತಿ ಜೊತೆ ಹೋಲಿಕೆ ಮಾಡಿಕೊಳ್ಳಲ್ಲ. ಕಲ್ಲುಬಂಡೆ ಒಡೆದು ಜೀವನ ಮಾಡಿಲ್ಲ. ಯಾರ ಜಮೀನನ್ನೂ ಕಬಳಿಸಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದ್ದಾರೆ.

ಕೆರೆ ಸುತ್ತ ದಿಢೀರ್ ಕಾಂಪೌಂಡ್

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಕೆರೆ ಕಂಡವರ ಪಾಲಾಗುತ್ತಿರುವುದು ಸ್ಪಷ್ಟವಾಗಿದೆ ಎಂದು ಸ್ಥಳೀಯ ನಿವಾಸಿಗಳು ಸಹ ದೂರಿದ್ದಾರೆ.

ನಗರ ಪ್ರದೇಶಗಳ ಕೆರೆಗಳಿಗೆ ಇತ್ತೀಚಿನ ವರ್ಷಗಳಲ್ಲಿ ಉಳಿಗಾಲವಿಲ್ಲದಂತಾಗಿದೆ. ಬೆಂಗಳೂರಲ್ಲಿ ಕೆರೆಗಳು ನಿರ್ನಾಮವಾಗಿ ಅಲ್ಲಿನ ವಾತಾವರಣದಲ್ಲಿ ವಿಕೋಪತೆ ಉಂಟಾಗಿ ಜನ ನಲುಗಿದ್ದಾರೆ. ಈಗ ಪಶ್ಚಾತಾಪ ಪಡುವ ಪರಿಸ್ಥಿತಿ ಕಂಡು ಬರುತ್ತಿದೆ.



ಕೆರೆ ಜಾಗದಲ್ಲಿ ಖಾಸಗಿ ವ್ಯಕ್ತಿ ತಮ್ಮ ಆಸ್ತಿ ಎಂದು ಫಲಕ ಅಳವಡಿಸಿರುವುದು.

ಮೈಸೂರಲ್ಲಿ ಅಳಿದುಳಿದ ಕೆರೆ–ಕಟ್ಟೆ ಉಳಿಸಿಕೊಳ್ಳದಿದ್ದಲ್ಲಿ ತಕ್ಕಶಾಸ್ತಿ ಕಾಯ್ದಿಟ್ಟ ಬುತ್ತಿ ಎಂಬುದರ ಅರಿವಿಲ್ಲದಂತೆ ಅಧಿಕಾರಿ ವರ್ಗ ವರ್ತಿಸುತ್ತಿದೆ. ಮೈಸೂರು ಅಭಿವೃದ್ಧಿ ಪ್ರಾಧಿಕಾರ ಈ ಕೆರೆಯ ಸುತ್ತ ವಸತಿ ಬಡಾವಣೆ ನಿರ್ಮಾಣಕ್ಕೆ ಈಗಾಗಲೇ ಅನುಮತಿ ನೀಡಿದೆ. ಹಾಗೆಯೇ ಭೂ ಪರಿವರ್ತನೆಯನ್ನು ಕೂಡ ಮಾಡಿದೆ. ಆದರೆ ತನ್ನ ನಕ್ಷೆಯಲ್ಲಿರುವ ಕೆರೆಯನ್ನು ಸಂರಕ್ಷಿಸುವತ್ತ ಅದು ಗಮನಹರಿಸಿಲ್ಲ ಎಂಬ ಟೀಕೆ ಕೇಳಿ ಬರುತ್ತಿದೆ.

ಭಾರತದ ವಿರುದ್ಧ ಮಾತನಾಡಲ್ಲ

ನಾವು ನಮ್ಮ ದೇಶವನ್ನು ಬಿಟ್ಟು ಕೊಡಲು ಸಾಧ್ಯವಿಲ್ಲ. ವಿದೇಶದಲ್ಲಿ ನಾನು ಭಾರತದ ವಿರುದ್ಧ ಮಾತನಾಡುವುದಿಲ್ಲ. ಮೊದಲು ನಾವು ಭಾರತೀಯರು. ನಾನು ದೇಶವನ್ನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ. ಭಾರತದ ಅಭಿವೃದ್ಧಿಗೆ ನಮ್ಮೆಲ್ಲರ ಕೊಡುಗೆ ಇದೆ ಎಂದರು.

ಈ ವೇಳೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಭಾರತದ ಆರ್ಥಿಕತೆ ಸರಿ ಇಲ್ಲ ಎಂದು ಹೇಳುವಾಗ ನೀವು ಭಾರತವನ್ನು ಹೊಗಳಿದ್ದೀರಿ ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ರಾಹುಲ್ ಗಾಂಧಿ ಯಾವ ಸನ್ನಿವೇಶದಲ್ಲಿ, ಯಾವ ಅರ್ಥದಲ್ಲಿ ಈ ಹೇಳಿಕೆ ನೀಡಿದ್ದಾರೋ ಗೊತ್ತಿಲ್ಲ. ಅವರು ದೇಶದ ವಿರುದ್ಧ ಹೇಳಿಕೆ ನೀಡಿಲ್ಲ. ಆಂತರಿಕ ವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ. ರಾಜಕೀಯಕ್ಕೆ ನಾನು ಭಾರತವನ್ನು ಬೈಯಲು ಸಾಧ್ಯವಿಲ್ಲ ಎಂದು ಹೇಳಿದರು.

ಭಾರತವು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದೇಶ. ಜನ ಈ ದೇಶದ ಯುವಕರ ಮೇಲೆ ಹೆಚ್ಚಿನ ವಿಶ್ವಾಸ ಹೊಂದಿದ್ದಾರೆ. ವಿಶ್ವ ನಾಯಕರು ಜಗತ್ತಿನ ಮೂಲಕ ಬೆಂಗಳೂರಿನ ಮೂಲಕ ಭಾರತವನ್ನು ನೋಡುತ್ತಿದೆ. ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಜಾರ್ಖಂಡ್ ಮತ್ತು ಅಸ್ಸಾಂ ಸೇರಿದಂತೆ ಹತ್ತು ಭಾರತೀಯ ರಾಜ್ಯಗಳ ಮುಖ್ಯಮಂತ್ರಿಗಳು ಹಲವಾರು ರಾಜ್ಯ ಸರ್ಕಾರಗಳ ಮುಖ್ಯಸ್ಥರೊಂದಿಗೆ ಶೃಂಗಸಭೆಯಲ್ಲಿ ಭಾಗವಹಿಸಿದ್ದರು. ಅರವತ್ತೈದು ದೇಶಗಳು ಭಾಗವಹಿಸಿದ್ದವು. ಎಲಾನ್ ಮಸ್ಕ್ ಮತ್ತು ಇತರರಂತಹ ದೊಡ್ಡ ಉದ್ಯಮಿಗಳು ಇದ್ದರು. ಸುಮಾರು 100 ಸಾರ್ವಜನಿಕ ಸಭೆಗಳು ನಡೆದವು ಮತ್ತು ಹೊಸ ನೀತಿಗಳನ್ನು ಚರ್ಚಿಸಲಾಯಿತು ಎಂದು ತಿಳಿಸಿದರು.

ದಾವೋಸ್‌ನಲ್ಲಿ ನಡೆದ ಚರ್ಚೆಗಳು ಡೇಟಾ ಕೇಂದ್ರಗಳು, ಜಾಗತಿಕ ಸಾಮರ್ಥ್ಯ ಕೇಂದ್ರಗಳು, ಆಹಾರ ಮತ್ತು ಪಾನೀಯ, ವಾಯುಯಾನ, ನವೀಕರಿಸಬಹುದಾದ ಇಂಧನ, ವಿದ್ಯುತ್ ವಾಹನಗಳು ಮತ್ತು ಎಲೆಕ್ಟ್ರಾನಿಕ್ಸ್ ಮತ್ತು 2047ರ ವೇಳೆಗೆ ಭಾರತದಲ್ಲಿ ನಗರೀಕರಣದ ಮೇಲೆ, ವಿಶೇಷವಾಗಿ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿವೆ. ವಿದೇಶಿ ಹೂಡಿಕೆದಾರರು ಇಲ್ಲಿಗೆ ಬಂದು ನಮ್ಮ ಲಭ್ಯವಿರುವ ಸಂಪನ್ಮೂಲಗಳು, ಸಾಮರ್ಥ್ಯಗಳು, ಪರಿಸರ, ಶುದ್ಧ ಇಂಧನ, ಮಾಲಿನ್ಯ ಮಟ್ಟ, ಪ್ರತಿಭೆ ಲಭ್ಯತೆ, ಕೃತಕ ಬುದ್ಧಿಮತ್ತೆ ಮತ್ತು ಡೇಟಾ ಸೆಂಟರ್ ಅವಶ್ಯಕತೆಗಳನ್ನು ನೋಡಬೇಕೆಂದು ನಾವು ಬಯಸುತ್ತೇವೆ, ಆದ್ದರಿಂದ ನಾವು ಅಲ್ಲಿ ಯಾವುದೇ ಹೊಸ ಒಪ್ಪಂದಗಳಿಗೆ ಸಹಿ ಹಾಕದಿರಲು ನಿರ್ಧರಿಸಿದ್ದೇವೆ ಎಂದರು.

ಹೂಡಿಕೆದಾರರು ಸ್ಥಳೀಯವಾಗಿ ಉದ್ಯೋಗವನ್ನು ಸೃಷ್ಟಿಸಲು ಶ್ರೇಣಿ –2 ಮತ್ತು ಶ್ರೇಣಿ–3 ನಗರಗಳಲ್ಲಿ ಹೂಡಿಕೆ ಮಾಡಲು ಆಸಕ್ತಿ ವ್ಯಕ್ತಪಡಿಸಿದ್ದಾರೆ. ಈ ನಗರಗಳು ರೋಮಾಂಚಕವಾಗಿರಬೇಕೆಂದು ಅವರು ಬಯಸುತ್ತಾರೆ. ಯುವಕರು ಅಲ್ಲಿ ಉದ್ಯೋಗಗಳನ್ನು ಪಡೆಯಬೇಕು ಮತ್ತು ದೊಡ್ಡ ನಗರಗಳಿಗೆ ಬರುವುದನ್ನು ತಪ್ಪಿಸಬೇಕು. ಮುಂದಿನ 25 ವರ್ಷಕ್ಕೆ ಅಗತ್ಯವಿರುವ ಸಂಚಾರಿ ಮಾರ್ಗದ ಯೋಜನೆ ರೂಪಿಸಬೇಕು. ಎಲ್ಲಾ ನಗರ ಪ್ರದೇಶಗಳಲ್ಲಿ ವರ್ತುಲ ರಸ್ತೆಗಳಿಗೆ ಯೋಜನೆ ರೂಪಿಸಬೇಕು ಎಂದು ಅಧಿಕಾರಿಗಳ ಜೊತೆ ಚರ್ಚೆ ನಡೆಸಲಾಗಿದೆ. ಸಮಯವೇ ಹಣ, ಯಾರೂ ಸಹ ಸಮಯ ವ್ಯರ್ಥ ಮಾಡಿಕೊಳ್ಳಲು ಬಯಸುವುದಿಲ್ಲ. ಹೀಗಾಗಿ ನಾವು ಈಗಿನಿಂದಲೇ ಯೋಜನೆ ರೂಪಿಸಬೇಕಿದೆ. ಈ ಬಗ್ಗೆ ನಾನು, ನಗರಾಭಿವೃದ್ಧಿ ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರು ಹಾಗೂ ಪೌರಾಡಳಿತ ಸಚಿವರು ಸಭೆ ಸೇರಿ, ನಗರ ಯೋಜನೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ದಾವೋಸ್‌ನಲ್ಲಿ ಡಾಟಾ ಸೆಂಟರ್, ಗ್ಲೋಬಲ್ ಕೇಪಬಲ್ ಸೆಂಟರ್, ಆಹಾರ ಮತ್ತು ಪಾನೀಯ, ಏವಿಯೇಷನ್, ನವೀಕೃತ ಇಂಧನ, ಇವಿ, ಎಲೆಕ್ಟ್ರಾನಿಕ್ಸ್, ಅಡ್ವಾನ್ಸ್ ಮ್ಯಾನ್ಯುಫ್ಯಾಕ್ಚರ್ ಕ್ಷೇತ್ರಕ್ಕೆ ಸಂಬಂಧಿಸಿದ ಸುಮಾರು 45ಕ್ಕೂ ಹೆಚ್ಚು ಕಂಪನಿಗಳ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಲಾಗಿದೆ ಎಂದು ತಿಳಿಸಿದರು.

ಬುನಾದಿ ಹಾಕಿದ್ದಾರೆ

ಅವತರಣಿಕೆಗಳೂ ಬಹಳ ಜನಪ್ರಿಯವಾಗಿವೆ ಎಂದು ಮುರ್ಮು ಅವರು ಹೇಳಿದರು.

ನಾರಿ ಶಕ್ತಿಯಿಂದ ಅಭ್ಯುದಯ: ಜನವರಿ 25ರ ರಾಷ್ಟ್ರೀಯ ಮತದಾರರ ದಿನವನ್ನು ಪ್ರಸ್ತಾಪಿಸಿ, ಮತ ಚಲಾಯಿಸುವುದರಿಂದ ರಾಜಕೀಯ ಶಿಕ್ಷಣ ಪ್ರಾಪ್ತವಾಗುತ್ತದೆ ಎಂಬುದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯವಾಗಿತ್ತು. ಅದೀಗ ಅದು ಸಾಕಾರವಾಗುತ್ತಿದೆ. ಮತದಾನ ಪ್ರಕ್ರಿಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚುತ್ತಿದೆ. ಈ ಮೂಲಕ ಗಣತಂತ್ರಕ್ಕೆ ಬಲ ಸಿಗುತ್ತಿದೆ. ಸಬಲೀಕೃತ ಮಹಿಳೆಯು ದೇಶದ ಅಭ್ಯುದಯದಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸುತ್ತಾರೆ. ಆರೋಗ್ಯ, ಶಿಕ್ಷಣ, ಸುರಕ್ಷತೆ ಮತ್ತು ಆರ್ಥಿಕ ಸಬಲೀಕರಣದ ಕ್ರಮಗಳು ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ಸಕ್ರಿಯರಾಗಲು ಸಾಧ್ಯವಾಗಿಸಿದೆ ಎಂದು ಬಣ್ಣಿಸಿದರು. ದ್ರೌಪದಿ ಮುರ್ಮು ಅವರು ಇದೇ ವೇಳೆ ಜಿಎಸ್‌ಟಿ ಸುಧಾರಣೆ, ಆಪರೇಷನ್ ಸಿಂದೂರ್ ಅನ್ನು ಶ್ಲಾಘಿಸಿದರು. ದೇಶಕ್ಕೆ ಆಹಾರ ಭದ್ರತೆ ಒದಗಿಸುತ್ತಿರುವ ರೈತರನ್ನೂ ಪ್ರಶಂಸಿಸಿದರು.

ಭಾಷಣ ವಿವಾದ ಕುರಿತು ರಾಷ್ಟ್ರಪತಿಗೆ ರಾಜ್ಯಪಾಲರ ಪ್ರತ್ಯೇಕ ವರದಿ

ಬೆಂಗಳೂರು: ರಾಜ್ಯ ವಿಧಾನಸಭೆಯಲ್ಲಿ



ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಂಡಿಸಿದ ನಂತರ ನಡೆದ ಘಟನೆಗಳಿಗೆ ಸಂಬಂಧಿಸಿದಂತೆ ವಾಸ್ತವ ಅಂಶಗಳ ಪ್ರತ್ಯೇಕ ವರದಿಯೊಂದನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದ್ದಾರೆ.

ರಾಜ್ಯದಲ್ಲಿನ ರಾಜಕೀಯ, ಸಾಮಾಜಿಕ, ಅಭಿವೃದ್ಧಿ ಚಟುವಟಿಕೆ ಸೇರಿದಂತೆ ಎಲ್ಲ ಬೆಳವಣಿಗೆಗಳ ಕುರಿತು ರಾಷ್ಟ್ರಪತಿಗೆ ಪ್ರತಿ ತಿಂಗಳು ವರದಿ ಸಲ್ಲಿಸಲಾಗುತ್ತದೆ. ಆದರೆ, ಜಂಟಿ ಅಧಿವೇಶನ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ನಡೆದಿದ್ದ ಘಟನೆ ಮತ್ತು ಆ ನಂತರದ ಬೆಳವಣಿಗೆಗಳ ಕುರಿತು ಪ್ರತ್ಯೇಕವಾದ ವರದಿಯನ್ನು ಸಲ್ಲಿಸಲಾಗಿದೆ ಎಂದು ಲೋಕಭವನದ ಮೂಲಗಳು ತಿಳಿಸಿವೆ.

ಜಂಟಿ ಅಧಿವೇಶನದ ಹಿಂದಿನ ದಿನ(ಜ.21) ಮತ್ತು ಮರುದಿನ ನಡೆದ ವಿದ್ಯಮಾನಗಳನ್ನು ತಮ್ಮ ವರದಿಯಲ್ಲಿ ರಾಜ್ಯಪಾಲರು ಉಲ್ಲೇಖಿಸಿದ್ದಾರೆ. ರಾಜ್ಯ ಸರ್ಕಾರ ಕಳುಹಿಸಿದ್ದ ಭಾಷಣದಲ್ಲಿ ವಿಬಿ ಜಿ ರಾಮ್ ಜಿ ಕಾಯ್ದೆಯೂ ಸೇರಿದಂತೆ ಕೇಂದ್ರ ಸರ್ಕಾರವನ್ನು ಟೀಕಿಸಲಾಗಿತ್ತು. ಈ ಭಾಗವನ್ನು ಪರಿಷ್ಕರಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿತ್ತು. ಬಳಿಕ ವಿಧಾನಸಭಾಧ್ಯಕ್ಷ, ವಿಧಾನ ಪರಿಷತ್ ಸಭಾಪತಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು, ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರ ಜತೆಗೆ ನಡೆದ ಚರ್ಚೆ ನಡೆಸಿದರು. 'ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಬೇಕಾದ ಸಂವಿಧಾನಬದ್ಧ ಕರ್ತವ್ಯ ನಿಭಾಯಿಸಿದ್ದೇನೆ' ಎಂಬುದನ್ನು ವರದಿಯಲ್ಲಿ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಭಾಷಣ ಮುಗಿಸಿ ವಿಧಾನಸಭೆಯಿಂದ ಹೊರ ಹೋಗುವ ಸಂದರ್ಭದಲ್ಲಿ ರಾಜ್ಯಪಾಲರ ವಿರುದ್ಧ ಘೋಷಣೆ ಕೂಗಿ ಒತ್ತಡ ಹೇರಲು ಪ್ರಯತ್ನಿಸಿದ ಕಾಂಗ್ರೆಸ್ ಸದಸ್ಯರ ವರ್ತನೆ ಬಗ್ಗೆಯೂ ವರದಿಯಲ್ಲಿ ಉಲ್ಲೇಖವಿದೆ. ಘಟನೆಯ ನಂತರ ಸದನದಲ್ಲಿ ಕಾಂಗ್ರೆಸ್, ಬಿಜೆಪಿ ನಾಯಕರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನೂ ಉಲ್ಲೇಖಿಸಲಾಗಿದೆ. ಒಟ್ಟಿನಲ್ಲಿ ಏನೇನು ನಡೆಯಿತು ಎಂಬ ವಿವರ ವರದಿಯಲ್ಲಿದೆ. ಈ ಘಟನಾವಳಿಗಳ ಕುರಿತು ರಾಜ್ಯಪಾಲರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಈ ವರದಿಯಲ್ಲಿ ವ್ಯಕ್ತಪಡಿಸಿಲ್ಲ ಎಂದೂ ಮೂಲಗಳು ತಿಳಿಸಿವೆ.

ಚುನಾವಣೆಯಲ್ಲಿ ಯುವ ಮತದಾರರು ತಪ್ಪದೆ ಮತದಾನದ ಹಕ್ಕು ಚಲಾಯಿಸಿ

ಮಡಿಕೇರಿ,ಜ.25–ಪ್ರತಿಯೊಬ್ಬ ಯುವ ಮತದಾರರು ಗುರುತಿನ ಚೀಟಿ ಪಡೆಯುವ ಮೂಲಕ ಚುನಾವಣೆ ಸಂದರ್ಭದಲ್ಲಿ ತಪ್ಪದೆ ಮತ ಹಕ್ಕು ಚಲಾಯಿಸುವಂತಾಗಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಎಸ್.ಜೆ.ಸೋಮಶೇಖರ್ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಚುನಾವಣಾ ಆಯೋಗ, ಜಿಲ್ಲಾಡಳಿತ ವತಿಯಿಂದ ಭಾನುವಾರ ನಡೆದ ರಾಷ್ಟ್ರೀಯ ಮತದಾರರ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಚುನಾವಣೆಯನ್ನು ಹಬ್ಬ ಎಂದು ಕರೆಯುತ್ತೇವೆ. ಈ ಹಬ್ಬದಲ್ಲಿ ತಪ್ಪದೆ ಮತದಾನ ಹಕ್ಕು ಚಲಾಯಿಸಬೇಕು 18ವರ್ಷ ಪೂರ್ಣಗೊಂಡ ಯುವ ಮತದಾರರು ಸ್ವಯಂಪ್ರೇರಿತರಾಗಿ ಬಂದು ಮತದಾನದ ಹಕ್ಕನ್ನು ಚಲಾಯಿಸಬೇಕು. ಯಾವುದೇ ಕಾರಣಕ್ಕೂ ಹಿಂಜರಿಯದೆ, ಪ್ರಜಾಪ್ರಭುತ್ವ ರಾಷ್ಟ್ರವನ್ನು ಬಲಪಡಿಸುವತ್ತ ಗಮನಹರಿಸಬೇಕು ಎಂದರು.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶ ಜಿ.ಸುರೇಂದ್ರ ಮಾತನಾಡಿ, ಭಾರತ ವಿಶ್ವದಲ್ಲಿಯೇ ದೊಡ್ಡ ಪ್ರಜಾಪ್ರಭುತ್ವ ಸಂವಿಧಾನ ರಾಷ್ಟ್ರವಾಗಿದೆ ದೇಶ ಶೇ.65 ಕ್ಕೂ ಹೆಚ್ಚು ಯುವ ಮತದಾರರನ್ನು ಹೊಂದಿದ್ದು, ಯುವಜನರು ತಪ್ಪದೆ ಮತದಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಇತ್ತೀಚಿನ ವರ್ಷಗಳಲ್ಲಿ ಯುವ ಜನರು ಐಪಿಎಲ್ ಕ್ರೀಡೆಗೆ ಹೆಚ್ಚಿನ ಒತ್ತು ನೀಡುತ್ತಾರೆ, ಮತದಾನ ದಿನದಂದು ಪ್ರವಾಸ ತೆರಳುತ್ತಾರೆ. ಇದರಿಂದ ಪ್ರಜಾಪ್ರಭುತ್ವ ಉಳಿಸಲು ಸಾಧ್ಯವೇ ಎಂಬ ಬಗ್ಗೆ ಪ್ರತಿಯೊಬ್ಬರೂ ಅವಲೋಕಿಸಬೇಕು ಎಂದು ಕಿವಿಮಾತು ಹೇಳಿದರು.



ಜಿಲ್ಲಾ ಚುನಾವಣಾಧಿಕಾರಿ ಎಸ್.ಜೆ.ಸೋಮಶೇಖರ್ ಯುವ ಮತದಾರರಿಗೆ ಗುರುತಿನ ಚೀಟಿಯನ್ನು ವಿತರಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದು ಮಣಿ ಮಾತನಾಡಿ, 18 ವರ್ಷ ಪೂರ್ಣಗೊಂಡ ನಂತರ ಮೊದಲ ಬಾರಿಗೆ ಚುನಾವಣಾ ಗುರುತಿನ ಚೀಟಿ ಪಡೆದಾಗ ಒಂದು ರೀತಿ ರೋಮಾಂಚಕವಾಗಿತ್ತು ಎಂದು ಸ್ಮರಿಸಿದರು. ಪ್ರಜಾಪ್ರಭುತ್ವದಲ್ಲಿ ಮತದಾನದ ಮೌಲ್ಯವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು. ಮತದಾನ ಮಾಡುವಾಗ ಎಚ್ಚರ ವಹಿಸಬೇಕು. ಯಾರ ಪ್ರಭಾವಕ್ಕೂ ಒಳಗಾಗದೆ ಮತದಾನ ಮಾಡುವುದು ಅರ್ಹರೆಲ್ಲರ ಜವಾಬ್ದಾರಿಯಾಗಿದೆ ಎಂದರು. ಕುಗ್ರಾಮಗಳಲ್ಲಿಯೂ ಸಹ ಹೆಚ್ಚಿನ ಮತದಾನ ಆಗಬೇಕು. ಮತದಾನದಲ್ಲಿ ಖುಷಿಯಿಂದ ಭಾಗವಹಿಸಿ, ಜಿಲ್ಲೆಯಲ್ಲಿ ಶೇಕಡಾವಾರು ಮತದಾನಕ್ಕೆ ಹೆಚ್ಚಿನ ರೀತಿಯಲ್ಲಿ ಶ್ರಮಿಸಬೇಕು ಎಂದು ಕರೆ ನೀಡಿದರು.

ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಪ್ರತಿಜ್ಞಾವಿಧಿ ಬೋಧಿಸಿ, ಮಾತನಾಡಿ ಮತದಾರರಿಗೆ ಚುನಾವಣಾ ಗುರುತಿನ ಚೀಟಿಯನ್ನು ಗಣ್ಯರು ವಿತರಿಸಿದರು. ರಾಷ್ಟ್ರೀಯ ಮತದಾರರ ದಿನದ ಪ್ರಯುಕ್ತ ಪ್ರೌಢಶಾಲಾ, ಪದವಿಪೂರ್ವ ಮತ್ತು ಪದವಿ ಹಂತದ ವಿದ್ಯಾರ್ಥಿಗಳಿಗೆ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಲಾಗಿದ್ದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಜಿಲ್ಲೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಬೂತ್ ಮಟ್ಟದ ಇಬ್ಬರು ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ತಹಶೀಲ್ದಾರ್ ಆರ್.ಶ್ರೀಧರ, ಶಿಕ್ಷಣಾಧಿಕಾರಿ ಶರ್ಮಿಳ, ಕಾನೂನು ಸೇವಾ ಪ್ರಾಧಿಕಾರದ ಆಡಳಿತ ಸಹಾಯಕ ಜಯಪ್ಪ, ಶಿರಸ್ತೆದಾರ್ ಮಧುಕರ, ಮಹೇಶ್, ಚಂದ್ರಶೇಖರ್, ಅನಿಲ್‌ಕುಮಾರ್ ಮತ್ತಿತರರಿದ್ದರು.

ಜ.30, ಹುತಾತ್ಮರ ದಿನ

ಮಡಿಕೇರಿ: ಹುತಾತ್ಮರ ದಿನ ಅಂಗವಾಗಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಚಿತಾಭಸ್ಮವನ್ನು ಜ.30ರ ಬೆಳಗ್ಗೆ 9.30ಕ್ಕೆ ನಗರದ ಜಿಲ್ಲಾ ಖಜಾನೆಯಿಂದ ಮೆರವಣಿಗೆಯಲ್ಲಿ ಪೊಲೀಸ್ ಗೌರವ ರಕ್ಷೆಯೊಂದಿಗೆ ತೆಗೆದುಕೊಂಡು ಹೋಗಿ ಗಾಂಧಿ ಮಂಟಪದ ಆವರಣದಲ್ಲಿರಿಸಿ ಬೆಳಗ್ಗೆ 10.30ಕ್ಕೆ ಸರ್ವಧರ್ಮ ಪ್ರಾರ್ಥನೆ ನಡೆಯಲಿದೆ

ಕೊಡಗಿನ ಬಿ.ಎಲ್.ಯಶಸ್ ರೈಗೆ ರಾಜ್ಯ ಯುವ ಪ್ರಶಸ್ತಿ

ಮಡಿಕೇರಿ: ರಾಜ್ಯ ಯುವ ಸಂಘಗಳ ಒಕ್ಕೂಟ ಹಾಗೂ ಬೆಳಗಾವಿ ಜಿಲ್ಲಾ ಯುವ ಘಟಕದ ವತಿಯಿಂದ ನೀಡಲಾಗುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರಾಜ್ಯ ಯುವ ಪ್ರಶಸ್ತಿಗೆ ಕೊಡಗಿನ ಬಿ.ಎಲ್.ಯಶಸ್ ರೈ ಆಯ್ಕೆಯಾಗಿದ್ದಾರೆ.

ಬಿ.ಎಲ್.ಯಶಸ್ ರೈ ದೆಹಲಿಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ವಿಶೇಷ ಯುವ ರಾಯಭಾರಿಯಾಗಿ ಕರ್ನಾಟಕವನ್ನು ಪ್ರತಿನಿಧಿಸಿದ್ದರು. ಅಲ್ಲದೆ ಜಿಲ್ಲಾ ಯುವ ಜನೋತ್ಸವದ ವಿಜ್ಞಾನ ಮೇಳದಲ್ಲಿ ಭಾಗವಹಿಸಿದ್ದರು. ಇವರು ಮೂರ್ನಾಡು ಕೊಡಂಬೂರುವಿನ ಲವಕುಮಾರ್ ರೈ ಹಾಗೂ ಜಯಂತಿ ರೈ ದಂಪತಿ ಪುತ್ರ. ಜ.27ರಂದು ಬೆಳಗಾವಿ ಜಿಲ್ಲೆ ಮೂಡಲಗಿಯಲ್ಲಿ ನಡೆಯುವ ಯುವಜಾತ್ರೆ ಕಾರ್ಯಕ್ರಮದಲ್ಲಿ ಬಿ.ಎಲ್.ಯಶಸ್ ರೈ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಜಿಲ್ಲಾ ಯುವ ಒಕ್ಕೂಟದ ಅಧ್ಯಕ್ಷ ಪಿ.ಪಿ.ಸುಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉರೂಸ್ ಸಮಾರಂಭದ ಪೋಸ್ಟರ್ ಬಿಡುಗಡೆ



ದರ್ಗಾದ ವಾರ್ಷಿಕ ಮಖಾಂ ಉರೂಸ್‌ನ ಮಸೀದಿಯ ಸಹಾಯಕ ಖತೀಬ ರಫೀಕ್ ಸಖಾಫಿ ಪೋಸ್ಟರನ್ನು ಬಿಡುಗಡೆಗೊಳಿಸಿದರು.

ನಾಪೋಕ್ಲು, ಜ.25–ಇಲ್ಲಿಗೆ ಸಮೀಪದ ಚೆರಿಯಪರಂಬು ದರ್ಗಾದ ವಾರ್ಷಿಕ ಮಖಾಂ ಉರೂಸ್ ಸಮಾ ರಂಭದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಲಾಯಿತು.

ಪ್ರತಿ ವರ್ಷ ಜರುಗುವ ಉರೂಸ್ ಈ ಬಾರಿ ಫೆ.6ರಿಂದ 10ರವರೆಗೆ ನಡೆಯಲಿದೆ. ಶುಕ್ರವಾರದ ಜುಮಾ ನಮಾಜಿನ ಬಳಿಕ ಮಸೀದಿಯ ಆವರಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಮಸೀದಿಯ ಸಹಾಯಕ ಖತೀಬರಾದ ರಫೀಕ್ ಸಖಾಫಿ ಪೋಸ್ಟರನ್ನು ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಚೆರಿಯಪರಂಬು ಜಮಾಯತಿನ ಹಾಲಿ ಹಾಗೂ ಮಾಜಿ ಅಧ್ಯಕ್ಷರು ಪದಾಧಿಕಾರಿಗಳು, ಸದಸ್ಯರು ಹಾಗೂ ಮತಬಾಂಧವರು ಹಾಜರಿದ್ದರು.

ವಿಶ್ವಶಾಂತಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿರುವ ರೆಡ್‌ಕ್ರಾಸ್ ಸಂಸ್ಥೆ

ಮಡಿಕೇರಿ: ರೆಡ್‌ಕ್ರಾಸ್ ಸಂಸ್ಥೆ ವಿಶ್ವದಲ್ಲಿ ಮಾನವೀಯ ಧರ್ಮವನ್ನು ಪ್ರಚುರಪಡಿಸುವ ಮೂಲಕ ವಿಶ್ವಶಾಂತಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಲಕ್ಷಾಂತರ ಮಂದಿಗೆ ನೆರವನ್ನು ಒದಗಿಸುತ್ತಾ ಬಂದಿದ್ದು, ಜಿಲ್ಲೆಯಲ್ಲೂ ರೆಡ್‌ಕ್ರಾಸ್‌ಗೆ ಹೆಚ್ಚಿನ ಸದಸ್ಯರು ಸೇರ್ಪಡೆಯಾಗಬೇಕೆಂದು ರಾಜ್ಯ ಉಪಾಧ್ಯಕ್ಷ ಬಿ.ಭಾಸ್ಕರರಾವ್ ತಿಳಿಸಿದ್ದಾರೆ.



ರೆಡ್‌ಕ್ರಾಸ್‌ಗೆ ಭೇಟಿ ನೀಡಿದ್ದ ರಾಜ್ಯ ಉಪಾಧ್ಯಕ್ಷ ಬಿ.ಭಾಸ್ಕರರಾವ್‌ರವರನ್ನು ಸಭಾಧ್ಯಕ್ಷ ಬಿ.ಕೆ. ರವೀಂದ್ರ ರೈ ಸ್ವಾಗತಿಸಿದರು.

ನಗರದ ರೆಡ್‌ಕ್ರಾಸ್ ಭವನಕ್ಕೆ ಭೇಟಿ ನೀಡಿ ಯಾವುದೇ ದೇಶಗಳ ನಡುವೆ ಅಶಾಂತಿ ವಾತಾವರಣ ಪರಿಸ್ಥಿತಿ ಉದ್ಭವಿಸಿದಾಗ ರೆಡ್‌ಕ್ರಾಸ್ ಪ್ರಮುಖರು ಅಂಥ ದೇಶಗಳ ನಡುವೆ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಸಕ್ರಿಯರಾಗುತ್ತಾರೆ. ಎಂದರು.

ಕೊಡಗಿನಲ್ಲಿ ತಾವು ಪೊಲೀಸ್ ವರಿಷ್ಠಾಧಿಕಾರಿಯಾಗಿ ಕರ್ತವ್ಯ ಸಲ್ಲಿಸಿದ ದಿನಗಳು ತನ್ನ ಜೀವನದಲ್ಲಿಯೇ ಸ್ಮರಣೀಯವಾಗಿವೆ ಎಂದು ಹೆಮ್ಮೆಯಿಂದ ಹೇಳಿದ ಭಾಸ್ಕರ ರಾವ್, ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಸಂಚಾರ ನಿಯಂತ್ರಣ ಸಂಬಂಧಿತ ಈಗಲೇ ಎಚ್ಚೆತ್ತುಕೊಂಡು ಸೂಕ್ತ ಪರಿಹಾರೋಪಾಯ ಕಂಡು ಹುಡುಕದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ಸಂಚಾರ ಸಮಸ್ಯೆಯ ಜತೆಗೆ ಪ್ರವಾಸಿಗರೂ ಮಡಿಕೇರಿಯಿಂದ ದೂರವಾಗುವ ಸಾಧ್ಯತೆ ನಿಚ್ಚಳವಾಗಿದೆ ಎಂದೂ ಕಿವಿಮಾತು ಹೇಳಿದರು.

ಎಸ್ ಪಿ ಬಿಂದು ಮಣಿ ಮಾತನಾಡಿ, 20 ದಿನಗಳಿಂದ ಪ್ರತಿ ಪೊಲೀಸ್ ಠಾಣೆಗಳಿಗೂ ಭೇಟಿ ನೀಡಿ ಆಯಾ ಗ್ರಾಮ ವ್ಯಾಪ್ತಿಯಲ್ಲಿನ ಕಾನೂನು ಸಮಸ್ಯೆಗಳನ್ನು ತಿಳಿದುಕೊಂಡು ಸೂಕ್ತ ಪರಿಹಾರೋಪಾಯ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದೇನೆ ಎಂದು ತಿಳಿಸಿದರು.

ರೆಡ್‌ಕ್ರಾಸ್ ಸಭಾಧ್ಯಕ್ಷ ಬಿ.ಕೆ. ರವೀಂದ್ರ ರೈ ಮಾತನಾಡಿ, ಜಿಲ್ಲೆಯಲ್ಲಿ ಪ್ರಸ್ತುತ ರೆಡ್‌ಕ್ರಾಸ್‌ನಲ್ಲಿ 350 ಸದಸ್ಯರಿದ್ದು ಮುಂದೆ ಸೋಮವಾರಪೇಟೆ, ವಿರಾಜಪೇಟೆಯಲ್ಲಿಯೂ ಘಟಕ ಪ್ರಾರಂಭಿಸಿ ಸದಸ್ಯತ್ವವನ್ನು ಹೆಚ್ಚಿಸಲಾಗುತ್ತದೆ ಎಂದರು.

ರೆಡ್‌ಕ್ರಾಸ್ ಕೊಡಗು ಘಟಕದ ಉಪಾಧ್ಯಕ್ಷ ಅನಿಲ್ ಹೆಚ್.ಟಿ, ಖಜಾಂಚಿ ಪ್ರಸಾದ್ ಗೌಡ, ಪ್ರಮುಖರಾದ ಎಸ್.ಸಿ. ಸತೀಶ್, ಮಧುಕರ್, ಉತ್ತಯ್ಯ, ಸತೀಶ್ ರೈ, ವಿಜಯ್ ರೈ, ವಸಂತ್, ಪ್ರಭಾಕರ್, ಲೋಕೇಶ್ ಮತ್ತಿತರರು ಹಾಜರಿದ್ದರು.

ಪ್ರಾಥಮಿಕ ಶಾಲಾ ಆನ್ಲೈನ್ ನಲ್ಲಿ ದೇಶಭಕ್ತಿಗೀತೆ ಸ್ಪರ್ಧೆ

ನಾಪೋಕ್ಲು, ಜ.25–ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್, ತಾಲೂಕು ಘಟಕದ ವತಿಯಿಂದ, ಜಿಲ್ಲಾಧ್ಯಕ್ಷ ಚಾಮೆರ ದಿನೇಶ್ ಬೆಳ್ಯಪ್ಪ ನೇತೃತ್ವದಲ್ಲಿ ತಾಲೂಕು ಮಟ್ಟದ ಆನ್‌ಲೈನ್ ದೇಶಭಕ್ತಿ ಗೀತೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಸ್ಪರ್ಧೆಯು ತಾಲೂಕು ವ್ಯಾಪ್ತಿಗೆ ಸೀಮಿತವಾಗಿ ನಡೆಯಲಿದ್ದು, ಭಾಗವಹಿಸುವ ವಿದ್ಯಾರ್ಥಿಗಳು ಒಂದರಿಂದ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. ಆಸಕ್ತ ವಿದ್ಯಾರ್ಥಿಗಳು, ತಮ್ಮ ಹೆಸರು, ಶಾಲೆ ಮತ್ತು ತರಗತಿಯನ್ನು ಉಲ್ಲೇಖಿಸಿ, ಯಾವುದೇ ಮ್ಯೂಸಿಕ್ ಬಳಸದೆ, 4 ನಿಮಿಷದ ಒಳಗಾಗಿ ಹಾಡಿ, ರೆಕಾರ್ಡ್ ಮಾಡಿದ ವಿಡಿಯೋವನ್ನು ಕರಿನೆರವಂಡ ಡ್ಯಾನಿ ಕುಶಾಲಪ್ಪ ವಾಟ್ಸಾಪ್ ಸಂಖ್ಯೆ 9611478539ಗೆ ಫೆ.5ರ ಒಳಗಾಗಿ ತಲುಪುವಂತೆ ಕಳುಹಿಸಬಹುದು.

ವಿಜೇತರಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಮತ್ತು ಎಲ್ಲರಿಗೂ, ಡಿಜಿಟಲ್ ಅಭಿನಂದನಾಪತ್ರ ನೀಡಲಾಗುವುದು ಎಂದು ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ವಿರಾಜಪೇಟೆ ತಾಲೂಕು ಅಧ್ಯಕ್ಷ ಮುಕ್ಕಾಟಿರ ಕಾವೇರಮ್ಮ ಕರುಂಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಹಾರ ಸೇವಿಸಿ ಆಶ್ರಮ ಶಾಲೆ ವಿದ್ಯಾರ್ಥಿಗಳು ಅಸ್ವಸ್ಥ

ಸಿದ್ದಾಪುರ,ಜ.25–ಆಶ್ರಮ ಶಾಲೆಯಲ್ಲಿ ನೀಡಿದ ಆಹಾರ ಸೇವಿಸಿದ ವಿದ್ಯಾರ್ಥಿಗಳು ಅಸ್ವಸ್ಥರಾದ ಘಟನೆ ವಿರಾಜಪೇಟೆ ತಾಲೂಕಿನ ದಿಡ್ಡಳ್ಳಿ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.



ಆಹಾರ ಸೇವನೆಯ ನಂತರ ಹಲವು ವಿದ್ಯಾರ್ಥಿಗಳಿಗೆ ವಾಂತಿ, ಹೊಟ್ಟೆನೋವು ಕಾಣಿಸಿಕೊಂಡಿದ್ದು, ತಕ್ಷಣ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಅಸ್ವಸ್ಥಗೊಂಡ ಮಕ್ಕಳನ್ನು ಮೊದಲಿಗೆ ಮಾಲ್ದಾರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಮಕ್ಕಳ ಆರೋಗ್ಯ ಸ್ಥಿತಿ ಗಂಭೀರವಾಗಿದ್ದ ಹಿನ್ನೆಲೆಯಲ್ಲಿ ಶನಿವಾರ ರಾತ್ರಿಯೇ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಈ ಆಶ್ರಮ ಶಾಲೆಯ ಬಗ್ಗೆ ಹಿಂದಿನಿಂದಲೂ ನಿರಂತರ ಆರೋಪಗಳು ಕೇಳಿಬರುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆದಿವಾಸಿ ಸಮುದಾಯದ ಮಕ್ಕಳು ಓದುತ್ತಿರುವ ಈ ಶಾಲೆಯಲ್ಲಿ ಮೂಲ ಸೌಕರ್ಯಗಳ ಕೊರತೆ ಇದೆ ಎಂದು ಪೋಷಕರು ಆರೋಪಿಸಿದ್ದಾರೆ. ಹಾಸ್ಟೆಲ್ ಆಹಾರದ ಗುಣಮಟ್ಟ, ಸ್ವಚ್ಛತೆ ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಸೂಕ್ತ ಕಾಳಜಿ ವಹಿಸಲಾಗುತ್ತಿಲ್ಲ ಎಂಬ ದೂರುಗಳು ಮರುಕಳಿಸುತ್ತಿವೆ. ಈ ಸಮಸ್ಯೆಗಳನ್ನು ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜನಪ್ರತಿನಿಧಿಗಳ ನಿರ್ಲಕ್ಷ್ಯವೂ ಇಂತಹ ದುರ್ಘಟನೆಗೆ ಕಾರಣವಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಇದೇ ವೇಳೆ, ಐಟಿಡಿಪಿ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯವೇ ಮಕ್ಕಳ ಈ ಸ್ಥಿತಿಗೆ ಪ್ರಮುಖ ಕಾರಣ ಎಂದು ಪೋಷಕರು ದೂರಿದ್ದು, ಕೂಡಲೇ ಸಮಗ್ರ ತನಿಖೆ ನಡೆಸಿ ಹೊಣೆಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಆರೋಗ್ಯ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ರಾಷ್ಟ್ರೀಯ ಮತದಾರರ ದಿನ ಅರ್ಥಪೂರ್ಣ ಆಚರಣೆ



ಜಿಪಂ ಮುಖ್ಯ ಸಿಇಓ ಮೋನಾ ರೋತ್ ರಾಷ್ಟ್ರೀಯ ಮತದಾರರ ದಿನದ ಪ್ರತಿಜ್ಞಾವಿಧಿ ಬೋಧಿಸಿದರು.

ಚಾಮರಾಜನಗರ: ನಾಗರಿಕರು ಹಾಗೂ ವಿಶೇಷವಾಗಿ 18 ವರ್ಷ ತುಂಬಿದ ಯುವ ಜನರ ಸಾಂವಿಧಾನಿಕ ಹಕ್ಕು ಮತ್ತು ಮತದಾನದ ಕರ್ತವ್ಯವನ್ನು ಪ್ರೋತ್ಸಾಹಿಸುವ ಸಲುವಾಗಿ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ನಗರದಲ್ಲಿಂದು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಚುನಾವಣಾ ಆಯೋಗ, ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ್ ಮಾತನಾಡಿ, ಮತದಾನ ಅಮೂಲ್ಯವಾದದ್ದು. ಉತ್ತಮ ಬೀಜ ಬಿತ್ತಿದರೆ ಉತ್ತಮ ಫಸಲು ಬರುತ್ತದೆ, ಹಾಗೆಯೇ ಉತ್ತಮ ವ್ಯಕ್ತಿಯನ್ನು ಆರಿಸಿದರೆ ಜನಸೇವೆ ಮಾಡುವ ಉತ್ತಮ ಸರ್ಕಾರ ನಮ್ಮದಾಗಲಿದೆ ಎಂದರು.

ಜಿಲ್ಲಾಧಿಕಾರಿ ಶ್ರೀರೂಪ ಅಧ್ಯಕ್ಷತೆ ವಹಿಸಿದ್ದು, ಪ್ರಜಾಪ್ರಭುತ್ವದ ಬಲಿಷ್ಠತೆಗಾಗಿ ನಾಗರಿಕರಾದ ನಾವು ಮತದಾನದ ಪ್ರಾಮುಖ್ಯತೆ ತಿಳಿದು ಮತದಾನದ ಹಕ್ಕು ಚಲಾಯಿಸಲು ಯುವಜನರು ಮುಂದಾಗಬೇಕು. ಮತದಾನ ನಮ್ಮ ಹಕ್ಕು ಹಾಗೂ ಕರ್ತವ್ಯವಾಗಿದೆ ಎಂದರು.

ನಗರದ ದೀನಬಂಧು ಸಂಸ್ಥೆಯ ಕಾರ್ಯದರ್ಶಿ ಪ್ರೊ.ಜಿ.ಎಸ್. ಜಯದೇವ ಮಾತನಾಡಿ, ಯುವ ಮತದಾರರು ಯಾವುದೇ ಆಮಿಷಕ್ಕೂ ಒಳಗಾಗದೆ ನೈತಿಕ ಮತದಾನಕ್ಕೆ ಮುಂದಾಗಬೇಕು. ನಾವು ಆರಿಸುವ ಸರ್ಕಾರ ನಮ್ಮ ಆಶೋತ್ತರಗಳನ್ನು ಈಡೇರಿಸುವಂತಿರಬೇಕು. ಪ್ರಾಮಾಣಿಕ ವ್ಯಕ್ತಿಯನ್ನು ಆರಿಸಲು ಮೊದಲು ನಾವು ಪ್ರಾಮಾಣಿಕರಾಗಬೇಕು ಎಂದು ಸಲಹೆ ನೀಡಿದರು.

ಜಿ.ಪಂ ಸಿಇಓ ಮೋನಾರೋತ್ ರಾಷ್ಟ್ರೀಯ ಮತದಾರರ ದಿನದ ಪ್ರತಿಜ್ಞಾವಿಧಿ ಬೋಧಿಸಿದರು. ಎಡಿಸಿ ಟಿ. ಜವರೇಗೌಡ, ಜಿ. ಪಂ. ಉಪ ಕಾರ್ಯದರ್ಶಿ ಶ್ರುತಿ, ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಜಿಲ್ಲಾ ಚುನಾವಣಾ ರಾಯಭಾರಿ ದೀಪಾಬುದ್ದೆ, ತಹಸೀಲ್ದಾರ್ ಗಿರಿಜಾ, ಜಿಲ್ಲಾಮಟ್ಟದ ಅಧಿಕಾರಿಗಳು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಮತದಾರರ ಜಾಗೃತಿಗಾಗಿ ಚುನಾವಣಾ ಆಯೋಗ ಬಿಡುಗಡೆಗೊಳಿಸಿರುವ 'ನನ್ನ ಭಾರತ–ನನ್ನ ಮತ' ಲಾಂಛನವನ್ನು ಬೋರ್ಡ್‌ನಲ್ಲಿ ಚಿತ್ರಬಿಡಿಸುವ ಮೂಲಕ ಗಣ್ಯರು ಅನಾವರಣಗೊಳಿಸಿದರು. ಶತಾಯುಷಿ ಮತದಾರರು, ವಿಶೇಷ ಚೇತನರು, ಚುನಾವಣೆಗಳಲ್ಲಿ ಉತ್ತಮ ಕೆಲಸ ನಿರ್ವಹಿಸಿದ ಬಿಎಲ್‌ಓ ಮತ್ತು ಸೂಪರ್‌ವೈಸರ್‌ಗಳು ಹಾಗೂ ಪ್ರೌಢಶಾಲಾ, ಪದವಿಪೂರ್ವ ಹಾಗೂ ಪದವಿ ವಿಭಾಗದಲ್ಲಿ ಮತದಾನದ ಮಹತ್ವ ಕುರಿತು ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರನ್ನು ಸನ್ಮಾನಿಸಲಾಯಿತು.

ರಾಷ್ಟ್ರೀಯ ಮತದಾರರ ದಿನದ ಜಾಗೃತಿಗಾಗಿ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಜಿಲ್ಲಾಡಳಿತ ಭವನದವರೆಗೆ 'ಸೈಕಲ್ ಜಾಥಾ' ಹಮ್ಮಿಕೊಳ್ಳಲಾಗಿತ್ತು ಭಾರತ ಸರ್ಕಾರದ ಯುವಜನ ಕಲ್ಯಾಣ ಹಾಗೂ ಕ್ರೀಡಾ ಸಚಿವಾಲಯದ "ಫಿಟ್ ಇಂಡಿಯಾ ಸೈಕಲಿಂಗ್ ಡ್ರೈವ್" ಅಡಿಯಲ್ಲಿ ನಗರದ ಪ್ರಮುಖ ರಸ್ತೆಯಲ್ಲಿ ಜನಜಾಗೃತಿ ಮೂಡಿಸುವ ಪ್ಲೇಕಾರ್ಡ್‌ಗಳ ಮೂಲಕ 'ಸಂಡೇ ಆನ್ ಸೈಕಲ್' ಅಭಿಯಾನ ನಡೆಸಲಾಯಿತು.

ಮೂಲ ಸೌಲಭ್ಯಗಳಿಂದ ವಂಚಿತ ಗ್ರಾಮೀಣ ಪ್ರದೇಶ

ಚಾಮರಾಜನಗರ, ಜ.25–ಗ್ರಾಮೀಣ ಪ್ರದೇಶದ ಜನರು ಅನ್ನ, ಅಕ್ಷರ, ಆರೋಗ್ಯಗಳಂತಹ ಮೂಲ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಕಳವಳ ವ್ಯಕ್ತಪಡಿಸಿದ್ದಾರೆ.

ಗುಂಡ್ಲುಪೇಟೆ ತಾಲೂಕಿನ ದೊಡ್ಡತುಪ್ಪೂರು ಗ್ರಾಮದಲ್ಲಿ ಪ್ರಾರಂಭವಾದ ರೇಡಿಯಂಟ್ ಸಮೂಹ ಶಿಕ್ಷಣ ಸಂಸ್ಥೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಜನರಿಗೆ ಪ್ರಮುಖವಾಗಿ ಅನ್ನ, ಆರೋಗ್ಯ, ಶಿಕ್ಷಣದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಾಗ ಗ್ರಾಮೀಣ ಪ್ರದೇಶಗಳ ಮೂಲಕ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಭಾರತ ಅಭಿವೃದ್ಧಿ ಹೊಂದುತ್ತಿದೆಯೆಂಬುದೇ ಸಮಾಧಾನಕರ



ದೊಡ್ಡತುಪ್ಪೂರು ಗ್ರಾಮದಲ್ಲಿ ರೇಡಿಯಂಟ್ ಸಮೂಹ ಶಿಕ್ಷಣ ಸಂಸ್ಥೆಯನ್ನು ಗಣ್ಯರು ಮಠಾಧಿಪತಿಗಳು ಉದ್ಘಾಟಿಸಿದರು

ಎಲ್ಲಾ ರಾಷ್ಟ್ರಗಳಲ್ಲೂ ಒಂದೊಂದು ವಿಚಾರದಲ್ಲಿ ಪ್ರಾಧಾನ್ಯತೆ ನೀಡಲಾಗುತ್ತಿದೆ. ಅದರಂತೆ ನಮ್ಮ ದೇಶದಲ್ಲಿ ವಿದ್ಯೆ ಮತ್ತು ತ್ಯಾಗಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಲಾಗುತ್ತಿದೆ ಎಂದು ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದರು. ಆಡಳಿತ ಮಂಡಳಿ ಹಾಗೂ ಮಾಲೀಕರು ಶಿಕ್ಷಣ ಸಂಸ್ಥೆ ಪ್ರಾರಂಭಿಸಬಹುದು. ಆದರೆ, ಶಿಕ್ಷಣ ಸಂಸ್ಥೆ ಅಭಿವೃದ್ಧಿ ಹೊಂದಲು ಸಂಸ್ಥೆಯಲ್ಲಿನ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿರುತ್ತದೆ ಇದರಲ್ಲಿ ಶಿಕ್ಷಣ ಸಂಸ್ಥೆ ಪ್ರಾರಂಭಿಸಲು ಹಲವು ಸವಾಲುಗಳು ಎದುರಾಗುತ್ತವೆ. ಅವುಗಳನ್ನು ಸಮರ್ಥವಾಗಿ ಎದುರಿಸಿ ಸಂಸ್ಥೆ ಪ್ರಾರಂಭಿಸಿ, ಬೆಳಸಲು ತಾಳ್ಮೆ ಹಾಗೂ ಸಂಕಲ್ಪ ಶಕ್ತಿ ಅಗತ್ಯವಾಗಿರುತ್ತದೆ ಎಂದರು.

ತುಮಕೂರು ಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಭಾರತೀಯ ಸಂಸ್ಕೃತಿಗಳಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಶ್ರೀಮಂತಿಕೆಗಿಂತ ವಿದ್ಯೆ ಪಡೆದ ವ್ಯಕ್ತಿಗೆ ಹೆಚ್ಚು ಗೌರವ ದೊರೆಯುತ್ತದೆ. ಶಿಕ್ಷಣದಿಂದಲೇ ಅಭಿವೃದ್ಧಿ ಸಾಧ್ಯವಾಗುತ್ತದೆ. ಹೀಗಾಗಿ ಎಲ್ಲರೂ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಜ್ಞಾನಕ್ಕಿಂತ ಮಿಗಿಲಾದ ಸಂಪತ್ತು ಮತ್ತೊಂದು ಇಲ್ಲ. ಹೀಗಾಗಿ ಮನುಷ್ಯನಿಗೆ ಜ್ಞಾನ ಬಹಳ ಮುಖ್ಯ ಯಾವ ಮನುಷ್ಯ ಹೆಚ್ಚು ಜ್ಞಾನ ಸಂಪತ್ತು ಪಡೆಯುತ್ತಾನೋ ಆತ ಎಲ್ಲರ ಗೌರವಕ್ಕೆ ಪಾತ್ರನಾಗುತ್ತಾನೆ ಎಂದರು.

ಜ್ಞಾನ ಎನ್ನುವುದು ಶಾಲೆಯಲ್ಲಿ ಕಲಿಯುವುದು, ಪುಸ್ತಕಗಳನ್ನು ಓದಿದಾಗ ಬರುವುದಿಲ್ಲ. ಕಲಿತಿದ್ದನ್ನು ಹಾಗೂ ಓದಿದ್ದನ್ನು ಯಾರೂ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾನೋ ಆತ ಮಾತ್ರ ಜ್ಞಾನದ ಸಂಪತ್ತು ಪಡೆಯಲು ಸಾಧ್ಯವಾಗಿದೆ. ಹೀಗಾಗಿ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂದರು.

ರೇಡಿಯಂಟ್ ಸಮೂಹ ಸಂಸ್ಥೆ ಛೇರ್ಮನ್ ಜಿ.ನಿಜಗುಣ ರಾಜು ಪ್ರಾಸ್ತಾವಿಕವಾಗಿ ಮಾತನಾಡಿ, ಬೆಂಗಳೂರು, ಮಂಗಳೂರಿನಲ್ಲಿ ಇರುವಂತೆ ಸಿಇಟಿ, ನೀಟ್, ಕೆಸೆಟ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ನೀಡಲಾಗುತ್ತಿದೆ. ಚಾ.ನಗರ, ಗುಂಡ್ಲುಪೇಟೆ ಸೇರಿದಂತೆ ಜಿಲ್ಲೆಯ ಜನರು ಸಂಸ್ಥೆಯ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕನಕಗಿರಿ ಮಠದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಶಾಸಕರಾದ ಎಚ್.ಎಂ. ಗಣೇಶಪ್ರಸಾದ್, ಶ್ರೀವತ್ಸ, ಎಚ್.ಕೆ. ಸುರೇಶ್, ಬೆಳ್ಳಿಪ್ರಕಾಶ್, ಮಾಜಿ ಶಾಸಕರಾದ ಸಿ.ಎಸ್.ನಿರಂಜನ ಕುಮಾರ್, ಎನ್. ಮಹೇಶ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಡಾ. ಪಿ. ಸೋಮಶೇಖರ್, ಸಂಸ್ಥೆಯ ಟ್ರಸ್ಟಿ ಮಂಜುಳಾ ನಿಜಗುಣರಾಜು, ಕಾರ್ಯದರ್ಶಿ ಡಿ. ಶ್ವೇತಾ ಮತ್ತಿತರರು ಇದ್ದರು.

ಇದಕ್ಕೂ ಮೊದಲು ಹಿಂದೂಸ್ತಾನಿ ಗಾಯಕಿ ಸಂಗೀತಾ ಕಟ್ಟಿ ತಂಡದಿಂದ ಗಾಯನ ಕಾರ್ಯಕ್ರಮ ನಡೆಯಿತು.

ಮಂಜುನಾಥ್ ಪ್ರಸಾದ್ ನೇಮಕ

ಬೇಗೂರು: ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ನಿಟ್ರೆ ಗ್ರಾಮದ ಎನ್.ಎಸ್ ಮಂಜುನಾಥ್ ಪ್ರಸಾದ್ ನೇಮಕಗೊಂಡಿದ್ದಾರೆ. ಸಚಿವ ಮಧು ಬಂಗಾರಪ್ಪ ಅನುಮೋದನೆಯೊಂದಿಗೆ ಜಿಲ್ಲಾಧ್ಯಕ್ಷ ಚೇತನ್ ಕುಮಾರ್.ಆರ್ ನೇಮಿಸಿ ಆದೇಶ ಹೊರಡಿಸಿದ್ದಾರೆ.



ಕೆ.ಆರ್.ಮದನ್ ಕುಮಾರ್

ಬೇಗೂರು: ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಕೆ.ಆರ್.ಮದನ್ ಕುಮಾರ್ (ಕೆಬ್ಬೆಪುರ ಮಧು) ನೇಮಕಗೊಂಡಿದ್ದಾರೆ.



ಶಾಸಕ ಗಣೇಶ್‌ಪ್ರಸಾದ್ ಅವರ ಶಿಫಾರಸ್ಸಿನ ಮೇರೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಆದೇಶದ ಮೇರೆಗೆ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ಅವರ ಅನುಮೋದನೆ ಮೇರೆಗೆ ಜಿಲ್ಲಾ ಅಧ್ಯಕ್ಷ ಚೇತನ್ ಕುಮಾರ್ ನೇಮಿಸಿದ್ದಾರೆ.

ಅನುದಾನಗಳಲ್ಲಿ ಪತ್ರಕರ್ತರು ಪಾರದರ್ಶಕತೆ ಕಾಯ್ದುಕೊಳ್ಳಿ

ಕೊಳ್ಳೇಗಾಲ, ಜ.25–ತಮ್ಮ ಸಂಸ್ಥೆಗೆ ದಾನಿಗಳು ಹಾಗೂ ಸರ್ಕಾರ ನೀಡುವ ಅನುದಾನಗಳನ್ನು ಪ್ರಾಮಾಣಿಕವಾಗಿ ಬಳಕೆ ಮಾಡಿಕೊಳ್ಳುವ ಮೂಲಕ ಪತ್ರಕರ್ತರು ಪಾರದರ್ಶಕತೆ ಕಾಪಾಡಿಕೊಳ್ಳಬೇಕು, ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಕಿವಿಮಾತು ಹೇಳಿದ್ದಾರೆ.

ಪಟ್ಟಣದ ವೆಂಕಟೇಶ್ವರ ಮಹಲ್‌ನಲ್ಲಿ ಶನಿವಾರ ತಾಲೂಕು ಪತ್ರಕರ್ತರ ಸಂಘದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಯಾವುದೇ ಸುದ್ದಿ ಬರೆಯುವಾಗ ನಿಮ್ಮ ಟೀಕೆ ಆರೋಗ್ಯಕರವಾಗಿರಬೇಕು, ಪೈಪೋಟಿ ಯುಗದಲ್ಲಿ ಪತ್ರಕರ್ತರು ಹೆಚ್ಚಿನ ಅನುಭವಿಗಳಾಗಿ ಕಾರ್ಯ ನಿರ್ವಹಿಸುವಂತಾಗಬೇಕು. ಈನಿಟ್ಟಿನಲ್ಲಿ ಪತ್ರಕರ್ತರು ಹೊಣೆಗಾರಿಕೆ ಅರಿಯುವಂತಾಗಬೇಕು ಪತ್ರಕರ್ತರ ಭವನಕ್ಕೆ ಅನುದಾನ ನೀಡುವುದಾಗಿ ಆಶ್ವಾಸನೆ ನೀಡಿದರು.

ಹಿಂದೆ ಪತ್ರಕರ್ತರ ಭವನ ನಿರ್ಮಾಣಕ್ಕೆ ಹಿಂದಿನ ಶಾಸಕರಾಗಿದ್ದ ಎನ್ ಮಹೇಶ್, ಅಂದಿನ ಸಂಸದರಾಗಿದ್ದ ಶ್ರೀನಿವಾಸಪ್ರಸಾದ್ ಅವರು 10 ಲಕ್ಷ ಅನುದಾನ ನೀಡಿದ್ದು ಅಲ್ಲಿ ಕಳಪೆ ಕಾಮಗಾರಿ ನಡೆಯುತ್ತಿದ್ದುದನ್ನು ನೋಡಿ ಖಂಡಿಸಿದ್ದೆ, ಪತ್ರಿಕಾ ಭವನ ನಿರ್ಮಾಣಕ್ಕೆ, ಪತ್ರಕರ್ತರ ಸೌಲಭ್ಯಗಳಿಗಾಗಿ ಸರ್ಕಾರ ಹಾಗೂ ದಾನಿಗಳು ನೀಡುವ ಅನುದಾನವನ್ನು ಪಾರದರ್ಶಕವಾಗಿ ಲೆಕ್ಕಪತ್ರ ಮಂಡಿಸುವ ಜೊತೆಗೆ ಸಂಘದ ಖಾತೆಗೆ ಜಮಾ ಮಾಡುವ ಮೂಲಕ ಪ್ರಾಮಾಣಿಕವಾಗಿ ಬಳಕೆ ಮಾಡಿಕೊಳ್ಳಬೇಕಿದೆ ಎಂದು ಸಲಹೆ ನೀಡಿದರು.



ತಾಲೂಕು ಪತ್ರಕರ್ತರ ಸಂಘದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಶಾಸಕ ಎ ಆರ್ ಕೃಷ್ಣಮೂರ್ತಿ ಮಾತನಾಡಿದರು

ದೃಶ್ಯ ಮತ್ತು ಮುದ್ರಣ ಮಾಧ್ಯಮದ ಜೊತೆ ಅನಧಿಕೃತ ಮಾಧ್ಯಮಗಳು ಸಹಾ ತಲೆ ಎತ್ತಿದ್ದು ಪತ್ರಕರ್ತರಿಗಿಂತ ಅನಧಿಕೃತ ಪತ್ರಕರ್ತರ ಸಂಖ್ಯೆಯೂ ಹೆಚ್ಚಿದೆ. ಈ ನಿಟ್ಟಿನಲ್ಲಿ ಜವಾಬ್ದಾರಿ ಮೆರೆಯಬೇಕಾದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅಧಿಕೃತ ಪತ್ರಕರ್ತರು, ಸಂಸ್ಥೆಯನ್ನು ಗುರುತಿಸಿ, ಗುರುತಿನ ಚೀಟಿ ನೀಡುವ ಕೆಲಸ ಆಗಬೇಕಿದೆ. ಪತ್ರಕರ್ತರಾದವರಿಗೆ ಜವಾಬ್ದಾರಿ ಜೊತೆ ಕನಿಷ್ಠ ಜ್ಞಾನ ಇರಬೇಕು, ಓದು, ಬರಹ ಬಲ್ಲವರಾಗಿರಬೇಕು, ಪ್ರಬುದ್ಧತೆ ಹೊಂದಿರಬೇಕು, ಹೀಗಾದ್ದಲ್ಲಿ ಮಾತ್ರ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದರು

ಮಾಜಿ ಶಾಸಕ ಆರ್.ನರೇಂದ್ರ, ಜಿಎನ್ ನಂಜುಂಡಸ್ವಾಮಿ, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಮಾನಸ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ಸಮಾಜ ಸೇವಕ ಪ್ರದೀಪ್ ಕುಮಾರ್, ಗುತ್ತಿಗೆದಾರ ಓಲೆ ಮಹದೇವು, ಬಸವಲಿಂಗಪ್ಪ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಪ್ರೇಮಲತಾ ಕೃಷ್ಣಸ್ವಾಮಿ, ದೇವಲ ಮಹರ್ಷಿ ಪ್ರತಿಮೆ ನಿರ್ಮಾತೃ ಗಿರೀಶ್ ಬಾಬು, ತಹಸೀಲ್ದಾರ್ ಬಸವರಾಜು, ಇಓ ಗುರುಶಾಂತಪ್ಪ ಬೆಳ್ಳುಂಡಗಿ, ಬಿಇಓ ಮಂಜುಳ, ನಿವೃತ್ತ ವಿಜ್ಞಾನಿ ಧರ್ಮರಾಜು, ಪದ್ಮನಾಭ, ತಾಲೂಕು ಅಧ್ಯಕ್ಷ ಚಿಕ್ಕಮಾಳಿಗೆ, ಪ್ರಧಾನ ಕಾರ್ಯದರ್ಶಿ ಎಸ್. ನಟರಾಜು, ಜಿಲ್ಲಾ ಉಪಾಧ್ಯಕ್ಷ ಡಿ ನಟರಾಜು ಎಹೆಚ್ ಗೋವಿಂದ, ಸಾಗರ್ ನಿಂಗರಾಜ, ಮರಿಸ್ವಾಮಿ, ವಸಂತ, ಚಂದ್ರು ಇದ್ದರು.

ವಿಜೃಂಭಣೆಯ ವಿಜಯ ನಾರಾಯಣಸ್ವಾಮಿ ರಥೋತ್ಸವ



ಗುಂಡ್ಲುಪೇಟೆ, ಜ.25(ಸೋಮ್.ಜಿ)– ಪಟ್ಟಣದ ವಿಜಯ ನಾರಾಯಣಸ್ವಾಮಿ ದೇವಸ್ಥಾನದಲ್ಲಿ ರಥಸಪ್ತಮಿ ಅಂಗವಾಗಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ದಿವ್ಯರಥೋತ್ಸವ ವಿಜೃಂಭಣೆಯಿಂದ ಭಾನುವಾರ ನಡೆಯಿತು.

ದೇವಾಲಯದಲ್ಲಿ ಬೆಳಗಿನಿಂದಲೂ ವಿಶೇಷ ಪೂಜೆ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಲಾಯಿತು. ಮಧ್ಯಾಹ್ನ 12ಗಂಟೆಗೆ ಧ್ವಜಪತಾಕೆಗಳಿಂದ ಅಲಂಕೃತವಾದ ದಿವ್ಯ ರಥದಲ್ಲಿ ವಿಜಯ ನಾರಾಯಣಸ್ವಾಮಿಯವರ ಉತ್ಸವ ಮೂರ್ತಿಯನ್ನು ಕೂರಿಸಲಾಯಿತು.

ತಹಶಿಲ್ದಾರ್ ಎಂ.ಎಸ್.ತನ್ಮಯ್ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಸಾವಿರಾರು ಭಕ್ತರು ಜಯಘೋಷಗಳೊಂದಿಗೆ ರಥವನ್ನು ಎಳೆಯುವ ಮೂಲಕ ಕೃತಾರ್ಥರಾದರು. ದೇವಸ್ಥಾನ ಸುತ್ತಲೂ ಪ್ರದಕ್ಷಿಣೆ ಹಾಕಿದ ನಂತರ ರಥೋತ್ಸವ ಸಂಪನ್ನಗೊಂಡಿತು. ಶಾಸಕ ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ ಕುಮಾರ್, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಸೇರಿದಂತೆ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ಭೇಟಿ ನೀಡಿ ವಿಜಯನಾರಾಯಣ ಸ್ವಾಮಿ ದರ್ಶನ ಪಡೆದು ಪುನೀತರಾದರು.

ಮೈಸೂರು ಮಿತ್ರ

ಸೋಮವಾರ 26 ಜನವರಿ 2026

ಕಾಂಗ್ರೆಸ್ ಕಿತ್ತೊಗೆಯಿರಿ, ಜೆಡಿಎಸ್ ಅಧಿಕಾರಕ್ಕೆ ತನ್ನಿ

ದಲಿತ ಸಮುದಾಯ ಮುಖಂಡರ ಸಭೆಯಲ್ಲಿ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಕರೆ



ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ ಸಮೀಪ ಇರುವ ಫಾರಂ ಹೌಸ್‌ನಲ್ಲಿ ಕರೆಯಲಾಗಿದ್ದ ದಲಿತ ಸಮುದಾಯದ ಮುಖಂಡರುಗಳ ಸಭೆಯಲ್ಲಿ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ.

> ಕಾಂಗ್ರೆಸ್ ಪಕ್ಷದಲ್ಲಿ ನಮಗೆ ಅನ್ಯಾಯವಾಗಿದೆ. ಆದ್ದರಿಂದ ಈ ಬಾರಿ ನಾವು ಜೆಡಿಎಸ್ ಪಕ್ಷಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇವೆ. ಈ ಬಾರಿ ಕೃಷ್ಣನಾಯಕ ಅವರು ತಾಲೂಕಿನಲ್ಲಿ ಶಾಸಕರಾಗಲು ಸಂಪೂರ್ಣ ಬೆಂಬಲ ನೀಡುತ್ತೇವೆ. ನೀವು ದಲಿತ ಸಮುದಾಯಕ್ಕೆ ಗ್ರಾಪಂ, ತಾಪಂ, ಜಿಪಂ ಚುನಾವಣೆಯಲ್ಲಿ ಸ್ಪರ್ಧಿಸಲು ಆದ್ಯತೆ ನೀಡಿ ಮುಂಚೂಣಿಗೆ ತರುವ ಕೆಲಸ ಮಾಡಿ. ನಮ್ಮ ಸಮುದಾಯದ ಸಂಪೂರ್ಣ ಬೆಂಬಲ ನೀಡುತ್ತೇವೆ.
> – ದಲಿತ ಸಮುದಾಯದ ಮುಖಂಡರುಗಳು

ಹೆಚ್.ಡಿ.ಕೋಟೆ, ಜ.25– ದುರಾಡಳಿತ ನಡೆಸುತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದು ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು ದಲಿತ ಸಮುದಾಯ ಕೈಜೋಡಿಸಬೇಕು ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣ ನಾಯಕ ಮನವಿ ಮಾಡಿದ್ದಾರೆ.

ತಾಲೂಕಿನ ಮಾದಾಪುರ ಸಮೀಪ ಇರುವ ಫಾರಂ ಹೌಸ್‌ನಲ್ಲಿ ಕರೆಯಲಾಗಿದ್ದ ದಲಿತ ಸಮುದಾಯದ ಮುಖಂಡರುಗಳ ಸಭೆಯಲ್ಲಿ ಮಾತನಾಡಿದ ಅವರು ಕಾಂಗ್ರೆಸ್ ಪಕ್ಷದ ದುರಾಡಳಿತದಿಂದ ದಲಿತ ಸಮುದಾಯಕ್ಕೆ ಭಾರೀ ಅನ್ಯಾಯವಾಗಿದೆ ಹಾಗೂ ಸಾಮಾನ್ಯ ಜನರಿಗೂ ಅನ್ಯಾಯವಾಗುತ್ತಿದ್ದು, ಜನರು ಬೇಸತ್ತು ಹೋಗಿದ್ದಾರೆ. ಮುಂದಿನ ದಿನಗಳಲ್ಲಿ ದಲಿತ ಸಮುದಾಯ ಒಗ್ಗೂಡಿ ಜೆಡಿಎಸ್ ಭದ್ರಕೋಟೆಯಾಗಿರುವ ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ಈ ಬಾರಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತಂದು, ಹೆಚ್.ಡಿ.ಕುಮಾರಸ್ವಾಮಿ ಅವರ ಕೈ ಬಲಗೊಳಿಬೇಕು ಎಂದರು.

ಮುಂಬರುವ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಹೆಚ್ಚು ದಲಿತ ಸಮುದಾಯಕ್ಕೆ ಅನುಕೂಲ ಮಾಡಿಕೊಡಲು ಸಮುದಾಯದಲ್ಲಿ ಅನ್ಯಾಯಕ್ಕೊಳಗಾಗಿರುವವರನ್ನು ಗುರುತಿಸಿ ಸ್ಥಾನಮಾನ ಕೊಡುವ ಸಂಪೂರ್ಣ ಜವಾಬ್ದಾರಿಯನ್ನ ನಾನು ಬರಿಸುತ್ತೇನೆ ಎಂದು ಘಂಟಾಘೋಷವಾಗಿ ಸಭೆಯಲ್ಲಿ ತಿಳಿಸಿದರು.

ತಾಲೂಕಿನಲ್ಲಿ ಸಾಕಷ್ಟು ಅವ್ಯವಹಾರಗಳು ನಡೆಯುತ್ತಿವೆ, ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತಿವೆ. ಆದರೆ, ಶಾಸಕ ಅನಿಲ್ ಚಿಕ್ಕಮಾದು ಅವರು ಯಾವುದೇ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ. ಇಂಥ ಶಾಸಕರು ನಮ್ಮ ಕ್ಷೇತ್ರಕ್ಕೆ ಬೇಕಾ ಎಂದು ಪ್ರಶ್ನಿಸಿದರು.

ಇದೇ ಸಂದರ್ಭದಲ್ಲಿ ಕೆ.ಎಂ.ಕೃಷ್ಣ ನಾಯಕ ಅವರನ್ನು ದಲಿತ ಸಮುದಾಯದ ವತಿಯಿಂದ ಸನ್ಮಾನಿಸಿ, ಬಳಿಕ ಮಾತನಾಡಿದ ಮುಖಂಡರುಗಳು, ಹತ್ತು ವರ್ಷಗಳಿಂದ ಕೃಷ್ಣನಾಯಕ ತಾಲೂಕಿನಲ್ಲಿ ಜನಸೇವೆ ಮಾಡಿಕೊಂಡು ಬರುತ್ತಿದ್ದಾರೆ. ಕೋವಿಡ್ ಸಮಯದಲ್ಲಿ ಆಹಾರ ಕಿಟ್ ವಿತರಣೆ, ಸರ್ಕಾರಿ ಆಸ್ಪತ್ರೆಗೆ ಔಷಧಿಗಳು, ಶಾಲಾ ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಪ್ಪಾಜಿ ಕ್ಯಾಂಟೀನ್ ತೆರೆದು ಹತ್ತು ರೂಪಾಯಿ ಉಪಹಾರ ನೀಡಿ ಇನ್ನು ಹತ್ತು ಹಲವಾರು ಜನ ಸೇವಾ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ನಮ್ಮ ಸಮುದಾಯದವರು ಈ ಬಾರಿ ಬೆಂಬಲ ನೀಡಿ ಅವರನ್ನು ಹೆಚ್.ಡಿಕೋಟೆ ಕ್ಷೇತ್ರದಲ್ಲಿ ಶಾಸಕರಾಗಿ ಮಾಡಲು ಮುಂದಾಗುತ್ತೇವೆ ಎಂದು ಪಣ ತೊಟ್ಟರು.

ಸಭೆಯಲ್ಲಿ ಜೆಡಿಎಸ್ ಪಕ್ಷದ ಸರಗೂರು ತಾಲೂಕು ಅಧ್ಯಕ್ಷ ಗೋಪಾಲಸ್ವಾಮಿ, ಎಸ್.ಸಿ ಘಟಕ ಅಧ್ಯಕ್ಷ ಡಿ. ನಾಗರಾಜು, ಮುಖಂಡರಾದ ಎಂ.ಡಿ.ಮಂಚಯ್ಯ, ಸೋಮಣ್ಣ ನಾಗರಾಜು, ಶಿವನಂಜು, ಮಾದೇವಯ್ಯ, ಚಲುವರಾಜು, ಶಿವಶಂಕರ, ಮಲ್ಲಿಕಾರ್ಜುನ, ಮರುಲಿಂಗಯ್ಯ, ತೋಪಯ್ಯ, ರವಿ, ಸುರೇಶ್, ಚಂದು, ರಾಜು, ಮಲ್ಲೇಶ್, ಚನ್ನಣ್ಣ, ಉಮೇಶ, ಮಹೇಂದ್ರ, ಅರುಣ್, ನಾಗರಾಜು, ಶಿವಣ್ಣ, ಈಶ್ವರ್, ಜಯಣ್ಣ, ಶ್ಯಾಮಸುಂದರ್, ತೇಜು, ಡಾ:ರಾಮರಾಜು, ಕುಮಾರ್, ದೇವರಾಜು, ಶೇಖರ್, ಶ್ರೀನಿವಾಸ್, ಪುಟ್ಟರಾಜು, ಶಿವರಾಜು, ರಾಜೇಂದ್ರ ರಾಜಮೂರ್ತಿ, ಮಲ್ಲೇಶ್, ಪದ್ಮರಾಜು, ಶ್ರೀಧರ್, ಲಿಂಗರಾಜು, ನಟೇಶ್, ನಾರಯಣ್, ರವಿಕುಮಾರ್, ಮೆಂಕಟೇಶ್, ನಂಜುಂಡರಾಜು, ರವಿ, ರಾಜಣ್ಣ ಚಂದ್ರು ಇ.ಮಾದಯ್ಯ, ಚಲುವರಾಜು, ರಾಮರಾಜು, ಸಣ್ಣಪ್ಪ, ಕೃಷ್ಣಯ್ಯ, ವೈ.ಬಿ.ಕೇಶವಮೂರ್ತಿ, ಮಹೇಂದ್ರ, ಈಶ್ವರ, ದೇವಪ್ಪ, ಕರಿಸ್ವಾಮಿ, ಶಿವಶಂಕರ್, ಉಮೇಶ್, ಕಾಳಸ್ವಾಮಿ, ಕೃಷ್ಣಯ್ಯ, ವೆಂಕಟಸ್ವಾಮಿ, ಚನ್ನ, ಇನ್ನು ಮುಂತಾದವರು ಹಾಜರಿದ್ದರು.

ಮೀನಾಕ್ಷಿ ಸಮೇತ ಶ್ರೀ ಅರ್ಕೇಶ್ವರ ಸ್ವಾಮಿಯ ವೈಭವದ ಬ್ರಹ್ಮ ರಥೋತ್ಸವ



ಮೀನಾಕ್ಷಿ ಸಮೇತ ಶ್ರೀ ಅರ್ಕೇಶ್ವರ ಸ್ವಾಮಿ ಬ್ರಹ್ಮರಥೋತ್ಸವವು ನಡೆಯಿತು.

ಕೆ.ಆರ್.ನಗರ: ಹಳೆ ಎಡತೊರೆಯ ಕಾವೇರಿ ನದಿ ದಡದಲ್ಲಿರುವ ಇತಿಹಾಸ ಪ್ರಸಿದ್ಧ ಮೀನಾಕ್ಷಿ ಸಮೇತ ಶ್ರೀ ಅರ್ಕೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವವು ದೇವಾಲಯದ ಆವರಣದಲ್ಲಿ ಬಹಳ ವಿಜೃಂಭಣೆಯಿಂದ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ಬೆಳಗ್ಗೆ 11.10ಕ್ಕೆ ದೇವಾಲಯದ ಪ್ರಾಂಗಣದಿಂದ ಉತ್ಸವ ಮೂರ್ತಿಗಳನ್ನು ಮಂಗಳ ವಾದ್ಯ ಸಮೇತ ಮೆರವಣಿಗೆಯಲ್ಲಿ ಕರೆತಂದು ಪ್ರತಿಷ್ಠಾಪನೆ ಮಾಡಿ ಮಹಾಮಂಗಳಾರತಿ ನೆರವೇರಿಸಲಾಯಿತು. ಬಳಿಕ 11.10 ರಿಂದ 12ರವರೆಗೆ ಸಲ್ಲುವ ಅಭಿಜಿನ್ ಲಗ್ನದಲ್ಲಿ ರಥೋತ್ಸವಕ್ಕೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ, ತಹಶೀಲ್ದಾರ್ ಜಿ.ಸುರೇಂದ್ರಮೂರ್ತಿ ಸೇರಿದಂತೆ ನೆರೆದಿದ್ದ ಸಾವಿರಾರು ಭಕ್ತರು ದೇವರಿಗೆ ಜಯಘೋಷಗಳನ್ನು ಮೊಳಗಿಸಿ ಭಕ್ತಿಯ ಪರಾಕಾಷ್ಠೆಯನ್ನು ಮೆರೆದು ದೇವಾಲಯದ ಸುತ್ತ ರಥವನ್ನು ಒಂದು ಸುತ್ತು ಎಳೆದರು. ರಥಸಪ್ತಮಿಯಂದು ನಡೆದ ರಥೋತ್ಸವ ಮತ್ತು ಜಾತ್ರೆಗೆ ಕೆ.ಆರ್.ನಗರ ಪಟ್ಟಣ ಸೇರಿದಂತೆ ಸುತ್ತಮುತ್ತಲ ಹತ್ತಾರು ಗ್ರಾಮಗಳ ಜನರು ಆಗಮಿಸಿ ಕಾವೇರಿ ನದಿಯಲ್ಲಿ ಮಿಂದು ಸರತಿ ಸಾಲಿನಲ್ಲಿ ನಿಂತು ತಮ್ಮ ಇಷ್ಟಾರ್ಥ ದೈವ ಮೀನಾಕ್ಷಿ ಸಮೇತ ಅರ್ಕೇಶ್ವರಸ್ವಾಮಿ ದರ್ಶನ ಪಡೆದು ನಂತರ ರಥಕ್ಕೆ ಹಣ್ಣು ಜವನ ಎಸೆದು ಹರಕೆ ತೀರಿಸಿದರು.

ದೇವಾಲಯದ ಸುತ್ತಮುತ್ತ ಮತ್ತು ಸಂಪರ್ಕ ರಸ್ತೆಯಲ್ಲಿ ಸಿಹಿತಿಂಡಿ, ವಿವಿಧ ಆಟಿಕೆ, ಮನರಂಜನಾ ಆಟಗಳ ಅಂಗಡಿಗಳು ತಲೆ ಎತ್ತಿದ್ದವು.

ಕೆರೆ ಕಟ್ಟೆ ತುಂಬಿಸಿ ಅಂತರ್ಜಲ ವೃದ್ಧಿಗೆ ಕ್ರಮ

ಹರಂಬಳ್ಳಿಯಲ್ಲಿ ಅಂಬೇಡ್ಕರ್ ಭವನಕ್ಕೆ ಗುದ್ದಲಿ ಪೂಜೆ



ಹರಂಬಳ್ಳಿ ಗ್ರಾಮದಲ್ಲಿ 25 ಲಕ್ಷ ವೆಚ್ಚದ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಶಾಸಕ.ಡಿ.ರವಿಶಂಕರ್ ಗುದ್ದಲಿ ಪೂಜೆ ನೆರವೇರಿಸಿದರು.

ಭೇರ್ಯ, ಜ.25– ಹರಂಬಳ್ಳಿ ಗ್ರಾಮ ಸೇರಿದಂತೆ ಅಕ್ಕಪಕ್ಕದ ಗ್ರಾಮಗಳಿಗೆ ಏತ ನೀರಾವರಿ ಯೋಜನೆಯಡಿ ಮೂಲಕ ಕೆರೆ ಕಟ್ಟಡಗಳನ್ನು ತುಂಬಿಸುವ ಮೂಲಕ ಅಂತರ್ಜಲ ವೃದ್ಧಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಕೆಆರ್.ನಗರ ತಾಲೂಕಿನ ಹರುಬಳ್ಳಿ ಗ್ರಾಮದಲ್ಲಿ 25 ಲಕ್ಷ ವೆಚ್ಚದ ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕೆರೆಕಟ್ಟೆಗಳು ತುಂಬಿದರೆ ಮಾತ್ರ ಕೃಷಿ ಪಂಪ್‌ಸೆಟ್‌ಗಳಲ್ಲಿ ಅಂತರ್ಜಲ ವೃದ್ಧಿಯಾಗಿ ನೀರು ಬರುತ್ತದೆ. ಆದ್ದರಿಂದ ಈ ಭಾಗದಲ್ಲಿ ನೀರಾವರಿ ಪ್ರದೇಶ ಇಲ್ಲದಿರುವುದನ್ನು ಮನಗಂಡು ಕಾವೇರಿ ನದಿಯಿಂದ ಏತ ನೀರಾವರಿ ಯೋಜನೆ ಕೈಗೊಳ್ಳಲಾಗಿದೆ ಎಂದರು.

ಹರಂಬಳ್ಳಿ ಮತ್ತು ಜೈನ್ನಹಳ್ಳಿ ಗ್ರಾಮದ ಸಂಪರ್ಕ ರಸ್ತೆಗೆ ಈಗಾಲೇ 3 ಕೋಟಿ ವೆಚ್ಚದಲ್ಲಿ ಡಿಪಿಆರ್ ಸಿದ್ದವಾಗಿದ್ದು ಮುಂದಿನ ದಿನಗಳಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದ ಶಾಸಕರು, ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಬೇಕೆಂದು ಮನವಿ ಹಿನ್ನೆಲೆಯಲ್ಲಿ ಈಗಾಗಲೇ 10 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಸಾರ್ವಜನಿಕರಿಗೆ ಉಪಯೋಗವಾಗುತ್ತಿದೆ ಎಂದರು.

ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಕನಸಿನ ಕೂಸು ಶಿಕ್ಷಣ, ಆದ್ದರಿಂದ ನಿಮ್ಮೂರಿನಲ್ಲಿ ಡಿಜಿಟಲ್ ಗ್ರಂಥಾಲಯ ತೆರೆಯಲಾಗುವುದು ವಿದ್ಯಾರ್ಥಿಗಳು ಇದರ ಸದ್ಬಳಕೆ ಮಾಡಿಕೊಂಡು ಶಿಕ್ಷಣವಂತರಾಗಿ ಅಂಬೇಡ್ಕರ್ ಕಟ್ಟಿದ ಕನಸನ್ನು ನನಸು ಮಾಡಿ ಎಂದರು.

ಗ್ರಾಪಂ ಅಧ್ಯಕ್ಷ ಮಲ್ಲಿಕಾರ್ಜುನ, ಮೈಮುಲ್ ನಿರ್ದೇಶಕಿ ಮಲ್ಲಿಕಾ ರವಿ, ಹರಂಬಳ್ಳಿ ಡೈರಿ ಅಧ್ಯಕ್ಷೆ ಇ.ಆರ್.ಕವಿತ, ಗ್ರಾ.ಪಂ ಸದಸ್ಯೆ ಮಹದೇವಮ್ಮ, ಶೇಖರ್, ಮಾಜಿ ಸದಸ್ಯ ಚೆಲುವಯ್ಯ, ತಾಲೂಕು ಕಾಂಗ್ರೆಸ್ ಎಸ್.ಸಿ.ಘಟಕದ ಅಧ್ಯಕ್ಷ ನಂದೀಶ್, ಹುಪಾಪುರ ಗ್ರಾಪಂ ಸದಸ್ಯ ಹೆಚ್‌ಡಿ.ನಾಗೇಶ್, ಮಾಜಿ ಸದಸ್ಯ ಬಸವರಾಜು, ಗುತ್ತಿಗೆದಾರ ದರ್ಶನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ರೈತ ಮುಖಂಡ ರಮೇಶ್, ದಲಿತ ಮುಖಂಡ ವೆಂಕಟೇಶ್, ಕಾಂಗ್ರೆಸ್ ಮುಖಂಡ ಹರಂಬಳ್ಳಿ ಸಂತೋಷ್, ಲಕ್ಷ್ಮಣ, ಮಂಚನಹಳ್ಳಿ ಗಜ ಮೊದಲಾದವರು ಇದ್ದರು.

ಗುಂಜಾ ನರಸಿಂಹಸ್ವಾಮಿಯ ಅದ್ದೂರಿ ರಥೋತ್ಸವ



ತಿ.ನರಸೀಪುರ ಜ.25– ಪಟ್ಟಣದ ಕಾಶಿಗಿಂತ ಗುಲಗಂಜಿ ಗಾತ್ರವೆನಿಸಿರುವ ಶ್ರೀ ಗುಂಜಾ ನರಸಿಂಹ ಸ್ವಾಮಿ ದೇವಾಲಯದಲ್ಲಿ ರಥಸಪ್ತಮಿ ಪ್ರಯುಕ್ತ ಶ್ರೀ ಗುಂಜಾನರಸಿಂಹಸ್ವಾಮಿ ಉತ್ಸವ ಮೂರ್ತಿ ರಥೋತ್ಸವ ಅದ್ಧೂರಿಯಾಗಿ ಜರುಗಿತು.

ವಿಧಿ–ವಿಧಾನಗಳೊಂದಿಗೆ ಅಭಿಷೇಕ ಪೂಜಾ ಸಲ್ಲಿಸಿ ರಥವನ್ನು ಹೂವಿನ ಅಲಂಕಾರದೊಂದಿಗೆ ರಥ ಬೀದಿಯಲ್ಲಿ ಸಾಗಿ ಸ್ವಸ್ಥಾನಕ್ಕೆ ಕರೆತಂದರು. ಪಾರುಪತ್ತೆದಾರ್ ತಿರುಮಕೂಡಲು ಪ್ರದೀಪ್, ರಾಜಸ್ವ ನಿರೀಕ್ಷಕಮಹೇಂದ್ರ ಕುಮಾರ್, ಅರ್ಚಕರಾದ ವೆಂಕಟೇಶ್ ರಾಜಮ್ಮ ಮತ್ತು ಕುಟುಂಬ ವರ್ಗ ಶ್ರೀಪಾದ, ತಾಲೂಕು ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಎಂ.ವಿ. ಶಿವಶಂಕರ ಮೂರ್ತಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಸಿಬ್ಬಂದಿಗಳಾದ ರವಿ, ಹರೀಶ್ ಕುಮಾರ್, ರಾಘವೇಂದ್ರ, ಶಿವಣ್ಣ, ಚಂದು, ಬಂಡಿಕಾರರಾದ ಯೋಗೇಶ್ ಮುಂತಾದವರು ಪಾಲ್ಗೊಂಡಿದ್ದರು.

ಭೀಮನಕೊಲ್ಲಿ ಜಾತ್ರಾ ಮಹೋತ್ಸವ



ಹೆಚ್.ಡಿ.ಕೋಟೆ: ಭೀಮನಕೊಲ್ಲಿಯಲ್ಲಿ ಶ್ರೀ ಮಹದೇಶ್ವರ ಜಾತ್ರಾ ಮಹೋತ್ಸವ ಜ.26ರಿಂದ ಆರಂಭವಾಗಲಿದ್ದು, 3 ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ. ಜಾತ್ರಾ ಮಹೋತ್ಸವದ ಮೊದಲ ದಿನ ಜ.26ರಂದು ಬಿಡುಗಲು ಪಡವಲು ಮಠದ ಶ್ರೀ ಮಹಾದೇವಸ್ವಾಮಿ ಅವರ ದಿವ್ಯ ಸಾನಿಧ್ಯದಲ್ಲಿ ಭೀಮನಕೊಲ್ಲಿ ಶ್ರೀ ಮಹದೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮಹಾಮಂಗಳಾರತಿ ಪೂಜಾ ಕಾರ್ಯಗಳು ನೆರವೇರುವ ಮೂಲಕ 3 ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವಕ್ಕೆ ಚಾಲನೆಗೊಳ್ಳಲಿದೆ.

ಜಾತ್ರಾ ಮಹೋತ್ಸವದ 2ನೇ ದಿನ ಜ.27ರ ಮಂಗಳವಾರ ಬೆಳಿಗ್ಗೆ 9ಕ್ಕೆ ಮಹಾ ಮಂಗಳಾರತಿ ನಂತರ 10ಕ್ಕೆ ಮಹಾರಥೋತ್ಸವ ನಡೆಯಲಿದೆ, ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಶ್ರೀ ಮಹದೇಶ್ವರ ಸ್ವಾಮಿಯ ಮಹಾರಥವನ್ನು ಎಳೆಯಲಿದ್ದಾರೆ.

ಸಂಜೆ 4 ಗಂಟೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅನುದಾನದಲ್ಲಿ ದೇವಸ್ಥಾನದ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಮಹದೇಶ್ವರ ಭವನ ಉದ್ಘಾಟನಾ ಕಾರ್ಯಕ್ರಮ ಜರುಗಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಭವನ ಉದ್ಘಾಟಿಸಲಿದ್ದಾರೆ.

ಶಾಲೆಯಲ್ಲಿ ಕಲಿಕಾ ಹಬ್ಬ



ಮೈಸೂರು ತಾಲೂಕು ಜಯಪುರ ಹೋಬಳಿಯ ಹಾರೋಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಾರೋಹಳ್ಳಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ಮತ್ತು ಎಫ್‌ಎಲ್‌ಎನ್ ಕಾರ್ಯಕ್ರಮವನ್ನು ಸಮಾಜ ಸೇವಕ ಎಸ್.ಶ್ರೀಕಾಂತ್ ಉದ್ಘಾಟಿಸಿದರು. ಹಾರೋಹಳ್ಳಿ ಗ್ರಾಪಂ ಅಧ್ಯಕ್ಷ ರೇವಣ್ಣ, ಮುಖ್ಯ ಶಿಕ್ಷಕಿ ಜಯಂತಿ, ಸಿಆರ್‌ಪಿ ಸರಿತಾ, ದೈಹಿಕ ಶಿಕ್ಷಕ ಅಂತೋನಿ ಬ್ಯಾಪ್ಟಿಸ್ಟ್, ಶಿಕ್ಷಕರುಗಳು ಭಾಗವಹಿಸಿದ್ದರು.

ಜಾತ್ರೆಯಲ್ಲಿ ಸಾಮೂಹಿಕ ವಿವಾಹಕ್ಕೆ ಹೆಚ್ಚು ಮಹತ್ವ ಕೊಡಬೇಕು

ಸರಗೂರು, ಜ.25– ಹೆಚ್.ಡಿ.ಕೋಟೆ ತಾಲೂಕಿನ ದಟ್ಟಹಳ್ಳ ಗ್ರಾಮದ, ಶ್ರೀ ನೇಟಕಲ್ಲೇಶ್ವರ ಸ್ವಾಮಿ ಜಾತ್ರೆ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ಹಾಗೂ ಸರಗೂರು ಪಡುವಲು ವಿರಕ್ತ ಮಠದ ಮಹದೇವ ಸ್ವಾಮೀಜಿ, ಭಾಗವಹಿಸಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿ, ನೂತನ ದಂಪತಿಗಳಿಗೆ ಶುಭ ಹಾರೈಸಿದರು.

ನಂತರ ವೇದಿಕೆ ಕಾರ್ಯಕ್ರಮದ ಉದ್ಘಾಟನೆಯನ್ನು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಶಾಸಕರು, ಗ್ರಾಮಗಳಲ್ಲಿ ನಡೆಯುವ ದೇವರ ಜಾತ್ರೆಗಳಲ್ಲಿ ಸಾಮೂಹಿಕ ವಿವಾಹ ಮಹೋತ್ಸವ ನಡೆಸುವುದು ಉತ್ತಮ ಬೆಳವಣಿಗೆ. ಇದರಿಂದ ಸರಳ ವಿವಾಹಕ್ಕೆ ಹೆಚ್ಚು ಮಹತ್ವವನ್ನು ನೀಡಿ ದುಂದು ವೆಚ್ಚ ಮಾಡದೆ ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗಲಿದೆ ಎಂದರು.

ಈ ಗ್ರಾಮದಲ್ಲಿ ಪ್ರತಿ ವರ್ಷವೂ ಕೂಡ ಬಹಳ ಅರ್ಥಪೂರ್ಣವಾಗಿ ಜಾತ್ರೆ ಆಚರಣೆ ಮಾಡುತ್ತಿರುವುದು ಬಹಳ ಹೆಮ್ಮೆಯ ವಿಚಾರ. ಹೊಸ ಜೀವನಕ್ಕೆ ಕಾಲಿಡುತ್ತಿರುವ ನವ ದಂಪತಿಗಳಿಗೆ ದೇವರು ಆಶೀರ್ವಾದ ಮಾಡಲಿ, ದೇವಾಲಯದಲ್ಲಿ ವಿವಾಹವಾಗುವ ಭಾಗ್ಯ ಎಲ್ಲರಿಗೂ ಸಿಗುವುದಿಲ್ಲ. ಎಲ್ಲಾ ದಂಪತಿಗಳಿಗೂ ಶುಭ ಕೋರುತ್ತಾ, ನಾನು ಕಳೆದ ಬಾರಿ ದೇವಾಲಯ ಗೋಪುರಕ್ಕಾಗಿ ಅನುದಾನ ನೀಡಿದ್ದೆ. ಈ ಬಾರಿ ಭೋಜನ ಶಾಲೆಯ ಕಾಮಗಾರಿಗೆ 50 ಲಕ್ಷ ಅನುದಾನ ನೀಡಿದ್ದೇನೆ. ಎಲ್ಲರೂ ಸಹಬಾಳ್ವೆಯಿಂದ ಹಬ್ಬ ಆಚರಿಸಿ ಎಂದು ತಿಳಿಸಿದರು. ಪಡುವಲು ವಿರಕ್ತ ಮಠದ ಮಹದೇವಸ್ವಾಮೀಜಿ ಆಶೀರ್ವಚನ ನೀಡಿದರು.

ಕ್ಯಾಲೆಂಡರ್ ಬಿಡುಗಡೆ



ರಾಯಚೂರು ಸಂಸದ ಕುಮಾರ್ ನಾಯಕ್ ಅವರ ನಿವಾಸದಲ್ಲಿ ಕುಮಾರ್ ನಾಯಕ್ ಅಭಿಮಾನಿ ಬಳಗವು ಹೊರ ತಂದಿರುವ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ಸಂಸದ ಕುಮಾರ್ ನಾಯಕ್ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಅಭಿಮಾನಿ ಬಳಗದ ಅಧ್ಯಕ್ಷ ಹರೀಶ್ ಹಳೇಬೀಡು, ತಿ.ನರಸೀಪುರ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ಬಿಜೆಪಿ ಮುಖಂಡ ಗುರುದತ್ತ, ಮಂಜು ನಾಯಕ, ಚಿಕ್ಕಣ್ಣ, ಮಂಜುನಾಥ, ಮಳಲಿ. ನಾಯಕ ನೌಕರರ ಸಂಘದ ಅಧ್ಯಕ್ಷ ಪಿಡಿಓ ಮಾದೇವ ನಾಯಕ, ಕಾರ್ಯದರ್ಶಿ ಮಂಜುನಾಥ, ಯಳಂದೂರು. ಚಲನಚಿತ್ರ ನಿರ್ದೇಶಕ ರಘು, ಮತ್ತು ಸತೀಶ್, ಸೋಮಣ್ಣ ಅಗ್ರಹಾರ ಮಹೇಶ್, ಜಯರಾಮ್, ಶೇಖರ್, ನಾಗೇಶ್ ಉಪಸ್ಥಿತರಿದ್ದರು.

ನಂದಿನಿ ಮಿಲ್ಕ್ ಪಾರ್ಲರ್ ಉದ್ಘಾಟನೆ



ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜ.25– ನಂದಿನಿ ಹಾಲು ಮತ್ತು ನಂದಿನಿ ಉತ್ಪನ್ನಗಳು ನೈಜ ರುಚಿ ಹಾಗೂ ಪರಿಶುದ್ಧತೆಯಿಂದ ಕೂಡಿದ್ದು ಸಾರ್ವಜನಿಕರು ನಂದಿನಿ ಉತ್ಪನ್ನಗಳನ್ನೇ ಬಳಸುವ ಮೂಲಕ ರೈತರ ಸಂಸ್ಥೆಯಾದ ಮೈಮುಲ್ ಸಂಸ್ಥೆ ಬೆಳವಣಿಗೆಗೆ ಸಹಕಾರಿಯಾಗಬೇಕು ಎಂದು ಮೈಮೂಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ಕರೆ ನೀಡಿದರು.

ತಾಲೂಕಿನ ಸೋಮನಾಥಪುರ ಗ್ರಾಮದಲ್ಲಿ ನೂತನವಾಗಿ ತೆರೆಯಲಾಗಿರುವ ನಂದಿನಿ ಮಿಲ್ಕ್ ಪಾರ್ಲರ್ ಉದ್ಘಾಟಿಸಿ ಅವರು ಮಾತನಾಡಿದರು. ನಂದಿನಿ ಉತ್ಪನ್ನಗಳು ರಾಜ್ಯದ ಸಾವಿರಾರು ರೈತರ ಹಾಗೂ ಬಡ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸುವ ಆಸ್ತಿಯಾಗಿದ್ದು, ಉತ್ತಮ ಗುಣಮಟ್ಟದಿಂದ ತಯಾರಾಗುವ ನಂದಿನಿ ಉತ್ಪನ್ನಗಳನ್ನು ಎಲ್ಲರೂ ಖರೀದಿಸುವ ಮೂಲಕ ಮೈಮುಲ್ ಅನ್ನು ಮತ್ತಷ್ಟು ಬೆಳೆಸಲು ಸಹಕರಿಸಬೇಕು ಎಂದರು.

ಮಿಲ್ಕ್ ಪಾರ್ಲರ್ ತೆರೆಯಲು 12 ರಿಂದ 13 ಲಕ್ಷ ರೂ.ಗಳನ್ನು ಒಕ್ಕೂಟದ ವತಿಯಿಂದ ಸಹಾಯಧನ ನೀಡಲು ಅವಕಾಶವಿದೆ. ಪಾರ್ಲರ್ ನಡೆಸುವವರು 1 ಲಕ್ಷ ರೂ.ಗಳ ಠೇವಣಿ ಮಾಡಿದರೆ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತದೆ ಎಂದರು.

ಮೈಮೂಲ್ ನಿಂದ ತಯಾರಾಗುವ ನಂದಿನಿ ಉತ್ಪನ್ನಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದು, ಹಸುವಿನ ಬೆಣ್ಣೆಯಿಂದ ಮಾಡಲಾದ ತುಪ್ಪದಿಂದಲೇ ತಯಾರಿಸಲಾಗುವುದರಿಂದ ಹೆಚ್ಚು ರುಚಿಕರ ಹಾಗು ಪರಿಶುದ್ಧವಾಗಿರುತ್ತದೆ.

ಈ ವೇಳೆ ಸೋಮನಾಥಪುರ ಗಣೇಶ್, ಜಿಲ್ಲಾ ಜಾಗೃತಿಯ ವೇದಿಕೆ ಜಿಲ್ಲಾಧ್ಯಕ್ಷ ಕೆ.ಎನ್. ಪ್ರಭುಸ್ವಾಮಿ, ತಾ.ಪಂ. ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ರಾಮನಂಜಯ್ಯ, ಮುಖಂಡರಾದ ಹೊಯ್ಸಳ, ಅನಿಲ್ ಕುಮಾರ್, ಇಂದಿರಾ, ರಜಿನಿ, ಮಿಥುನ್ ಮತ್ತಿತರರು ಇದ್ದರು.

ಎಸ್‌ಎಂಎಸ್ ಕುಟುಂಬ ಯಾವತ್ತೂ ಭ್ರಷ್ಟ ರಾಜಕಾರಣಕ್ಕೆ ಕೈ ಹಾಕಿಲ್ಲ

ಪುರಸಭಾ ಮಾಜಿ ಸದಸ್ಯ ಪಿ.ಎಂ.ರಾಜು ಸ್ಪಷ್ಟನೆ

ಪಿರಿಯಾಪಟ್ಟಣ: ತಾಲೂಕಿನಲ್ಲಿ ಎಸ್‌ಎಂಎಸ್ ಕುಟುಂಬ ಯಾವತ್ತಿಗೂ ಭ್ರಷ್ಟ ರಾಜಕಾರಣಕ್ಕೆ ಕೈ ಹಾಕಿ ದೌರ್ಜನ್ಯ ಮಾಡಿಲ್ಲ. ಹಣಕ್ಕಾಗಿ ಅಧಿಕಾರ ಬಯಸಿಲ್ಲ. ಆದರೆ ತಾಲೂಕಿನ ಮಾಜಿ ಶಾಸಕ ಕೆ.ಮಹದೇವ್ ನಮ್ಮ ಎಸ್‌ಎಂಎಸ್ ಕುಟುಂಬದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದು ನಿಜಕ್ಕೂ ಖಂಡನೀಯ ಎಂದು ಪಟ್ಟಣದ ಪುರಸಭೆಯ ಮಾಜಿ ಸದಸ್ಯ ಪಿ.ಎಂ .ರಾಜು ಆಕ್ರೋಶ ವ್ಯಕ್ತಪಡಿಸಿದರು

ಪಟ್ಟಣದ ಪತ್ರಕರ್ತರ ಸಂಘದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮಾಜಿ ಶಾಸಕ ಕೆ ಮಹದೇವ್ ತಾಲೂಕಿನ ಬೆಳತೂರು ಗ್ರಾಮದಲ್ಲಿ ತಮ್ಮ ಕಾರ್ಯಕರ್ತ ಸಭೆಯಲ್ಲಿ ನಮ್ಮ ಎಸ್‌ಎಂಎಸ್ ಕುಟುಂಬದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದು ಅವರ ರಾಜಕೀಯ ದುರ್ನಡತೆಗೆ ಸಾಕ್ಷಿಯಾಗಿದೆ ಪಿರಿಯ ಪಟ್ಟಣದ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಈ ಹಿಂದೆ 40 ವರ್ಷಗಳ ಕಾಲ ನಮ್ಮ ಕುಟುಂಬದ ಹಿರಿಯರಾದ ಹಾಗೂ ಮೊದಲ ಪುರಸಭಾ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡ ಮಲ್ಲಿಕಾರ್ಜುನಯ್ಯ ಸೇರಿದಂತೆ ಕೆ.ಎಂ. ಮಲ್ಲಪ್ಪ.ಪಿ.ವಿ.ಶಿವಪ್ಪ ರವರುಗಳಿಗೆ ಪಟ್ಟಣದ ಜನತೆ ಆಶೀರ್ವಾದ ಮಾಡಿ ಅಧಿಕಾರ ನೀಡಿದ್ದರು ಎಂದರು.

ಇನ್ನು ಮುಂದೆಯಾದರೂ ಮಾಜಿ ಶಾಸಕರು ನಮ್ಮ ಕುಟುಂಬದ ವಿರುದ್ಧ ಎಲ್ಲಿಯೂ ಅಪಪ್ರಚಾರ ಮಾಡಬಾರದು ಇನ್ನೇನಾದರೂ ಆ ರೀತಿ ಮಾತನಾಡಿದ್ದಲ್ಲಿ ನಮ್ಮ ಎಸ್‌ಎಂಎಸ್ ಕುಟುಂಬದ ವತಿಯಿಂದ ಅವರ ವಿರುದ್ಧ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಎಸ್‌ಎಂಎಸ್ ಕುಟುಂಬದ ನಂಜುಂಡಪ್ಪ ಪಿ.ಎಂ.ವಸಂತ ಕುಮಾರ್, ಮಲ್ಲಿಕಾರ್ಜುನ್, ವರದರಾಜ್, ಪಿ.ಎಂ.ಕುಮಾರ್, ಪಿ.ಎಸ್.ಸುನಿಲ್ ಪಿ.ಎಸ್.ಶಿವಕುಮಾರ್. ಪಿ.ಎಂ.ಕುಮಾರ್, ರಾಜೇಶ್, ಗಿರೀಶ್ ಉಪಸ್ಥಿತರಿದ್ದರು.

ರಥಸಪ್ತಮಿ ಅಂಗವಾಗಿ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಮುಂದೆ ಸೂರ್ಯ ನಮಸ್ಕಾರ



ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿ ಯೋಗಪಟುಗಳು ಸಾಮೂಹಿಕ ಸೂರ್ಯ ನಮಸ್ಕಾರ ಪ್ರದರ್ಶನ ಮಾಡಿದರು.

ನಂಜನಗೂಡು: ನಗರದ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ರಥಸಪ್ತಮಿ ಪ್ರಯುಕ್ತ ಭಾನುವಾರ ಬೆಳಿಗ್ಗೆ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿ ಯೋಗಪಟುಗಳು ಸಾಮೂಹಿಕ ಸೂರ್ಯ ನಮಸ್ಕಾರ ಪ್ರದರ್ಶನ ಮಾಡಿದರು.

ಬೆಳಗ್ಗೆ 5ರ ಸಮಯದಲ್ಲಿ ದೇವಾಲಯದ ಮುಂಭಾಗದಲ್ಲಿ ಸಂಘಟಿತರಾದ 300ಕ್ಕೂ ಹೆಚ್ಚು ಸಮವಸ್ತ್ರಧಾರಿ ಯೋಗಪಟುಗಳು ಅಷ್ಟೋತ್ತರ ಶತನಾಮಾವಳಿಯೊಂದಿಗೆ ಮೂರು ಹಂತದಲ್ಲಿ 108 ಬಾರಿ ಸೂರ್ಯ ನಮಸ್ಕಾರದ ಆಸನಗಳನ್ನು ಪ್ರದರ್ಶಿಸುವ ಮೂಲಕ ಸೂರ್ಯ ದೇವನಿಗೆ ನಮನ ಸಲ್ಲಿಸಿದರು.

ಬಳಿಕ ಯೋಗ ಸಮಿತಿಯ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಉಡಿಗಾಲ ಮಾತನಾಡಿ, ಸೂರ್ಯದೇವ ಋತುಮಾನಕ್ಕೆ ತಕ್ಕಂತೆ ತನ್ನ ಪಥ ಬದಲಾಯಿಸುವ ದಿನವನ್ನು ಸ್ವಾಗತಿಸುವ ಈ ವಿಶೇಷ ದಿನದಂದು ಸೂರ್ಯ ನಮಸ್ಕಾರ ಮಾಡುವುದರಿಂದ ನಮ್ಮ ದೇಹ, ಮನಸ್ಸು ಕ್ರಿಯಾಶೀಲತೆಯಿಂದ ಕೂಡಿರುತ್ತದೆ. ಇನ್ನು ಯೋಗ ಮಾಡುವುದು ದೇಹದಂಡನೆಗಾಗಿ ಅಲ್ಲ ಬದಲಾಗಿ ಯೋಗದ ಮೂಲಕ ಮನಸ್ಸಿನ ನಿಯಂತ್ರಣ ಹೊಂದುವುದು ಅವಶ್ಯಕವಾಗಿದ್ದು ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಅತ್ಯವಶ್ಯಕವಾಗಿದೆ ವಿಶೇಷವಾಗಿ ನಿತ್ಯ ಸೂರ್ಯ ನಮಸ್ಕಾರ ಮಾಡುವ ಸಂಕಲ್ಪವನ್ನು ಎಲ್ಲರೂ ಕೈಗೊಳ್ಳಬೇಕು ಎಂದು ಹೇಳಿದರು.

ಯೋಗ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಎನ್.ಆರ್.ಗಣೇಶ್‌ಮೂರ್ತಿ ಮಾತನಾಡಿ, ಕಳೆದ 18 ವರ್ಷಗಳಿಂದ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಮೂಲಕ ಸಾಮೂಹಿಕ ಸೂರ್ಯ ನಮಸ್ಕಾರವನ್ನು ಆಯೋಜಿಸಲಾಗುತ್ತಿದೆ ಯೋಗದ ಮೂಲಕ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಸಾಧ್ಯ ಎಂದು ತಿಳಿಸಿದರು.

ಸಾಮೂಹಿಕ ಸೂರ್ಯ ನಮಸ್ಕಾರದಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ನಂಜನಗೂಡು ಘಟಕದ ಅಧ್ಯಕ್ಷ ಆರ್.ವಿ. ರೇವಣ್ಣ, ನಂಜನಗೂಡು ಯೋಗ ಫೌಂಡೇಶನ್ ಗೌರವಾಧ್ಯಕ್ಷ ಹಂಡುವಿನಹಳ್ಳಿ ರಾಜು, ಪ್ರಧಾನ ಕಾರ್ಯದರ್ಶಿ ಪ್ರತಾಪ್ ಕೋಡಿನರಸೀಪುರ ಭಾಗವಹಿಸಿದ್ದರು.

ಮೈಸೂರು ಮಿತ್ರ

ಸೋಮವಾರ 26 ಜನವರಿ 2026

ಮೈಸೂರು ಅರಮನೆ ಆವರಣದಲ್ಲಿ ರಥಸಪ್ತಮಿ ಆಚರಣೆ

ಅರಮನೆ ಆವರಣದಲ್ಲಿ ಎಲ್ಲಾ ದೇವರುಗಳ ಮೆರವಣಿಗೆ



ಮೈಸೂರು ಅರಮನೆ ಆವರಣದಲ್ಲಿ ರಥಸಪ್ತಮಿ ಅಂಗವಾಗಿ ಭಾನುವಾರ ವಿವಿಧ ದೇವಾಲಯಗಳಿಂದ ಉತ್ಸವಮೂರ್ತಿಯನ್ನು ಚಿಕ್ಕ ರಥದಲ್ಲಿಟ್ಟು ಭಕ್ತರ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು.

ಮೈಸೂರು,ಜ.25(ಎಂಟಿವೈ)– ರಥಸಪ್ತಮಿ ಅಂಗವಾಗಿ ಮೈಸೂರು ಅರಮನೆ ಆವರಣದಲ್ಲಿ ನಡೆದ ವಿವಿಧ ದೇವರ ರಥೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸುವ ಮೂಲಕ ಸೂರ್ಯ ದೇವನ ಕೃಪೆಗೆ ಪಾತ್ರರಾದರು.

ಪ್ರತಿ ವರ್ಷ ರಥಸಪ್ತಮಿ ದಿನದಂದು ಮೈಸೂರು ಅರಮನೆ ಆವರಣದಲ್ಲಿರುವ ವಿವಿಧ ದೇವಾಲಯಗಳಿಂದ ಉತ್ಸವ ಮೂರ್ತಿಯನ್ನು ಚಿಕ್ಕ ರಥದಲ್ಲಿ ಪ್ರತಿಷ್ಠಾಪಿಸಿ, ಅರಮನೆ ಮುಂಭಾಗದ ಅಂಗಳಕ್ಕೆ ತಂದು ಸಾಲಾಗಿ ನಿಲ್ಲಿಸಿ, ಸಾರ್ವಜನಿಕರ ದರ್ಶನಕ್ಕೆ ಅವಕಾಶ ನೀಡುವ ಪದ್ಧತಿ ನಡೆದುಕೊಂಡು ಬಂದಿದ್ದು, ಇಂದು ನಡೆದ ರಥೋತ್ಸವದಲ್ಲಿ ಅರಮನೆ ಆವರಣದ 8 ದೇವಾಲಯಗಳಿಂದ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ತಂದು ಪೂಜೆ ಸಲ್ಲಿಸಲಾಯಿತು.

ಭಾನುವಾರ ಬೆಳಗ್ಗೆ 7 ಗಂಟೆಗೆ ದೇವಾಲಯಗಳಿಂದ ಉತ್ಸವ ಮೂರ್ತಿಯನ್ನು ಮಂಗಳವಾದ್ಯದೊಂದಿಗೆ ಸಕಲ ಬಿರುದಿನೊಂದಿಗೆ ಅರಮನೆ ಆವರಣಕ್ಕೆ ಉತ್ಸವ ಮೂರ್ತಿಗಳನ್ನು ತಂದು ಸಾಲಾಗಿ ನಿಲ್ಲಿಸಲಾಯಿತು. ನಂತರ ಮಧ್ಯಾಹ್ನ 12 ಗಂಟೆವರೆಗೂ ಭಕ್ತರು, ಸಾರ್ವಜನಿಕರು ಹಾಗೂ ಪ್ರವಾಸಿಗರು ರಥಸಪ್ತಮಿಯ ರಥೋತ್ಸವದಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದು ಪುನೀತರಾದರು.

ರಾಜರ ಆಳ್ವಿಕೆಯ ಕಾಲದಿಂದಲೂ ಅರಮನೆ ಆವರಣದಲ್ಲಿರುವ ರಥ ಸಪ್ತಮಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸುವ ಪರಿಪಾಠವಿದ್ದು, ಆ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಲಾಗುತ್ತಿದೆ. ಇಂದು ಬೆಳಗ್ಗೆ ಶ್ರೀ ಗಾಯತ್ರಿ ದೇವಿ, ಶ್ರೀ ತ್ರಿನೇಶ್ವರಸ್ವಾಮಿ, ಶ್ರೀ ಭುವನೇಶ್ವರಿ, ಶ್ರೀ ಲಕ್ಷ್ಮಿರಮಣಸ್ವಾಮಿ, ಶ್ರೀ ಖಿಲ್ಲೆ ವೆಂಕಟೇಶ್ವರ ಸ್ವಾಮಿ, ಶ್ರೀ ಶ್ವೇತವರಹಾ ಸ್ವಾಮಿ, ಶ್ರೀ ಪ್ರಸನ್ನ ಕೃಷ್ಣ ಹಾಗೂ ಶ್ರೀ ಪೆರಂದೇವಿ ಅಮ್ಮನವರ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ ನಡೆಸಿ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಹಾಗೂ ಅವರ ಪುತ್ರರಾದ ಆದ್ಯವೀರ್ ನರಸಿಂಹರಾಜ ಒಡೆಯರ್, ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್ ಅರಮನೆ ಮುಂಭಾಗಕ್ಕೆ ಬಂದು ರಥ ಸಪ್ತಮಿಯ ರಥೋತ್ಸವದ ದರ್ಶನ ಪಡೆದರು.

ಮೈಸೂರಿನ ಅಗ್ರಹಾರ, ದೇವರಾಜ ಮೊಹಲ್ಲಾ, ಇಟ್ಟಿಗೆಗೂಡು, ಕೃಷ್ಣಮೂರ್ತಿಪುರಂ,ನಜ್ಜರ್‌ಬಾದ್, ಕನಕಗಿರಿ, ಸುಣ್ಣದಕೇರಿ, ವಿದ್ಯಾರಣ್ಯಪುರಂ, ಎನ್.ಆರ್.ಮೊಹಲ್ಲಾ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ಎಲ್ಲಾ ದೇವರ ದರ್ಶನ ಪಡೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಅಲ್ಲದೆ, ಕೆಲವರು ಸಿಹಿ ತಿನಿಸು ತಂದು ಭಕ್ತರಿಗೆ ಹಂಚುತ್ತಿದ್ದ ದೃಶ್ಯ ಕಂಡು ಬಂದಿತು.

ಪಥ ಬದಲಿಸುವ ಸೂರ್ಯದೇವ

ರಥಸಪ್ತಮಿ ದಿನವಾದ ಇಂದಿನಿಂದ ಸೂರ್ಯದೇವ ತನ್ನ ಪಥ ಬದಲಾಯಿಸುತ್ತಾನೆ ಎಂಬ ನಂಬಿಕೆ ಇದೆ. ರಥಸಪ್ತಮಿಗೆ ವಿಶೇಷವಾದ ಮಹತ್ವವಿದೆ. ಏಳು ಕುದುರೆಯುಳ್ಳ ರಥದಲ್ಲಿ ಸೂರ್ಯದೇವ ಉತ್ತರ ದಿಕ್ಕಿಗೆ ಪ್ರಯಾಣ ಬೆಳೆಸಲಿದ್ದು, ಇಂದಿನಿಂದ ಸೂರ್ಯನ ಕಿರಣ ನೆತ್ತಿಯ ಮೇಲೆ ಬೀಳಲಿದೆ. ಹೆಚ್ಚಿನ ಉಷ್ಣತೆ ಹೆಚ್ಚಾಗಲಿದೆ. ಶಿವರಾತ್ರಿ ಹಬ್ಬದ ನಂತರ ಚಳಿ ಕಡಿಮೆಯಾಗಿ ಬೇಸಿಗೆ ಕಾಲ ಆರಂಭವಾಗಲಿದೆ. ಈ ಹಿನ್ನೆಲೆಯಲ್ಲಿ ರಥಸಪ್ತಮಿಗೆ ವಿಶೇಷವಾದ ಮಹತ್ವ ನೀಡಲಾಗುತ್ತದೆ.

ಮೈಸೂರು ಅರಮನೆ ಮುಂದೆ ಸಾಮೂಹಿಕ ಸೂರ್ಯ ನಮಸ್ಕಾರ



ರಥಸಪ್ತಮಿ ಅಂಗವಾಗಿ ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮೈಸೂರು ಯೋಗ ಒಕ್ಕೂಟ ಆಯೋಜಿಸಿದ್ದ ಸಾಮೂಹಿಕ ಸೂರ್ಯ ನಮಸ್ಕಾರದಲ್ಲಿ ಪಾಲ್ಗೊಂಡಿರುವ ಯೋಗ ಪಟುಗಳು.

ಮೈಸೂರು,ಜ.25(ಎಂಟಿವೈ)– ರಥ ಸಪ್ತಮಿಯ ಅಂಗವಾಗಿ ಮೈಸೂರು ಅರಮನೆಯ ಉತ್ತರ ದ್ವಾರದ ಕೋಟೆ ಆಂಜನೆಯಸ್ವಾಮಿ ದೇವಾಲಯ ಮುಂಭಾಗ ಭಾನುವಾರ ಬೆಳಗ್ಗೆ ಮೈಸೂರು ಯೋಗ ಒಕ್ಕೂಟ ಆಯೋಜಿಸಿದ್ದ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ನೂರಾರು ಯೋಗಪಟುಗಳು ಪಾಲ್ಗೊಂಡು ನೂರೆಂಟು ಸೂರ್ಯ ನಮಸ್ಕಾರ ಮಾಡುವ ಮೂಲಕ ಗಮನ ಸೆಳೆದರು.

ಮೈಸೂರು ಯೋಗ ಒಕ್ಕೂಟದ 25ನೇ ವಾರ್ಷಿಕೋತ್ಸವ ಹಾಗೂ ರಥ ಸಪ್ತಮಿಯ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ವಿವಿಧ ಯೋಗ ಶಾಲೆಗಳ ನೂರಾರು ಮಂದಿ ಯೋಗಪಟುಗಳು ಮುಂಜಾನೆ 5.30ಕ್ಕೆ ಅರಮನೆಯ ಆವರಣಕ್ಕೆ ಆಗಮಿಸಿ ಸೂರ್ಯ ನಮಸ್ಕಾರ ಮಾಡುವುದಕ್ಕೆ ಯೋಗ ಮ್ಯಾಟ್ ಹಾಸಿಕೊಂಡು ಸಿದ್ಧತೆ ಮಾಡಿಕೊಂಡರು.

ಈ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಮೈಸೂರಿಗೆ ಯೋಗನಗರಿ ಎಂಬ ಬಿರುದು ಸಿಕ್ಕಿದೆ. ರಾಜಮಹಾರಾಜರ ಕಾಲದಿಂದಲೂ ಮೈಸೂರಲ್ಲಿ ಯೋಗಕ್ಕೆ ಮಹತ್ವ ಸಿಕ್ಕಿದೆ. ದೇಶ– ವಿದೇಶಗಳ ನೂರಾರು ಮಂದಿ ಯೋಗ ಕಲಿಯಲು ಮೈಸೂರಿಗೆ ಬರುತ್ತಿದ್ದಾರೆ. ಪಾಶ್ಚಿಮಾತ್ಯ ರಾಷ್ಟ್ರಗಳು ಯೋಗದ ಮಹತ್ವವನ್ನು ಅರ್ಥ ಮಾಡಿಕೊಂಡಿವೆ. ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯಾವುದೇ ವೆಚ್ಚ ಇಲ್ಲದೇ ಮಾಡಬಹುದಾದ ಚಿಕಿತ್ಸೆ ವಿಧಾನವೇ ಯೋಗ, ಧ್ಯಾನ ಮತ್ತು ಪ್ರಾಣಾಯಾಮವಾಗಿದೆ. ಒತ್ತಡ ನಿವಾರಣೆಗೂ ಯೋಗಾಭ್ಯಾಸ ಸಹಕಾರಿಯಾಗಲಿದೆ ಎಂದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಎ.ಎಸ್.ಚಂದ್ರಶೇಖರ್ ಮಾತನಾಡಿ, ಮೈಸೂರು ಯೋಗ ಒಕ್ಕೂಟದ ರಜತ ಮಹೋತ್ಸವದ ಮೊದಲ ಕಾರ್ಯಕ್ರಮ ಇದಾಗಿದೆ. ವರ್ಷವಿಡಿ ಸರಣಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಅಲ್ಲದೆ, ಇದುವರೆಗೆ ಆಗಿರುವ ಪ್ರಗತಿಯನ್ನು ಅವಲೋಕಿಸಲಾಗುವುದು ಎಂದರು.

ಮುಖ್ಯ ಅತಿಥಿಯಾಗಿದ್ದ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಮಾತನಾಡಿ, ನಾವು ನೇರವಾಗಿ ನೋಡಬಹುದಾದ ಏಕೈಕ ದೇವರೆಂದರೆ ಸೂರ್ಯ. ಆತನಿಗೆ ನಮಿಸುವುದು ಎಂದರೇ ದೇಹದ ಎಲ್ಲಾ ಅಂಗಾಂಗಗಳಿಗೂ ಕಸರತ್ತು ಮಾಡಿದಂತೆ ಆಗುತ್ತದೆ ಎಂದರು.

ಉದ್ಯಮಿ ಎ.ಪಿ. ನಾಗೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜು ಪ್ರಾಸ್ತಾವಿಕ ಭಾಷಣ ಮಾಡಿದ, ಕಳೆದ 35 ವರ್ಷಗಳಿಂದಲೂ ರಥಸಪ್ತಮಿ ಅಂಗವಾಗಿ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದೇವೆ. ಆದರೆ ಒಕ್ಕೂಟ ನೋಂದಣಿಯಾದ ಬಳಿಕ ನಡೆಸಿದ ಕಾರ್ಯಕ್ರಮಕ್ಕೆ 25 ವರ್ಷ ಸಂದಿದೆ ಎಂದು ತಿಳಿಸಿದರು.

ಗೌರವಾಧ್ಯಕ್ಷ ಟಿ. ಜಲೇಂದ್ರಕುಮಾರ್ ಕಾರ್ಯಕ್ರಮ ನಿರೂಪಿಸಿ, ಒಕ್ಕೂಟ ನಡೆದು ಬಂದ ದಾರಿಯ ಬಗ್ಗೆ ಮಾಹಿತಿ ನೀಡಿದರು. ಪ್ರಧಾನ ಕಾರ್ಯದರ್ಶಿ ಯೋಗಕುಮಾರ್ ಸ್ವಾಗತಿಸಿದರು. ಕಾರ್ಯಾಧ್ಯಕ್ಷರಾದ ಬಿ.ಪಿ. ಮೂರ್ತಿ, ಶಾಂತಾರಾಮ್, ಎಂ.ಎಸ್. ಶಿವಪ್ರಕಾಶ್, ಉಪಾಧ್ಯಕ್ಷರಾದ ಎಂ.ಎಸ್. ರಮೇಶ್ ಕುಮಾರ್, ಆಶಾದೇವಿ ಇದ್ದರು.

ಉದ್ಬೂರಲ್ಲಿ ಭಕ್ತಿಭಾವದ ರಾಮೋತ್ಸವ ಆಚರಣೆ



ಚಾಮುಂಡೇಶ್ವರಿ ಕ್ಷೇತ್ರದ ಉದ್ಬೂರಿನಲ್ಲಿ ಶ್ರೀ ರಾಮೋತ್ಸವ ಜರುಗಿತು.

ಮೈಸೂರು, ಜ.25–ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಉದ್ಬೂರು ಗ್ರಾಮದಲ್ಲಿ ಭಾನುವಾರ ಬಿಜೆಪಿ ಕಾರ್ಯಕರ್ತರು ಭಕ್ತಿಭಾವ–ಸಂಭ್ರಮದೊಂದಿಗೆ ಶ್ರೀರಾಮೋತ್ಸವ ಆಚರಿಸಿದರು.

ಗ್ರಾಮದಲ್ಲಿ ರಾಮನಾಮ ಘೋಷಣೆ, ಭಜನೆ, ಪೂಜೆಯೊಂದಿಗೆ ಶ್ರದ್ಧಾಭಕ್ತಿಯಿಂದ ಜರುಗಿದ ರಥೋತ್ಸವಕ್ಕೆ ಬಿಜೆಪಿ ಮಂಡಲದ ಅಧ್ಯಕ್ಷ ಪೈಲ್ವಾನ್ ಟಿ.ರವಿ ಲಕ್ಷೀಪುರ, ರಾಜ್ಯ ಪ್ರಕೋಷ್ಠಗಳ ಸಂಯೋಜಕ ಎನ್.ವಿ.ಫಣೀಶ್ ಮತ್ತು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ನಿಗಮದ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಚಾಲನೆ ನೀಡಿ, ಶ್ರೀರಾಮನು ಧಾರ್ಮಿಕ ಸಂಕೇತ ಮಾತ್ರವಲ್ಲದೆ ಭಾರತೀಯ ಸಂಸ್ಕೃತಿ, ಮೌಲ್ಯ ಮತ್ತು ಜೀವನದ ಆದರ್ಶಗಳ ಪ್ರತೀಕ ಎಂದು ಬಣ್ಣಿಸಿದರು.

ಶ್ರೀರಾಮೋತ್ಸವದಲ್ಲಿ ಕ್ಷೇತ್ರದ ಎಸ್.ಟಿ. ಮೋರ್ಚಾ ಅಧ್ಯಕ್ಷ ಉಮೇಶ್, ನಗರ ಮಂಡಲ ಅಧ್ಯಕ್ಷ ರಾಕೇಶ್ ಭಟ್, ದಾರಿಪುರ ಡಿ.ಚಂದ್ರಶೇಖರ್, ಗುರೂರು ಶಿವಕುಮಾರ್, ಯಡಹಳ್ಳಿ ಷಣ್ಮುಖ, ನಂದೀಶ್, ದಂಡನಾಯಕ ಕೆಂಪ, ನಾಡನಹಳ್ಳಿ ಸುರೇಶ್, ಹಂಚ್ಯಾ ರವಿ, ತ್ಯಾಗರಾಜ್, ಶಿವು ಪಟೇಲ್ ಸೇರಿದಂತೆ ಅನೇಕ ಬಿಜೆಪಿ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಚಳಿಯ ತೀವ್ರತೆ ನಡುವೆ ದಕ್ಷಿಣದ ಹಲವೆಡೆ ಹಗುರ ಮಳೆ ಸಾಧ್ಯತೆ


ಬೆಂಗಳೂರು: ರಾಜ್ಯದ ಹಲವೆಡೆ ಚಳಿಯ ತೀವ್ರತೆ ಹೆಚ್ಚಾಗಿದ್ದು, ದಕ್ಷಿಣ ಕರ್ನಾಟಕದ ಹಲವೆಡೆ ಮಳೆಯಾಗುವ ಮುನ್ಸೂಚನೆ ಲಭ್ಯವಾಗಿದೆ.

ಸೋಮವಾರ ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಮೈಸೂರು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಹಗುರದಿಂದ ಕೂಡಿದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉಳಿದಂತೆ ಬಳ್ಳಾರಿ, ಬೆಂಗಳೂರು ನಗರ–ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ರಾಮನಗರ, ತುಮಕೂರು ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಜ.31ರವರೆಗೂ ಒಣಹವೆ ಮುಂದುವರೆಯಲಿದೆ.

ಬೆಂಗಳೂರಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದೆ. ಬೆಳಗ್ಗೆ ಮಂಜು ಕವಿದ ವಾತಾವರಣ ಹಾಗೂ ತೀವ್ರ ಚಳಿ ಇರಲಿದೆ. ಕನಿಷ್ಠ 18 ಡಿಗ್ರಿ ಸೆಲ್ಸಿಯಸ್ ಹಾಗೂ ಗರಿಷ್ಠ 26 ಡಿಗ್ರಿ ಸೆಲ್ಸಿಯಸ್ ವಾತಾವರಣ ಇರಲಿದೆ. ರಾಜ್ಯದ ಒಳನಾಡಲ್ಲಿ ಕನಿಷ್ಠ ತಾಪಮಾನ ಮತ್ತಷ್ಟು ಕುಸಿಯಲಿದ್ದು, ದಕ್ಷಿಣ ಕರ್ನಾಟಕದಲ್ಲಿ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಲಿದೆ. ಆದರೆ ಒಟ್ಟಾರೆ ರಾಜ್ಯದ ಹವಾಮಾನದಲ್ಲಿ ಹೆಚ್ಚಿನ ಬದಲಾವಣೆ ಇಲ್ಲ ಎಂದು ಹವಾಮಾನ ಇಲಾಖೆ ತಿಳಿಸಿದೆ

ಡಾ.ಅಮ್ಮಸಂದ್ರ ಸುರೇಶ್‌ರ 'ಮನೆ ಮನೆಗಳ ಹಣತೆ ಡಾ.ಬಿ. ಆರ್.ಅಂಬೇಡ್ಕರ್', 'ಮಾನವತೆಯ ಮಂತ್ರ' ಕೃತಿ ಬಿಡುಗಡೆ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾಂಗಣದಲ್ಲಿ ಡಾ.ಅಮ್ಮಸಂದ್ರ ಸುರೇಶ್ ಅವರ 'ಮನೆ ಮನೆಗಳ ಹಣತೆ ಡಾ.ಬಿ. ಆರ್.ಅಂಬೇಡ್ಕರ್' ಮತ್ತು 'ಮಾನವತೆಯ ಮಂತ್ರ' ಕೃತಿಗಳನ್ನು ಹಿರಿಯ ಜಾನಪದ ವಿದ್ವಾಂಸ ಡಾ.ರಾಗೌ ಬಿಡುಗಡೆಗೊಳಿಸಿದರು.

ಮೈಸೂರು, ಜ.25(ಜಿಎ)–ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಕುವೆಂಪು ಅವರು ಹೊಸ ಕಾಲಕ್ಕೆ ತಕ್ಕಂತೆ ಪರಿವರ್ತಿಸಿದ್ದಲ್ಲದೆ, ಅದಕ್ಕೆ ಹೊಸ ಪರಿಭಾಷೆಯನ್ನು ಬರೆದರು ಎಂದು ಹಿರಿಯ ಜಾನಪದ ವಿದ್ವಾಂಸ ಡಾ.ರಾಗೌ ಅಭಿಪ್ರಾಯಪಟ್ಟರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾಂಗಣದಲ್ಲಿ ನೆರಳು ಚಾರಿಟಬಲ್ ಟ್ರಸ್ಟ್‌ನ ವಾರ್ಷಿಕೋತ್ಸವದ ಪ್ರಯುಕ್ತ ಏರ್ಪಡಿಸಲಾಗಿದ್ದ ಕುವೆಂಪು ನೆನಪು ಕಾರ್ಯಕ್ರಮದಲ್ಲಿ ಡಾ. ಅಮ್ಮಸಂದ್ರ ಸುರೇಶ್ ಅವರ 'ಮನೆ ಮನೆಗಳ ಹಣತೆ ಡಾ.ಬಿ. ಆರ್.ಅಂಬೇಡ್ಕರ್' ಮತ್ತು 'ಮಾನವತೆಯ ಮಂತ್ರ' ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

20ನೇ ಶತಮಾನವನ್ನು ಕುವೆಂಪು ಅವರು ಇಲ್ಲದೆ ನೆನಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಅವರು ಶತಮಾನದ ಕವಿಯಾಗಿದ್ದಾರೆ. ಬಸವಣ್ಣನವರ ನಂತರ ಬಂದ ಮಹಾನ್ ದಾರ್ಶನಿಕರಾದ ಕುವೆಂಪು ಹೇಗೆ ಬದುಕಿದರೋ ಹಾಗೆಯೇ ಬರೆದರು. ಸ್ವಾಭಿಮಾನಿ ಸಂಸ್ಕೃತಿಯ ಪ್ರತೀಕವಾಗಿದ್ದ ಅವರು ಕನ್ನಡಕ್ಕೆ ದೊರೆತದ್ದು ಭುವನದ ಭಾಗ್ಯ ಎಂದು ಅವರು, ಕುವೆಂಪು ಅವರ ಜಯಂತಿಯನ್ನು ಆಚರಿಸುತ್ತಿರುವವರೆಲ್ಲರಿಗೂ ಕುವೆಂಪು ಅವರ ಸಾಹಿತ್ಯ ಜಾಗೃತಿಯನ್ನು ಉಂಟು ಮಾಡಿದೆ ಎಂದು ನನಗೆ ಅನಿಸುವುದಿಲ್ಲ ಎಂದು ಹೇಳಿದರು.

ನೆರಳು ಇ–ನಿಯತಕಾಲಿಕೆಯನ್ನು ಬಿಡುಗಡೆ ಮಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಇತ್ತೀಚೆಗೆ ಇ–ನಿಯತಕಾಲಿಕೆಗಳು ಪ್ರಬುದ್ಧ ಮಾನಕ್ಕೆ ಬರುತ್ತಿದ್ದು ಹೆಚ್ಚು ಜನರನ್ನು ಸುಲಭವಾಗಿ ತಲುಪುತ್ತಿವೆ. ಈ ನಿಟ್ಟಿನಲ್ಲಿ ನೆರಳು ಇ–ನಿಯತಕಾಲಿಕೆಗೆ ಯಶಸ್ಸು ಸಿಗಲಿ ಎಂದು ಹಾರೈಸಿ, ಹೆಚ್.ಡಿ. ಕೋಟೆ ತಾಲೂಕಿನ ನಾಗರಹೊಳೆ ಅಭಯಾರಣ್ಯದಲ್ಲಿ ವಾಸಿಸುತ್ತಿರುವ ಆದಿವಾಸಿಗಳು ಮತ್ತು ಅವರ ಮಕ್ಕಳ ಶಿಕ್ಷಣದ ಅಭಿವೃದ್ಧಿಗಾಗಿ ನೆರಳು ಚಾರಿಟಬಲ್ ಟ್ರಸ್ಟ್ ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ ಎಂದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಪ್ರೊ. ಚಿನ್ನಸ್ವಾಮಿ ಸೋಸಲೆ ಕೃತಿಗಳ ಕುರಿತು ಮಾತನಾಡಿ, 80 ವರ್ಷದ ಪ್ರಜಾಪ್ರಭುತ್ವ ಭಾರತದಲ್ಲಿ ವೇದಗಳನ್ನು ಕೇಳಿ ಆಚರಿಸಿದಷ್ಟು ಜನರು ವೇದನೆಗಳನ್ನು ನಿರ್ಮೂಲನೆ ಮಾಡುವುದಕ್ಕೋಸ್ಕರವೇ ಜಾರಿಗೆ ಬಂದಿರುವ ಸಂವಿಧಾನವನ್ನು ಓದಿ ಅರ್ಥೈಸಿಕೊಂಡಿಲ್ಲ. ಪುರಾಣದ ಚರಿತ್ರೆಗೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ವಾಸ್ತವದ ಚರಿತ್ರೆಗೆ ಕೊಡಲೇ ಇಲ್ಲ. ವಾಸ್ತವದ ದಾಖಲೆಗಳ ಮೂಲಕ ಭಾರತದ ಚರಿತ್ರೆಯನ್ನು ಅನಾವರಣಗೊಳಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಆಯುರ್ವೇದ ವೈದ್ಯ ಡಾ.ಎ ಎಸ್ ಚಂದ್ರಶೇಖರ್, ನೆರಳು ಚಾರಿಟಬಲ್ ಟ್ರಸ್ಟ್ ಗೌರವಾಧ್ಯಕ್ಷ ಎನ್.ಗಂಗಾಧರಪ್ಪ, ಕೃತಿಗಳ ಲೇಖಕರಾದ ಡಾ.ಅಮ್ಮಸಂದ್ರ ಸುರೇಶ್, ಟ್ರಸ್ಟಿನ ಉಪಾಧ್ಯಕ್ಷ ಮಹಿಮಾ ಶ್ರೀನಿವಾಸ್, ಟ್ರಸ್ಟ್‌ನ ಗೌರವ ಅಧ್ಯಕ್ಷ ಮೋಹನ್, ಕಾರ್ಯದರ್ಶಿ ಪುರುಷೋತ್ತಮ, ಖಜಾಂಚಿ ಕುಮಾರ್ ಉಪಸ್ಥಿತರಿದ್ದರು.

ಕೇರ್ಗಳ್ಳಿಯಲ್ಲಿ ಇಂದಿನಿಂದ ಗ್ರಾಮ ದೇವತೆ ಹಬ್ಬ

ಮೈಸೂರು, ಜ. 25– ಮೈಸೂರು ನಗರಕ್ಕೆ ಹೊಂದಿಕೊಂಡಂತಿರುವ ಕೇರ್ಗಳ್ಳಿಯಲ್ಲಿ ನಾಳೆ (ಸೋಮವಾರ)ಯಿಂದ ಎರಡು ದಿನಗಳ ಕಾಲ ಗ್ರಾಮ ದೇವತೆ ಮಾರಮ್ಮನವರ ಹಬ್ಬ ಅತ್ಯಂತ ವಿಜೃಂಭಣೆಯಿಂದ ನಡೆಯಲಿದೆ ಎಂದು ಕೇರ್ಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಬಸವೇಗೌಡ ತಿಳಿಸಿದ್ದಾರೆ. ಕಳೆದೊಂದು ವಾರದಿಂದ ಮಾಂಸದೂಟ ಸೇರಿದಂತೆ ಯಾವುದೇ ರೀತಿಯ ನಿಷಿದ್ಧ ಆಹಾರ ಪದಾರ್ಥಗಳನ್ನು ಮಾಡದೆ ಇಡೀ ಊರಿಗೆ ಊರನ್ನೇ ಸ್ವಚ್ಛಗೊಳಿಸಿ ಹಬ್ಬವನ್ನು ಆಚರಿಸಲು ಸಿದ್ಧತೆ ನಡೆಸಲಾಗಿದೆ. ಜೊತೆಗೆ ಇಡೀ ಊರನ್ನು ಬಣ್ಣಬಣ್ಣದ ದೀಪಗಳಿಂದ ಅಲಂಕರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಸೋಮವಾರ ಮಾರಮ್ಮನಿಗೆ ತಂಪು ಪೂಜೆ ನಡೆಯಲಿದೆ. ಹರಕೆ ಹೊತ್ತವರು ಹಸಕ್ಕಿ ತಂಬಿಟ್ಟು, ಮಡಿಯಾಗಿ ಸಿದ್ಧಪಡಿಸಿ ತಂದು ದೇವರಿಗೆ ತಂಪು ಕೊಡುವುದರೊಂದಿಗೆ ಹಣ್ಣು–ಕಾಯಿ ಪೂಜೆ ನೆರವೇರಿಸುವರು. ಮಂಗಳವಾರ ಖಾರದ ಅಡುಗೆಯನ್ನು ಮಾಡುವುದರೊಂದಿಗೆ ಹಬ್ಬದ ಸಂಭ್ರಮ ಮುಗಿಯಲಿದೆ.

1.80 ಲಕ್ಷ ರೂ. ಮೌಲ್ಯದ ಕಬ್ಬಿಣ ಸಾಮಗ್ರಿ ಕಳ್ಳತನ

ಮೈಸೂರು,ಜ.25(ಪಿಎಂ)– ಕಬ್ಬಿಣ ಸಾಮಾಗ್ರಿ ಕಳ್ಳತನ ಮಾಡಿರುವ ಸಂಬಂಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ಚಿಕ್ಕಳ್ಳಿ ಗ್ರಾಮದ ಮೈಸೂರು ಹೆರಿಟೇಜ್ ಸೆಂಟರ್ ಅಂಡ್ ಟೂರಿಸಂ ಇನ್‌ಸ್ಟ್ಯೂಟ್‌ನಲ್ಲಿ ಈ ಕಳ್ಳತನ ನಡೆದಿದೆ. ಸಂಸ್ಥೆಯ ಕಟ್ಟಡದಲ್ಲಿದ್ದ ಸುಮಾರು 4.115 ಟನ್ ಕಬ್ಬಿಣ ಸಾಮಗ್ರಿಗಳು, ಕಬ್ಬಿಣದ ಕಿಟಕಿಗಳು ಹಾಗೂ 3 ಅಲ್ಮೇರಾಗಳು ಸೇರಿದಂತೆ ಸುಮಾರು 1 ಲಕ್ಷ 80 ಸಾವಿರ ರೂ. ಮೌಲ್ಯದ ಕಬ್ಬಿಣದ ಸಾಮಗ್ರಿಗಳನ್ನು ಜ.4 ಮತ್ತು ಜ.5ರ ನಡುವೆ ಕಳ್ಳತನ ಮಾಡಲಾಗಿದೆ ಎಂದು ಇನ್‌ಸ್ಟ್ಯೂಟ್‌ನ ಯೋಜನಾ ನಿರ್ದೇಶಕ ಡಾ.ಮಧುಕರ್ ಅಪ್ಪಾಜಿ ಜ.23ರಂದು ನೀಡಿದ ದೂರಿನನ್ವಯ ಎಫ್‌ಐಆರ್ ಮಾಡಲಾಗಿದೆ.

ಕೊಡವ ಸಮಾಜ ಸಾಂಸ್ಕೃತಿಕ–ಕ್ರೀಡಾ ಕ್ಲಬ್‌ನ ಕ್ರಿಕೆಟ್ ಪಂದ್ಯಾವಳಿ

ಶ್ರೀ ಇಗ್ಗುತಪ್ಪ ಕ್ಷೇಮಾಭಿವೃದ್ಧಿ ಸಂಘ ಹೆಬ್ಬಾಳ ಎ ತಂಡ ಚಾಂಪಿಯನ್



ಕ್ರಿಕೆಟ್ ಪಂದ್ಯಾವಳಿಯಲ್ಲಿ ಶ್ರೀ ಇಗ್ಗುತಪ್ಪ ಕ್ಷೇಮಾಭಿವೃದ್ಧಿ ಸಂಘ ಹೆಬ್ಬಾಳ ಎ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮೈಸೂರು, ಜ.25(ಪಿಎಂ)– ಮೈಸೂರಿನ ಕೊಡವ ಸಮಾಜ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಲಬ್ ವತಿಯಿಂದ ಇತ್ತೀಚೆಗೆ ಹಮ್ಮಿಕೊಂಡಿದ್ದ ವಾರ್ಷಿಕ ಅಂತರ ಸಂಘ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯ ಫೈನಲ್‌ನಲ್ಲಿ ಜಯಶಾಲಿಯಾದ ಶ್ರೀ ಇಗ್ಗುತಪ್ಪ ಕ್ಷೇಮಾಭಿವೃದ್ಧಿ ಸಂಘ ಹೆಬ್ಬಾಳ ಎ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿತು.

ಮೈಸೂರಿನ ಮಾನಸ ಗಂಗೋತ್ರಿಯ ಮೈದಾನದಲ್ಲಿ ಕನ್ನಂಬೀರ ಗಿರೀಶ್ ಕುಶಾಲಪ್ಪ ಅವರ ಸ್ಮರಣಾರ್ಥ ಆಯೋಜಿಸಿದ್ದ ಪಂದ್ಯಾವಳಿಯಲ್ಲಿ ವಿವಿಧ ಭಾಗಗಳ 18 ತಂಡಗಳು ಭಾಗವಹಿಸಿದ್ದವು. ಅತ್ಯಂತ ಕಠಿಣ ಹೋರಾಟದಲ್ಲಿ ಶ್ರೀ ಇಗ್ಗುತಪ್ಪ ಕ್ಷೇಮಾಭಿವೃದ್ಧಿ ಸಂಘ ಹೆಬ್ಬಾಳ ಎ ತಂಡವು ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ (ಮೈಸೂರು ಪೂರ್ವ) ತಂಡವನ್ನು ಫೈನಲ್‌ನಲ್ಲಿ ಸೋಲಿಸಿ ಜಯಶಾಲಿಯಾಗಿ ಹೊರಹೊಮ್ಮಿತು.

ಬಹುಮಾನ ವಿತರಣಾ ಸಮಾರಂಭದಲ್ಲಿ ನಿವೃತ್ತ ಡಿಸಿಎಫ್ ಎ.ಟಿ. ಪೂವಯ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕೆ.ನೀತಾ ಕುಶಾಲಪ್ಪ, ಕೊಡವ ಸಮಾಜ ಮೈಸೂರು ಅಧ್ಯಕ್ಷ ಪಿ.ಎ.ಗಣಪತಿ, ಕ್ಲಬ್ ಉಪಾಧ್ಯಕ್ಷ ಎಂ.ಪ್ರಕಾಶ್ ಬೆಳ್ಳಿಯಪ್ಪ, ಕಾರ್ಯದರ್ಶಿ ಎ.ಪೊನ್ನಣ್ಣ ಸೇರಿದಂತೆ ಕ್ಲಬ್‌ನ ಪದಾಧಿಕಾರಿಗಳು ಹಾಗೂ ಇತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಕಿ (ತ) + ಹಾಟ್‌ಸ್ಪಾಟ್ (ತ)	2+2 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
---	---

ಮಹಾಜನ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನ 'ಮಹಾ ಅನುಬಂಧ'

ವಿದ್ಯಾಸಂಸ್ಥೆಯಲ್ಲಿ ಓದಿದ 50 ಮಂದಿಗೆ ಸನ್ಮಾನ



ಹಿರಿಯ ವಿದ್ಯಾರ್ಥಿಗಳ ಸಮ್ಮಿಲನದ 'ಮಹಾ ಅನುಬಂಧ'–2026ರ ಕಾರ್ಯಕ್ರಮ ಭಾನುವಾರ ನಡೆಯಿತು.

ಮೈಸೂರು, ಜ.25(ಎಸ್‌ಪಿಎನ್)– ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ವಿದ್ಯಾಸಂಸ್ಥೆಯ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನದ 'ಮಹಾ ಅನುಬಂಧ'–2026ರ ಕಾರ್ಯಕ್ರಮ ಭಾನುವಾರ ನಡೆಯಿತು. ಈ ವೇಳೆ ಸಂಸ್ಥೆಯ 50 ಹಿರಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪುಣೆ ಮತ್ತು ತಿರುಪತಿಯ ಐಐಎಸ್‌ಇಆರ್‌ನ ಮಾಜಿ ನಿರ್ದೇಶಕ ಪ್ರೊ.ಕೆ. ಎನ್. ಗಣೇಶ್, ಮಹಾಜನ ವಿದ್ಯಾ ಸಂಸ್ಥೆಯ ಬೆಳವಣಿಗೆ ಹಿಂದೆ ಮಾಜಿ ಅಧ್ಯಕ್ಷ ಆರ್. ವಾಸುದೇವಮೂರ್ತಿ ಸೇರಿದಂತೆ ಇತರೆ ಶೈಕ್ಷಣಿಕ ತಜ್ಞರ ಪ್ರಮುಖ ಪಾತ್ರವಿದೆ. ಆರ್. ವಾಸುದೇವ ಮೂರ್ತಿ ಅವರು, ಹಲವು ವರ್ಷಗಳ ಕಾಲ ಅಧ್ಯಕ್ಷರಾಗಿ, ಸಮಾಜ ಸೇವಕರಾಗಿ ಮೈಸೂರಿನಲ್ಲಿ ಸೇವೆ ಸಲ್ಲಿಸಿದ್ದಾರೆ. ಹಾಗಾಗಿ ಈ ಸಂಸ್ಥೆ ದೊಡ್ಡ ಮಟ್ಟದ ಬೆಳವಣಿಗೆಯಾಗಿದೆ ಎಂದರು.

ನೂತನ ಮೈಸೂರು ವಿವಿ ಕುಲಪತಿ ಪ್ರೊಎನ್. ಕೆ.ಲೋಕನಾಥ್ ಮಾತನಾಡಿ, ಮಹಾಜನ ವಿದ್ಯಾಸಂಸ್ಥೆ ಸ್ಥಾಪನೆಯಾಗಿ 88 ವರ್ಷಗಳು ಕಳೆದಿವೆ. ಈ ಸಂಸ್ಥೆ ಬೆಳವಣಿಗೆಯ ಹಿಂದೆ ಅನೇಕ ಹಿರಿಯರ ಶ್ರಮವಿದೆ ಎಂದರು.

ನಾನು ಈ ವಿದ್ಯಾಸಂಸ್ಥೆಯಲ್ಲಿ ಒಂದು ವರ್ಷ ಉಪನ್ಯಾಸಕನಾಗಿ ಕೆಲಸ ಮಾಡಿದ್ದೇನೆ. ಆ ಸಮಯದಲ್ಲಿ ಸಂಸ್ಥೆ ನೀಡಿದ ಸಹಕಾರವನ್ನು ಮರೆಯುವುದಿಲ್ಲ. ಒಂದು ಸಂಸ್ಥೆಗೆ 88 ವರ್ಷ ಪೂರೈಸಿರುವುದು ಸಾಮಾನ್ಯ ಸಂಗತಿಯಲ್ಲ. ಇದರ ಹಿಂದೆ ಅನೇಕ ಉಪನ್ಯಾಸಕರು, ಆಡಳಿತ ಮಂಡಳಿಯ ಅಧ್ಯಕ್ಷರು, ನಿರ್ದೇಶಕರ ಶ್ರಮವಿದೆ ಎಂದರು.

ಒಂದು ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ ಓದು ಮುಗಿಸಿದ ಬಳಿಕ ಆ ಸಂಸ್ಥೆಯಲ್ಲಿ ಓದಿದ್ದೆ ಎಂಬುದೇ ಹಳೆಯ ವಿದ್ಯಾರ್ಥಿಗಳಿಗೆ ಹೆಮ್ಮೆಯ ವಿಷಯ. ಈ ವೇದಿಕೆಯಲ್ಲಿ ಓದಿದ ಹಲವು ವಿದ್ಯಾರ್ಥಿಗಳು ಬೇರೆ ಬೇರೆ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಉನ್ನತ ಸ್ಥಾನದಲ್ಲಿದ್ದಾರೆ. ಅವರೆಲ್ಲಾ ಸೇರಿ 'ಮಹಾ ಅನುಬಂಧ'' ಶೀರ್ಷಿಕೆಯಡಿ ಒಂದಾಗಿರುವುದು ಸಂತೋಷ ವಿಷಯ ಎಂದರು.

ಈ ಸಂಸ್ಥೆ ಸ್ಥಾಪನೆಯಾಗಿ 88 ವರ್ಷಗಳು ತುಂಬಿದ್ದು, ನರ್ಸರಿಯಿಂದ ಸ್ನಾತಕೋತ್ತರ ಪದವಿಯವರೆಗೆ ಲಕ್ಷಾಂತರ ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ದೇಶ–ವಿದೇಶಗಳಲ್ಲಿ ನೆಲೆಸಿ ಉನ್ನತ ಸ್ಥಾನದಲ್ಲಿದ್ದಾರೆ. ಜಗತ್ತಿನಾದ್ಯಂತ ಬೆರೆತು ಹೋಗಿರುವ ಮಹಾಜನ ಹಿರಿಯ ವಿದ್ಯಾರ್ಥಿಗಳ ಸಮಾಗಮಕ್ಕೆ ಒಂದು ವ್ಯವಸ್ಥಿತ ವೇದಿಕೆಯನ್ನು ವಿದ್ಯಾಸಂಸ್ಥೆ ಒದಗಿಸಿ ಹಿರಿಯ ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಲು ಮಹಾ ಅನುಬಂಧ –2026ಕ್ಕೆ ಚಾಲನೆ ನೀಡಿರುವುದು ಸಂತೋಷದ ವಿಷಯ ಎಂದರು.

ಈ ವೇಳೆ ಮಹಾಜನ ವಿದ್ಯಾಸಂಸ್ಥೆಗಾಗಿ ದುಡಿದ ನಿವೃತ್ತ ಉಪನ್ಯಾಸಕರು, ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಮಹಾಜನ ವಿದ್ಯಾ ಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಹಿರಿಯ ವಿದ್ಯಾರ್ಥಿ ಎನ್.ರಾಮಾನುಜ, ನಟ ಕಾರ್ತಿಕ್ ಮಹೇಶ್, ಗಾಯಕಿ ಅನನ್ಯಭಟ್, ಜಾನಪದ ಗಾಯಕ ಡಾ.ಅಮ್ಮ ರಾಮಚಂದ್ರ ಉಪಾಧ್ಯಕ್ಷ ಬಿ.ಎಸ್. ರವಿಕುಮಾರ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಖಜಾಂಜಿ ಎಸ್.ಕೆ.ಸಂಜಯ್ ಉಪಸ್ಥಿತರಿದ್ದರು.

Reg. No. KA/SK/MYS: 72/2024-26/RMS-MYS

ಮೈಸೂರಲ್ಲಿ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆ

58.700 ಕೆಜಿ ಹಾಲು ಕರೆದ ಬೆಂಗಳೂರಿನ ಹಸುವಿಗೆ ಪ್ರಥಮ ಸ್ಥಾನ

ಕೆ.ಜಿ.ಕೊಪ್ಪಲಿನ ಹಸು 55.250 ಕೆ.ಜಿ. ಹಾಲು ಕರೆದು ದ್ವಿತೀಯ ಬಹುಮಾನ



ಮೈಸೂರಿನ ಜೆ.ಕೆ.ಮೈದಾನದಲ್ಲಿ ನಡೆದ ಎರಡು ದಿನಗಳ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಬೆಂಗಳೂರಿನ ರಾಜಾಜಿನಗರದ ಕೌಶಿಕ್ ಡೈರಿ ಫಾರಂನ ಪೃಥ್ವಿ ಪ್ರಥಮ ಬಹುಮಾನ ಪಡೆದರು.

ಮೈಸೂರು, ಜ.25(ವಿವಿಹೆಚ್)– ಹಿರಿಯ ನಟ ದಿವಂಗತ ತೂಗುದೀಪ ಶ್ರೀನಿವಾಸ ಸ್ಮರಣಾರ್ಥ ಮೈಸೂರು ನಗರ ಗೋಪಾಲಕರ ಸಂಘ ಮತ್ತು ಪಶು ಸಂಗೋಪನಾ ಇಲಾಖೆ ಸಹಯೋಗದಲ್ಲಿ ಶಾಸಕ ಕೆ.ಹರೀಶ್ ಗೌಡ ನೇತೃತ್ವದಲ್ಲಿ ನಗರದ ಜೆ.ಕೆ.ಮೈದಾನದಲ್ಲಿ ನಡೆದ ಎರಡು ದಿನಗಳ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಬೆಂಗಳೂರಿನ ರಾಜಾಜಿನಗರದ ಕೌಶಿಕ್ ಡೈರಿ ಫಾರಂನ ಪೃಥ್ವಿ ಪ್ರಥಮ ಬಹುಮಾನ ಪಡೆದು ದಾಖಲೆಯ ಗೆಲುವು ದಾಖಲಿಸಿದರು.

ಬರೊಬ್ಬರಿ 58.700 ಕೆಜಿ ಹಾಲು ಕರೆಯುವ ಮೂಲಕ ರಾಜ್ಯದಲ್ಲಿ ಇದುವರೆಗೆ ಅಧಿಕ ಹಾಲು ಕರೆದ ಹಸು ಎಂಬ ಕೀರ್ತಿಗೆ ಪೃಥ್ವಿ ಅವರ ಹಸು ಭಾಜನವಾಯಿತು. 55.250 ಕೆಜಿ ಹಾಲು ನೀಡಿದ ಮೈಸೂರಿನ ಕೆ.ಜಿ.ಕೊಪ್ಪಲಿನ ಚೌಡೇಶ್ವರಿ ಡೈರಿ ಫಾರಂನ ದಿನೇಶ್ ಗೌಡ ಅವರ ಹಸು ದ್ವಿತೀಯ ಬಹುಮಾನ ಪಡೆಯಿತು.

ಅನೇಕಲ್ ತಾಲ್ಲೂಕಿನ ಕಗ್ಗಲೀಪುರದ ತನುಶ್ ಡೈರಿ ಫಾರಂನ ರಾಮಚಂದ್ರರೆಡ್ಡಿ ಒಡೆತನ ಹಸು 52.400 ಕೆಜಿ ಹಾಲು ಕರೆದು ತೃತೀಯ ಬಹುಮಾನ ಪಡೆಯಿತು. 51 ಕೆಜಿ ಕರೆದ ಪಡುವಾರಹಳ್ಳಿ ಹರೀಶ್ ನಾಲ್ಕು ಮತ್ತು 51.050 ಕೆಜಿ ಹಾಲು ಕರೆದ ಮೈಸೂರಿನ ಪುರುಷೋತ್ತಮ್ ಐದನೇ ಬಹುಮಾನ ಪಡೆದುಕೊಂಡಿತು.

ಪ್ರಥಮ ಬಹುಮಾನ ಪಡೆದ ಹಸುವಿಗೆ ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು 1.50 ಲಕ್ಷ ರೂ. ಬಹುಮಾನ ನೀಡಿದರೆ, ತೊಣಚಿಕೊಪ್ಪಲಿನ ಯು.ಜವರಯ್ಯ, ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ ಮತ್ತು ಮಂಡ್ಯದ ಹೊಂಬಾಳೆ ಫಾರ್ಮ್‌ನ ಮನು ದ್ವಿತೀಯ ಬಹುಮಾನವಾಗಿ 1 ಲಕ್ಷ ರೂ. ಮತ್ತು ತೃತೀಯ ಬಹುಮಾನವಾಗಿ ಕೋಲಾರದ ವೆಂಕಟೇಶ್ ಮತ್ತು ಸುಬ್ರಹ್ಮಣ್ಯ 75 ಸಾವಿರಗಳನ್ನು ನೀಡಿದರು. ರಾಜ್ಯದ ನಾನಾ ಮೂಲಗಳಿಂದ 18 ಮಂದಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಚಾಮರಾಜ ವಿಧಾನ ಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ, ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಮಾಜಿ ಮೇಯರ್ ಅನಂತು, ಗೋಪಾಲಕರ ಸಂಘದ ಕಾರ್ಯದರ್ಶಿ ಜಯದೇವ, ದೇವನಹಳ್ಳಿ ವೇಣು ಗೋಪಾಲಸ್ವಾಮಿ, ಗೋಪಾಲಕರ ಸಂಘದ ಅಧ್ಯಕ್ಷ ಕೃಷ್ಣಪ್ಪ, ಪಶು ಸಂಗೋಪನೆ ಇಲಾಖೆಯ ಉಪ ನಿರ್ದೇಶಕ ಡಾ.ನಾಗರಾಜು, ಡಾ.ಎಂ.ಸಿ. ಪೂರ್ಣಾನಂದ, ಪಂಜಾಬ್‌ನ ಲಕ್ವೀರ್ ಸಿಂಗ್, ಡಾ.ರೇಖಾ ಅರುಣ್, ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ ಉಪಸ್ಥಿತರಿದ್ದರು.

ಬೆಂಗಳೂರು ಅರಮನೆ ಮೈದಾನದಲ್ಲಿ ಜ.29ರಿಂದ ವೀರಶೈವ ಲಿಂಗಾಯತ ಜಾಗತಿಕ ವಾಣಿಜ್ಯ ಸಮಾವೇಶ

ಮೈಸೂರು, ಜ.25(ಜಿಎ)– ಅಂತರ ರಾಷ್ಟ್ರೀಯ ಲಿಂಗಾಯತ ಯುವ ವೇದಿಕೆ ವತಿಯಿಂದ ಜ.29 ರಿಂದ ಫೆ. 1 ರವರೆಗೆ ಬೆಂಗಳೂರು ಅರಮನೆ ಮೈದಾನದ ವೈಟ್ ಪೆಟಲ್ಸ್ ಆವರಣದಲ್ಲಿ ವೀರಶೈವ ಲಿಂಗಾಯತ ಜಾಗತಿಕ ವಾಣಿಜ್ಯ ಸಮಾವೇಶ ಆಯೋಜಿಸಲಾಗಿದೆ ಎಂದು ಮೈಸೂರು ಘಟಕದ ಅಧ್ಯಕ್ಷ ಕಿರಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶವನ್ನು ಜ.29 ರಂದು ಸಂಜೆ 4.30ಕ್ಕೆ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಉದ್ಘಾಟಿಸುವರು. ಸಚಿವರಾದ ಎಂ.ಬಿ. ಪಾಟೀಲ್, ಈಶ್ವರ ಖಂಡ್ರೆ, ಶರಣ ಬಸಪ್ಪ ದರ್ಶನಾಪುರ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಉದ್ಯಮಿ ವಿಜಯ ಸಂಕೇಶ್ವರ, ಬಿ.ಎಂ.ಜಯಶಂಕರ್, ಡಾ. ಶರಣ್ ಪಾಟೀಲ್, ಬಾಲಚಂದ್ರಸಿಂಗ್ ರಾವ್ ರಾಣೆ, ರಬೀಂದ್ರನಾಥ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಫೆ.1 ರಂದು ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಬಸವತತ್ವ ಪೀಠದ ಶ್ರೀ ಬಸವ ಮರುಳಸಿದ್ಧ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಚಿವ ಡಾ.ಶರಣ್ ಪ್ರಕಾಶ್ ಪಾಟೀಲ್, ಶಾಸಕ ವಿಜಯಾನಂದ ಎಸ್.ಕಾಶಪ್ಪನವರ್, ನಿವೃತ್ತ ಪೊಲೀಸ್ ಅಧಿಕಾರಿ ಶಂಕರ್ ಬಿದರಿ, ಶಾಸಕ ಮುರುಗೇಶ್ ನಿರಾಣಿ, ನವೀನ್, ರಾಣಿ ಸತೀಶ್, ಕೆ.ಎಸ್.ನವೀನ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಕಳೆದ ಬಾರಿ ಮೈಸೂರಿನಲ್ಲಿ ಸಮಾವೇಶ ನಡೆದು ಸುಮಾರು 130 ಕೋಟಿ ರೂ.ಗಳಷ್ಟು ವ್ಯವಹಾರ ನಡೆದಿದೆ. ಸುಮಾರು 260 ಮಳಿಗೆಗಳು ಇರಲಿವೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹೆಚ್.ಎಸ್. ವೀರೇಶ್, ಎಂ.ಮಹೇಶ್, ತೀರ್ಥಸ್ವಾಮಿ, ಸಂತೋಷ್, ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಜ.27 ರಂದು ಫಾರ್ಮಸಿ ವಿದ್ಯಾರ್ಥಿಗಳಿಗೆ 'ಕೌಶಲ್ಯ ಅಭಿವೃದ್ಧಿ' ಕಾರ್ಯಕ್ರಮ

ಮೈಸೂರು, ಜ.25– ಫಾರ್ಮಸಿ ವಿದ್ಯಾರ್ಥಿಗಳಿಗೆ 'ಕೌಶಲ್ಯ ಅಭಿವೃದ್ಧಿ' ಕಾರ್ಯಕ್ರಮವನ್ನು ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಫಾರ್ಮಸಿ ಕಾಲೇಜಿನಲ್ಲಿ ಜ. 27 ರಂದು ಕಾಲೇಜಿನ ಪ್ರೊ.ಎಸ್. ಚಿನ್ನಸ್ವಾಮಿ ಸೆಟ್ಟಿ ಸಮ್ಮೇಳನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಮೈಸೂರು ವಿ.ವಿಯ ವಿಶ್ರಾಂತ ಕುಲಪತಿ ಪ್ರೊ. ಟಿ.ಕೆ. ಉಮೇಶ್, ಕಾಲೇಜಿನ ಗೌರವ ಕಾರ್ಯದರ್ಶಿ ಆರ್.ದಿನೇಶ್, ಪ್ರಾಂಶುಪಾಲರಾದ ಡಾ.ಹನುಮಂತಚಾರ್ ಜೋಶಿ ಭಾಗವಹಿಸಲಿದ್ದಾರೆ.

ಮೈಸೂರು ಅರಮನೆಗೆ ಭೇಟಿ ನೀಡಿದ್ದ ವಿದೇಶಿಯರೊಂದಿಗೆ ವಿದ್ಯಾರ್ಥಿಗಳ ಸಂವಾದ

ಪ್ರವಾಸಿ ಮಾರ್ಗದರ್ಶಿಗಳಾಗಿ ಮಾಹಿತಿ ಹಂಚಿಕೆ



ರಾಷ್ಟ್ರೀಯ ಪ್ರವಾಸೋದ್ಯಮ ದಿನದ ಅಂಗವಾಗಿ ಭಾನುವಾರ ಮೈಸೂರು ಅರಮನೆಗೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರೊಂದಿಗೆ ಟೆರೆಷಿಯನ್ ಕಾಲೇಜಿನ ಇತಿಹಾಸ ವಿಭಾಗದ ವಿದ್ಯಾರ್ಥಿಗಳು ಸಂವಾದ ನಡೆಸಿ, ಮಾರ್ಗದರ್ಶಕರಾಗಿ ಮಾಹಿತಿ ನೀಡಿದರು.

ಮೈಸೂರು, ಜ.25(ಎಂಟಿವೈ)– ರಾಷ್ಟ್ರೀಯ ಪ್ರವಾಸೋದ್ಯಮ ದಿನಾಚರಣೆಯ ಹಿನ್ನೆಲೆ ಮೈಸೂರು ಅರಮನೆಗೆ ಭಾನುವಾರ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರೊಂದಿಗೆ ಟೆರೆಷಿಯನ್ ಕಾಲೇಜಿನ ಇತಿಹಾಸ ವಿಭಾಗದ ವಿದ್ಯಾರ್ಥಿಗಳು ಸಂವಾದ ನಡೆಸಿ, ಪ್ರವಾಸಿ ಮಾರ್ಗದರ್ಶಕರಾಗಿ ಮಾಹಿತಿ ನೀಡಿ ಗಮನ ಸೆಳೆದರು.

ವಿಶ್ವವಿಖ್ಯಾತ ಮೈಸೂರು ಅರಮನೆ ವೀಕ್ಷಣೆಗಾಗಿ ಇಂದು ಬೆಳಗ್ಗೆ ಯುಕೆ, ಸ್ಪೇನ್, ಕೆನಡಾ, ಯೆಮೆನ್, ಸ್ಕಾಟ್ಲೆಂಡ್, ಜೆಕ್ ರಿಪಬ್ಲಿಕ್, ಫ್ರಾನ್ಸ್, ತೈವಾನ್ ಮತ್ತು ಇಂಗ್ಲೆಂಡ್‌ನಿಂದ ಆಗಮಿಸಿದ್ದ 31 ವಿದೇಶಿ ಪ್ರವಾಸಿಗರೊಂದಿಗೆ ಹನ್ನೊಂದು ವಿದ್ಯಾರ್ಥಿಗಳು ಸಂವಾದ ನಡೆಸಿದರು.

ಬಳಿಕ ವಿದೇಶಿ ಪ್ರವಾಸಿಗರಿಗೆ ಮೈಸೂರಿನ ಇತಿಹಾಸ, ಮೈಸೂರು ಒಡೆಯರ್ ರಾಜವಂಶದ ಪರಂಪರೆ, ಅರಮನೆಯ ವಾಸ್ತುಶಿಲ್ಪದ ಮಹತ್ವ ನಾಡ ಹಬ್ಬ ದಸರಾ ಉತ್ಸವದ ಸಾಂಸ್ಕೃತಿಕ ಮಹತ್ವವನ್ನು ಹಾಗೂ ಈ ಪ್ರದೇಶದ ವಿಶೇಷತೆ ಕುರಿತು ಮಾಹಿತಿ ನೀಡಿದರು.

ಕಾಲೇಜಿನ ಇತಿಹಾಸ ವಿಭಾಗದ ವಿದ್ಯಾರ್ಥಿಗಳಿಗೆ ಸಂವಹನ ಕೌಶಲ್ಯ, ಆತ್ಮವಿಶ್ವಾಸ ಮೂಡಿಸುವ ಮತ್ತು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಪ್ರಚಾರದ ಬಗ್ಗೆ ಹೆಚ್ಚು ಜ್ಞಾನ ಸಂಪಾದಿಸುವ ನಿಟ್ಟಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದೇಶಿ ಪ್ರವಾಸಿಗರಿಗೆ ಮೈಸೂರಿನ ಪಾರಂಪರಿಕತೆ ಬಗ್ಗೆ ಮಾಹಿತಿ ಒದಗಿಸುವ ಮೂಲಕ ಗಮನ ಸೆಳೆದರು.

ವಿದ್ಯಾರ್ಥಿಗಳು ನೀಡಿದ ಮಾಹಿತಿ, ಮಾರ್ಗದರ್ಶನದಿಂದ ವಿದೇಶಿ ಪ್ರವಾಸಿಗರು ಸಂತೋಷ ಪಟ್ಟು, ಮೈಸೂರಿನ ಬಗ್ಗೆ ನೀಡಿದ ಮಾಹಿತಿಗೆ ತಲೆದೂಗಿದರು. ಈ ಸಂದರ್ಭದಲ್ಲಿ ಟೆರೆಷಿಯನ್ ಕಾಲೇಜಿನ ಪ್ರಾಂಶುಪಾಲರಾದ ಡಾ.ರೋಹಿಣಿ, ಐಕ್ಯುಎಸಿ ಸಂಯೋಜಕರಾದ ವಿವೇಕ್ ಚಾರ್ಲ್ಸ್ ಮತ್ತು ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕಿಯಾದ ಸೋನಿಯಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.